بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

ಪವಿತ್ರ ಖುರ್‌ಆನ್ ವಿಶೇಷ ಸಂಚಿಕೆ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

# ಕನ್ನಡ ಬದರ್ ವಾರ ಪತ್ರಿಕೆ

Weekly BADAR Qadian KANNADA

ಸಂಪುಟ: 04

ವಾರ್ಷಿಕ ಶುಲ್ಕ ರೂ.600/-

ಸಂಚಿಕೆ 51–52

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್

www.akhbarbadr.in

Postal Reg. No: 3000039689/2023-25 21–28 ಡಿಸೆಂಬರ್ 2023, 21–28 ಫತಹ್ 1402 ಹಿಜರಿ ಶಮ್‌ಸಿ, 07–14 ಜಮಾದಿಉಸ್ಸಾನಿ 1445 ಹಿಜರಿ ಖಮರಿ.


## ಅಲ್ಲಾಹನ ಉಪದೇಶ

اِنَّ ھٰذَا الۡقُرۡاٰنَ یَہۡدِیۡ لِلَّتِیۡ ہِیَ اَقۡوَمُ وَیُبَشِّرُ الۡمُؤۡمِنِیۡنَ الَّذِیۡنَ

یَعۡمَلُوۡنَ الصّٰلِحٰتِ اَنَّ لَہُمۡ اَجۡرًا کَبِیۡرًا ﴿۱۰﴾ (سورۃ بنی اسرائیل آیت 10)

ಅನುವಾದ: ದಿಟವಾಗಿಯೂ ಈ ಖುರ್‌ಆನ್ ಅತ್ಯಂತ ಋಜುವಾದ ಮಾರ್ಗದರ್ಶನ ಮಾಡುತ್ತದೆ ಹಾಗೂ ಸತ್ಕರ್ಮ ಗೈಯುವ ವಿಶ್ವಾಸಿಗಳಿಗೆ ಬಹಳ ದೊಡ್ಡ ಪ್ರತಿಫಲವಿದೆಯೆಂದು ಶುಭವಾರ್ತೆಯನ್ನು ಸಹ ಅರುಹುತ್ತದೆ.

(ಬನೀ ಇಸ್ರಈಲ್: 10)

## ಹಝ್ರತ್ ಪೈಗಂಬರ್(ಸ)ರ ಉಪದೇಶ


عَنۡ عُثۡمَانَ بۡنِ عَفَّانَ رَضِیَ اللّٰہُ عَنۡہُ قَالَ

قَالَ رَسُوۡلُ اللّٰہِ صَلَّی اللّٰہُ عَلَیۡہِ وَسَلَّمَ خَیۡرُکُمۡ مَنۡ تَعَلَّمَ الۡقُرۡاٰنَ وَعَلَّمَہٗ

(بخاری، کتاب فضائل القرآن، باب خیرکم من تعلم القرآن)

ಅನುವಾದ: ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು, "ನಿಮ್ಮಲ್ಲಿ ಪವಿತ್ರ ಖುರ್‌ಆನ್ ಅನ್ನು ಕಲಿಯುವವರು ಮತ್ತು ಅದನ್ನು ಇತರರಿಗೆ ಕಲಿಸುವವರು ಉತ್ತಮರಾಗಿದ್ದಾರೆ.

## **ಅಲ್‌ಖೈರು ಕುಲ್ಲುಹು ಫಿಲ್ ಖುರ್‌ಆನ್** ಎಲ್ಲಾ ಒಳಿತುಗಳು ಪವಿತ್ರ ಖುರ್‌ಆನ್‌ನಲ್ಲಿದೆ.




ಸಯ್ಯಿದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಅಲ್ಲಾಹನು ನನ್ನನ್ನು ಸಂಭೋಧಿಸಿ ಹೀಗೆ ಹೇಳಿದನು. **ಅಲ್‌ಖೈರು ಕುಲ್ಲುಹು ಫಿಲ್ ಖುರ್‌ಆನ್** ಎಲ್ಲಾ ಒಳಿತುಗಳು ಪವಿತ್ರ ಖುರ್‌ಆನ್‌ನಲ್ಲಿದೆ. ಈ ಮಾತು ಸತ್ಯವೇ ಆಗಿದೆ. ಇತರ ವಸ್ತುಗಳಿಗೆ ಅದರ ಮೇಲೆ ಅಗ್ರಸ್ಥಾನ ನೀಡುವವರ ಬಗ್ಗೆ ಖೇದವಾಗುತ್ತದೆ. ನಿಮ್ಮ ಎಲ್ಲಾ ಜಯಗಳ ಮತ್ತು ಮೋಕ್ಷದ ಮೂಲವು ಪವಿತ್ರ ಖುರ್‌ಆನ್ ಆಗಿದೆ. ಧಾರ್ಮಿಕವಾದ ಯಾವುದೇ ಅವಶ್ಯಕತೆ ಪವಿತ್ರ ಖುರ್‌ಆನ್ ಮೂಲಕ ಪರಿಹರಿಸಲ್ಪಡದೆ ಇರುವುದಿಲ್ಲ. ಪುನರುತ್ಥಾನದ ದಿನದಂದು ನಿಮ್ಮ ವಿಶ್ವಾಸದ ಬಗ್ಗೆ ಸತ್ಯವೂ ಅಸತ್ಯವೂ ಎಂದು ಸಾಕ್ಷ್ಯ ನೀಡುವುದು ಪವಿತ್ರ ಖುರ್‌ಆನ್ ಆಗಿದೆ. ನಿಮಗೆ ನೇರವಾಗಿ ಮಾರ್ಗದರ್ಶನ ನೀಡಬಲ್ಲ ಗ್ರಂಥ ಪವಿತ್ರ ಖುರ್‌ಆನ್ ಹೊರತು ಬೇರೆ ಯಾವುದೂ ಆಕಾಶದ ಕೆಳಗೆ ಇಲ್ಲ. ದೇವನು ಪವಿತ್ರ ಖುರ್‌ಆನನ್ನು ನಿಮಗೆ ದಯಪಾಲಿಸಿ ನಿಮ್ಮ ಮೇಲೆ ಬಹಳ ಉಪಕಾರ ಮಾಡಿರುವನು. ನಾನು ಸತ್ಯವಾಗಿ ಹೇಳುತ್ತೇನೆ. ನಿಮಗೆ ಅವತ್ತೀರ್ಣಗೊಳಿಸಲ್ಪಟ್ಟ ಗ್ರಂಥ ಕ್ರೈಸ್ತರಿಗೆ ಅವತೀರ್ಣಗೊಳಿಸಲ್ಪಟ್ಟಿದ್ದರೆ ಅವರು ನಾಶ ಹೊಂದುತ್ತಿರಲಿಲ್ಲ. ನಿಮಗೆ ನೀಡಲಾದ ಈ ಅನುಗ್ರಹ ಮತ್ತು ಮಾರ್ಗದರ್ಶನವನ್ನು ತೌರಾತ್‌ಗೆ ಬದಲಾಗಿ ಯಹೂದಿಯರಿಗೆ ನೀಡಿರುತ್ತಿದ್ದರೆ ಅವರ ಕೆಲವು ಪಂಗಡಗಳು ಪುನರುತ್ಥಾನವನ್ನು ನಿರಾಕರಿಸುತ್ತಿರಲಿಲ್ಲ. ಆದುದರಿಂದ ನಿಮಗೆ ನೀಡಲ್ಪಟ್ಟ ಈ ಅನುಗ್ರಹವನ್ನು ಗೌರವಿಸಿರಿ. ಇದು ಅತ್ಯಂತ ಪ್ರಿಯಕರ ಅನುಗ್ರಹವಾಗಿದೆ. ಇದು ಬಹಳ ದೊಡ್ಡ ಸಂಪತ್ತಾಗಿದೆ. ಪವಿತ್ರ ಖುರ್‌ಆನ್ ಅವತೀರ್ಣಗೊಳ್ಳದಿರುತ್ತಿದ್ದರೆ ಸಕಲ ಲೋಕವು ಕೊಳಕು ಮಾಂಸದ ಪಿಂಡದ ಹಾಗೆ ಆಗುತ್ತಿತ್ತು. ಪವಿತ್ರ ಖುರ್‌ಆನ್ ಎಂತಹ ಗ್ರಂಥವೆಂದರೆ ಅದರ ಎದುರಿಗೆ ಇತರ ಎಲ್ಲಾ ಮಾರ್ಗದರ್ಶನಗಳು ನಿರರ್ಥಕವಾಗಿವೆ.

**(ಕಿಶ್ತೀ ನೂಹ್, ರೂಹಾನಿ ಖಝಾಈನ್, ಸಂಪುಟ–19, ಪುಟ–26)**

## ನೀವು ಪವಿತ್ರ ಖುರ್‌ಆನ್ ಅನ್ನು ಎಷ್ಟು ಹೆಚ್ಚು ಓದುತ್ತೀರೋ ಅಷ್ಟು ಹೆಚ್ಚು ಆನಂದ ಹಾಗೂ ನೆಮ್ಮದಿ ಪಡೆಯುತ್ತೀರಿ




ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರಝಿಯಲ್ಲಾಹು ಅನ್‌ಹು) ಹೇಳುತ್ತಾರೆ:

ನಾನು ಪ್ರಪಂಚದ ಅನೇಕ ಪುಸ್ತಕಗಳನ್ನು ಓದಿದ್ದೇನೆ ಮತ್ತು ಅತೀ ಹೆಚ್ಚು ಸಲ ಓದಿದ್ದೇನೆ, ಆದರೆ ಓದುವ, ಅಧ್ಯಯನ ಮಾಡುವ ಮತ್ತು ಮತ್ತೆ ಮತ್ತೆ ಯೋಚಿಸುವ ಮೂಲಕ ದುಃಖಕ್ಕೆ ಕಾರಣವಾಗದ ಸಾಂತ್ವನ ಹಾಗೂ ಸಂತೋಷ ನಿಡುವ, ಅಂತಹ ಪುಸ್ತಕವನ್ನು ನಾನು ಜಗತ್ತಿನಲ್ಲಿ ನೋಡಿಲ್ಲ. ಹೌದು ನನ್ನ ವಯಸ್ಸು ನನ್ನ ಅಧ್ಯಾಯನಶಿಲ ಸವಭಾವ ಪುಸ್ತಕಗಳ ಮೇಲಿನ ನನ್ನ ಓಲವು, ಒಳನೋಟ ಮತ್ತು ಗಣನೀಯ ಅನುಭವದ ಆಧಾರದ ಮೇಲೆ ಅಂತಹ ಯಾವುದೇ ಪುಸ್ತಕವಿಲ್ಲ ಎಂದು ಹೇಳಲು ನನಗೆ ಧೈರ್ಯವನ್ನು ನೀಡುತ್ತದೆ ಎಂದು ನಿಮಗೆ ಮತ್ತೊಮ್ಮೆ ಭರವಸೆ ನಿಡುತ್ತೇನೆ. ಅಂತಹ ಪುಸ್ತಕ ಇದೆ ಎಂದಾದರೆ ಅದು ಒಂದೇ ಒಂದು ಮಾತ್ರ, ಅದು ಯಾವ ಪುಸ್ತಕ? **ಝಾಲಿಕಲ್ ಕಿತಾಬು ಲಾ ರೈಬ ಫೀಹೀ** ಎಂತಹ ಪ್ರೀಯವಾದ ಹೆಸರಾಗಿದೆ. ಪವಿತ್ರ ಖುರ್‌ಆನ್ ಅನ್ನು ಹೊರತುಪಡಿಸಿ ಅಂತಹ ಯಾವುದೇ ಪುಸ್ತಕವಿಲ್ಲ ಎಂದು ನಾನು ನಿಜವಾಗಿ ಹೇಳುತ್ತೇನೆ, ನೀವು ಅದನ್ನು ಎಷ್ಟು ಹೆಚ್ಚು ಓದುತ್ತೀರೋ ಮತ್ತು ನೀವು ಅದನ್ನು ಹೆಚ್ಚು ಧ್ಯಾನಿದಷ್ಟು ಹೆಚ್ಚು ಸಂತೋಷ ಮತ್ತು ಉತ್ಸಾಹ ಹೆಚ್ಚಾಗುತ್ತದೆ. ಉದಾಸೀನತೆ ತಾಳುವ ಬದಲು ಅದರ ಮೇಲೆ ಸಮಯ ಕಳೆಯಿರಿ. ಕ್ರೀಯಶೀಲರಾಗಲು  ಕನಿಷ್ಠ ಉತ್ಸಾಹ ಬರುತ್ತದೆ ಮತ್ತು ಮನಸ್ಸಿನಲ್ಲಿ ನಂಬಿಕೆ ಮತ್ತು ಭರವಸೆ ಹಗೂ ಆಧ್ಯಾತ್ಮದ ಅಲೆಗಳು ಏರುತ್ತವೆ.

**(ಹಖಾಎಖುಲ್ ಫುರ್ಖಾನ್, ಸಂಪುಟ–1, ಪುಟ–34)**

## ಪವಿತ್ರ ಖುರ್‌ಆನ್‌ನಲ್ಲಿ ಇರುವಷ್ಟು ಜ್ಞಾನಭರಿತ ಮಾತುಗಳು, ಬೇರೆ ಯಾವುದೇ ಪುಸ್ತಕಗಳಲ್ಲಿ ಇಲ್ಲ



ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹೇಳುತ್ತಾರೆ:

ವಾಸ್ತವವೇನೆಂದರೆ, ಪವಿತ್ರ ಖುರ್‌ಆನ್‌ನ ಯಾವುದೇ ಭಾಗವನ್ನು ರದ್ದುಗೊಳಿಸಲಾಗಿಲ್ಲ ಅದರ ಪ್ರತಿಯೊಂದು ಅಕ್ಷರವೂ ಮಾನ್ಯವಾಗಿರುತ್ತದೆ ಮತ್ತು ಇದು ಪುನರುತ್ಥಾನದ ದಿನದವರೆಗೆ ಉಳಿಯುವ ಶರೀಅತ್ ಅಗಿದೆ. ನಾನು ಒಮ್ಮೆ ಸ್ವಪ್ನದಲ್ಲಿ ಕಂಡಿದ್ದೇನೆಂದರೆ, ನಾನು ಒಬ್ಬರಿಗೆ ಹೀಗೆ ಹೇಳುತ್ತಿದ್ದೇನೆ: ಪವಿತ್ರ ಖುರ್‌ಆನ್‌ನ ಪ್ರತಿಯೊಂದು ಅಕ್ಷರವು ಮತ್ತು ಪ್ರತಿಯೊಂದು ಝೇರ್ ಮತ್ತು ಝಬರ್ ತನ್ನೊಳಗೆ ಒಂದು ಅರ್ಥವನ್ನು ಒಳಗೊಂಡಿದೆ ಮತ್ತು ಪವಿತ್ರ ಖುರ್‌ಆನ್‌ನಲ್ಲಿನ ಒಂದು ಸಣ್ಣ ವ್ಯತ್ಯಾಸದಿಂದ ಅದರ ಅರ್ಥವು ಬದಲಾಗುತ್ತದೆ. ಇದರಲ್ಲಿ ಇರುವಷ್ಟು ಯುಕ್ತಿಯ ಮಾತುಗಳು ಬೇರೆ ಯಾವ ಪುಸ್ತಕಗಳಲ್ಲಿ ಇಲ್ಲ. ಆದರೆ ಇದರ ಜ್ಞಾನ ಪ್ರತಿಯೊಬ್ಬ ವ್ಯಕ್ತಿಗೂ ಎಲ್ಲಾ ಬುದ್ಧಿವಂತಿಕೆಯನ್ನು ಬಹಿರಂಗಪಡಿಸುವುದು ಅನಿವಾರ್ಯವಲ್ಲ. ಹೌದು, ಪ್ರತಿ ಯುಗದಲ್ಲೂ, ಪವಿತ್ರ ಖುರ್‌ಆನ್‌ನ ಕೆಲವು ಹೊಸ ಅರ್ಥಗಳು ಬಹಿರಂಗಗೊಳ್ಳುತ್ತವೆ ಮತ್ತು ಅವುಗಳ ಜೊತೆಗೆ ಕೆಲವು ಹೆಚ್ಚು ಅರ್ಥಗಳು ಇರುತ್ತವೆ ಅವುಗಳನ್ನು ಸರ್ವಶಕ್ತನಾದ ಅಲ್ಲಾಹನು ಮುಂಬರುವವರಿಗೆ ರಹಸ್ಯವಾಗಿ ಇಟ್ಟಿರುತ್ತಾನೆ, ಹೀಗೆ ಈ ಸರಣಿ ಅಂತಿಮ ತೀರ್ಪಿನ ದಿನಸವೆರೆಗೆ ಜಾರಿಯಲ್ಲಿರುತ್ತದೆ. **(ತಫ್ಸೀರ್ ಕಬೀರ್, ಸಂಪುಟ–2, ಪುಟ–98)**

ಪವಿತ್ರ ಖುರ್‌ಆನ್‌ನ ಪ್ರಭಾವದಿಂದ ಸಹಾಬರವರು ಭಯದಿಂದ ಎದ್ದು ಆಕಾಶದಲ್ಲಿ ಹೊಳೆಯುವ ನಕ್ಷತ್ರಗಳಾದರು. ಅವರ ಕುರಿತು ಹಝ್ರತ್ ರಸೂಲುಲ್ಲಾಹ್(ಸ) ರು ನುಡಿದರು: ಅವರಲ್ಲಿ ಪ್ರತಿಯೊಬ್ಬರು ನಿಮ್ಮ ಮಾರ್ಗದರ್ಶಕರಾಗಿರುವರು.

---

ಪವಿತ್ರ ಖುರ್‌ಆನ್‌ನ ರಹಸ್ಯಗಳು ಧರ್ಮನಿಷ್ಠರಿಗೆ ಮಾತ್ರ ಬಹಿರಂಗಗೊಳ್ಳುತ್ತದೆ. ಅದಕ್ಕಾಗಿ ಧರ್ಮನಿಷ್ಠರ ಸಹವಾಸದಿಂದ ಸಮೃದ್ಧವಾಗುವುದು ಸಹ ಅಗತ್ಯವಾಗಿದೆ.

---

ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಅಲ್ಲಾಹನಿಂದ ದಿವ್ಯಜ್ಞಾನ ಪಡೆದು ಏನೆಲ್ಲಾ ವಿವರಿಸಿದ್ದಾರೆ ಅದನ್ನು ನಾವು ನೋಡಬೇಕಾಗಿದೆ. ಅದರತ್ತ ಗಮನ ಕೊಡಬೇಕಾಗಿದೆ.

# ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರ ಬದರ್ ಓದುಗರಿಗಾಗಿ ವಿಶೇಶ ಸಂದೇಶ

ಇಸ್ಲಾಮಬಾದ್, ಯುಕೆ
MA 28–10–2023

ಪ್ರೀತಿಯ ಬದರ್ ವಾರಪತ್ರಿಕೆ ಖಾದಿಯಾನ್‌ನ ಓದುಗರೇ
ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತಹು

ಅಲ್ಹಮ್ದುಲಿಲ್ಲಾಹ್ ಬದರ್ ಪತ್ರಿಕೆಯು "ಪವಿತ್ರ ಖುರ್‌ಆನ್" ವಿಶೇಷ ಸಂಚಿಕೆಯನ್ನು ಪ್ರಕಟಿಸುವ ಸೌಭಾಗ್ಯ ಪಡೆಯುತ್ತಿದೆ. ಅಲ್ಲಾಹನು ಈ ಸಂಚಿಕೆಯನ್ನು ಎಲ್ಲಾ ರೀತಿಯಿಂದಲೂ ಅನುಗ್ರಹಿತನನ್ನಾಗಿ ಮಾಡಲಿ 'ಅಮೀನ್'.

ಈ ಸಂದರ್ಭದಲ್ಲಿ ಸಂದೇಶ ಕಳುಹಿಸಲು ನನ್ನಲ್ಲಿ ಮನವಿ ಮಾಡಲಾಗಿದೆ. ಈ ಸಂದರ್ಭದಲ್ಲಿ ಸಂದೇಶವನ್ನು ಕಳುಹಿಸಲು ನನಗೆ ವಿನಂತಿಸಲಾಗಿದೆ. ಈ ಸಮಯದಲ್ಲಿ ಅಲ್ಲಾಹನು ಪವಿತ್ರ ಖುರ್‌ಆನ್ ಅನ್ನು ಪ್ರಕಟಿಸಲು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಸತ್ಯ ಸೇವಕನನ್ನು ಪವಿತ್ರ ಖುರ್‌ಆನ್ ಅನ್ನು ಪ್ರಕಟಿಸಲು ಮತ್ತು ರಕ್ಷಿಸಲು ಕಳುಹಿಸಿದನು. ಜನರಿಂದ ಮರೆಯಾಗಿರುವ ಜ್ಞಾನವನ್ನು ನಿಮಗೆ(ಅಲೈಹಿಸ್ಸಲಾಮ್) ಕಲಿಸಲಾಗಿದೆ. ನಿಮ್ಮ ಮೂಲಕ ಪವಿತ್ರ ಖುರ್‌ಆನ್‌ನ ಅನುಗ್ರಹಗಳ ಚಿಲುಮೆಯನ್ನು ಜಾರಿಗೊಳಿಸಲಾಗಿದೆ. ಪವಿತ್ರ ಖುರ್‌ಆನ್‌ನ ವಾಕ್ಚಾತುರ್ಯದ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ಪವಿತ್ರ ಖುರ್‌ಆನ್‌ನ ಪವಾಡವೇನೆಂದರೆ ಇದರಲ್ಲಿ ಎಲ್ಲಾ ಪದಗಳನ್ನು ಮುತ್ತುಗಳಂತೆ ಪೋಣಿಸಲಾಗಿವೆ ಮತ್ತು ಅವುಗಳಲ್ಲಿ ಯಾವುದನ್ನೂ ಒಂದು ಸ್ಥಳದಿಂದ ಬೇರೆ ಸ್ಥಳಕ್ಕೆ ಸ್ಥಳಾಂತರಿಸಲಾಗದ ರೀತಿಯಲ್ಲಿ ಅದರ ನಿರ್ದಿಷ್ಟ ಸ್ಥಳದಲ್ಲಿ ಇರಿಸಲಾಗಿದೆ. ಯಾವ ಪದವನ್ನು ಸಹ ಬೇರೆ ಪದದೊಂದಿಗೆ ಬದಲಿಸಲಾಗುವುದಿಲ್ಲ, ಏಕೆಂದರೆ ಅದರೊಂದಿಗೆ ಅದರ ಪ್ರಾಸ ಮತ್ತು ವಾಕ್ಚಾತುರ್ಯದ ಎಲ್ಲಾ ಅಗತ್ಯತೆಗಳನ್ನು ಹೊಂದಿಸಲಾಗಿದೆ."

(ಮಲ್ಫೂಝಾತ್, ಸಂಪುಟ–10, ಪುಟ–173)

ಪವಿತ್ರ ಖುರ್‌ಆನ್ ಪ್ರಪಂಚದ ಸಮುದಾಯಗಳನ್ನು ಒಂದುಗೂಡಿಸಲು ಬಂದಿದೆ ಎಂದು ಹೇಳುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

"ದೇವನು ಮೊದಲು ಪ್ರತಿಯೊಂದು ಸಮುದಾಯಕ್ಕೂ ಪ್ರತ್ಯೇಕ ಸಂವಿಧಾನಗಳನ್ನು ಕಳುಹಿಸಿದನು ಮತ್ತು ನಂತರ ದೇವನು ಒಬ್ಬನೇ ಆಗಿರುವಂತೆ ಪ್ರವಾದಿಯೂ ಒಬ್ಬರಾಗಿರಬೇಕೆಂದು ಬಯಸಿದನು. ಆಗ ಎಲ್ಲರನ್ನು ಒಟ್ಟುಗೂಡಿಸಲು ಪವಿತ್ರ ಖುರ್‌ಆನ್‌ನ್ನು ಅವತರಿಸಿದನು ಮತ್ತು ದೇವನು ಎಲ್ಲಾ ಸಮುದಾಯಗಳನ್ನು ಒಂದೇ ಸಮುದಾಯವಾಗಿ, ಎಲ್ಲಾ ದೇಶಗಳನ್ನು ಒಂದೇ ದೇಶವಾಗಿ ಮತ್ತು ಎಲ್ಲಾ ಭಾಷೆಗಳನ್ನು ಒಂದು ಭಾಷೆಯನ್ನಾಗಿ ಮಾಡುವ ಸಮಯ ಬರಲಿದೆ." (ನಸೀಮ್ ದಾವತ್, ರೂಹಾನಿ ಖಝಾಈನ್, ಸಂಪುಟ–19, ಪುಟ–428)

ವಿವಿಧ ಧರ್ಮಗಳು ಏಕೆ ಬಂದವು ಎಂದು ಜನರು ಹೇಳುತ್ತಾರೆ? ಏಕೆಂದರೆ ಆ ಸಮಯದವರೆಗೆ ಅವರ ಬುದ್ಧಿಶಕ್ತಿ, ಪ್ರಜ್ಞೆ ಮತ್ತು ಅವರ ಕಾಲದಲ್ಲಿದ್ದ ಸಂಪನ್ಮೂಲಗಳು ತುಂಬಾ ಸೀಮಿತವಾಗಿದ್ದವು. ಆದ್ದರಿಂದ ಮೊದಲು ಪ್ರತ್ಯೇಕವಾಗಿ ಕಳುಹಿಸಲಾಗಿದೆ, ಈಗ ಎಲ್ಲರನ್ನು ಒಗ್ಗೂಡಿಸುವ ಸಮಯ ಬಂದಿದ್ದರಿಂದ ಪವಿತ್ರ ಖುರಆನ್‌ನ ರೂಪದಲ್ಲಿ ಪರಿಪೂರ್ಣ ಶರೀಅತ್ ಅನ್ನು ನಮಗೆ ಕಳುಹಿಸಿ ಹೇಳಿದನು: ಇದು ಎಲ್ಲಾ ದೇಶಗಳನ್ನು ಒಂದೇ ದೇಶವನ್ನಾಗಿ ಮಾಡುವುದು, ಮತ್ತು ಎಲ್ಲಾ ಭಾಷೆಗಳನ್ನು ಒಂದೇ ಭಾಷೆಯನ್ನಾಗಿ ಮಾಡುವುದು. ಇಂದು ಜಾಗತಿಕ ಗ್ರಾಮ ಎಂಬ ಪದವನ್ನು ಜಗತ್ತಿನಲ್ಲಿ ಬಳಸಲಾಗುತ್ತದೆ. ಅದರಂತೆ ಇಂದು ಜಗತ್ತು ಒಂದಾಗಿ ಬಿಟ್ಟಿದೆ, ಒಂದು ನಗರದಂತಾಗಿದೆ. ಆದರೂ ಪವಿತ್ರ ಖುರ್‌ಆನ್, ಪ್ರಪಂಚದಲ್ಲಿ ವಿವಿಧ ಭಾಷೆಗಳನ್ನು ಮಾತನಾಡುತ್ತಾರೆಂಬ ವಾಸ್ತವದ ಹೊರತಾಗಿಯೂ ಜಗತ್ತಿನಾದ್ಯಂತ ಇರುವ ಮುಸ್ಲಿಮರು ಪವಿತ್ರ ಖುರ್‌ಆನ್ ಅನ್ನು ಅರೆಬಿಕ್ ಭಾಷೆಯಲ್ಲಿ ಓದುತ್ತಾರೆ. ಅದೇ ರೀತಿಯಲ್ಲಿ ಐದು ಹೊತ್ತಿನ ನಮಾಝುಗಳಲ್ಲಿ (ಪ್ರಾರ್ಥನೆಗಳಲ್ಲಿ) ಅದನ್ನು ಬಳಸಲಾಗುತ್ತದೆ.

ನೆನಪಿಡಿರಿ, ಪವಿತ್ರ ಖುರ್‌ಆನ್‌ನ ರಹಸ್ಯಗಳು ಧರ್ಮನಿಷ್ಠರಿಗೆ ಮಾತ್ರ ಬಹಿರಂಗಗೊಳ್ಳುತ್ತದೆ. ಅದಕ್ಕಾಗಿ ಧರ್ಮನಿಷ್ಠರ ಸಹವಾಸದಿಂದ ಸಮೃದ್ಧವಾಗುವುದು ಸಹ ಅಗತ್ಯವಾಗಿದೆ. ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಅಲ್ಲಾಹನಿಂದ ದಿವ್ಯಜ್ಞಾನ ಪಡೆದು ಏನೆಲ್ಲಾ ವಿವರಿಸಿದ್ದಾರೆ ಅದನ್ನು ನಾವು ನೋಡಬೇಕಾಗಿದೆ. ಅದರತ್ತ ಗಮನ ಕೊಡಬೇಕಾಗಿದೆ. ಅದೇ ವ್ಯಾಖ್ಯಾನಗಳನ್ನು ಅವರ ಜ್ಞಾನಗಳಂತೆಯೇ ಅಹ್ಮದಿಯಾ ಜಮಾಅತಿನ ಸಾಹಿತ್ಯದಲ್ಲಿ ವಿವರಿಸಲಾಗುತ್ತದೆ. ಅನೇಕ ಪೋಷಕರು ನಮ್ಮ ಮಕ್ಕಳು ಶಾಲೆಯಲ್ಲಿ ಏನು ಕಲಿಯುತ್ತಾರೊ ಅದಕ್ಕೆ ಉತ್ತರಿಸುವುದು ಹೇಗೆ? ಎಂದು ಪ್ರಶ್ನಿಸುತ್ತಾರೆ. ನಾವು ಚಿಂತನಶೀಲವಾಗಿ ಅಧ್ಯಾಯನ ಮಾಡಿದರೆ, ತಫ್ಸೀರ್ ಅನ್ನು ಓದಿದರೆ, ಪವಿತ್ರ ಖುರ್‌ಆನ್‌ನ ಆದೇಶದ ಬೆಳಕಿನಲ್ಲಿರುವ ಜಮಾಅತ್ತಿನ ಸಾಹಿತ್ಯವನ್ನು ಓದಿದರೆ ಪೊಷಕರು ಮಕ್ಕಳಿಗೆ ಉತ್ತರಗಳನ್ನು ನೀಡಬಹುದು.

ಸಹಾಬರವರ (ಸಹಚರರ) ಮೇಲೆ ಪವಿತ್ರ ಖುರ್‌ಆನ್‌ನ ಬೋಧನೆಯ ಪರಿಣಾಮವನ್ನು ಉಲ್ಲೇಖಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ರವರ ಪವಿತ್ರ ಸಾಂಗತ್ಯ ಮತ್ತು 'ಫುರ್ಖಾನ್ ಹಮೀದ್‌ನ' (ಪವಿತ್ರ ಖುರ್‌ಆನ್) ಆಕರ್ಷಕ ಪ್ರಭಾವ ಅವರಿಗೆ ತಿಳಿಯಿತು. ನಾವು ಜೀವಿಸಿದ ರೀತಿ ಒಂದು ಪೈಶಾಚಿಕ ರೀತಿಯ ಜೀವಿತವಾಗಿತ್ತು ಮತ್ತು ಎಲ್ಲಾ ರೀತಿಯ ದುಷ್ಕರ್ಮಗಳಲ್ಲಿ ನಾವು ನಿರತವಾಗಿದ್ದೆವು. ಆದರೆ ನಂತರ ಅವರು ಪವಿತ್ರಾತ್ಮನ (ರೂಹುಲ್ ಖುದುಸ್) ಶಕ್ತಿಯಿಂದ ಶಕ್ತಿ ಪಡೆದು ಸತ್ಕರ್ಮಗಳ ಕಡೆಗೆ ತಿರುಗಿದರು. ಅಲ್ಲಾಹನು ಈ ಬಗ್ಗೆ ಅವರ ಪರವಾಗಿ ಹೇಳುತ್ತಾನೆ. **"ವ ಅಯ್ಯದಹುಂ ಬಿರೂಹಿಮ್ ಮಿನ್‌ಹು"** (ಅಲ್ ಮುಜಾದಿಲ:23) ಅಂದರೆ ಅಲ್ಲಾಹನು ಒಂದು ಪವಿತ್ರಾತ್ಮದಿಂದ ಅವರಿಗೆ ಸಹಕಾರ ನೀಡಿದನು.

(ಚಶ್ಮ ಮಅರಿಫತ್, ರೂಹಾನಿ ಖಝಾಈನ್, ಸಂಪುಟ–23, ಪುಟ 424–425)


ಇದಾಗಿದೆ ಪವಿತ್ರ ಖುರ್‌ಆನ್‌ನ ಪ್ರಭಾವ, ಅವರು ಭಯದಿಂದ ಎದ್ದು ಆಕಾಶದಲ್ಲಿ ಹೊಳೆಯುವ ನಕ್ಷತ್ರಗಳಾದರು. ಅವರ ಕುರಿತು ಹಝ್ರತ್ ರಸೂಲುಲ್ಲಾಹ್(ಸ) ರು ನುಡಿದರು: ಅವರಲ್ಲಿ ಪ್ರತಿಯೊಬ್ಬರು ನಿಮ್ಮ ಮಾರ್ಗದರ್ಶಕರಾಗಿರುವರು.

(ಅಲ್‌ಮಿಶ್ಕಾತುಲ್ ಮಸಾಬೀಹ್, ಸಂಪುಟ–3, ಪುಟ–1696)

ಸರ್ವಶಕ್ತನಾದ ಅಲ್ಲಾಹನು ಎಲ್ಲಾ ಓದುಗರಿಗೆ ಪವಿತ್ರ ಖುರ್‌ಆನ್ ಓದುವ ಅದರ ಅರ್ಥಗಳನ್ನು ಅರ್ಥ ಮಾಡಿಕೊಳ್ಳುವ ಮತ್ತು ಅದರ ಬೋಧನೆಗಳ ಪ್ರಕಾರ ಬದುಕುವ ಸಾಮರ್ಥ್ಯವನ್ನು ನೀಡಲಿ ಎಂದು ನಾನು ಪ್ರಾರ್ಥಿಸುತ್ತೇನೆ ಆಮೀನ್.

ವಸ್ಸಲಾಮ್, ಖಾಕ್ಸಾರ್

ಖಲೀಫತುಲ್ ಮಸೀಹ್




سیدنا وامامنا حضرت مرزا مسرور احمد خلیفۃ المسیح الخامس ایدہ اللہ تعالیٰ بنصرہ العزیز

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

# ಕನ್ನಡ ವಾರಪತ್ರಿಕೆ ಬದರ್ "ಪವಿತ್ರ ಖುರ್‌ಆನ್" ವಾರ್ಷಿಕ ಸಂಚಿಕೆ


| ಕ್ರಮ ಸಂಖ್ಯ | ವಿಷಯ ಸೂಚಿಕೆ | ಪುಟ |
|---|---|---|
| 01 | ಸಂಪಾದಕರ ನುಡಿ | 01 |
| 02 | ಪವಿತ್ರ ಖುರ್‌ಆನ್‌ನ ಶ್ರೇಷ್ಠ ಸ್ಥಾನ | 02 |
| 03 | ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳು | 03 |
| 04 | ಹಝ್ರತ್ ಮಸೀಹ್ ಮೌಊದ್(ಅ)ರ ಖಲೀಫರ ಅಧ್ಯಾಪನೆಗಳು | 04 |
| 05 | ಹುಝೂರ್(ಅತಬಿಅ) ಅವರ ಖುತ್‌ಬ ಜುಮುಅ | 05 |
| 06 | ಹಝ್ರತ್ ಮುಹಮ್ಮದ್ ಸಲ್ಲಲ್ಲಹು ಅಲೈಹಿವ ಸಲ್ಲಮ್ ರವರ ಜೀವನ ಚರಿತ್ರೆ, ಪವಿತ್ರ ಖುರ್‌ಆನ್‌ನ ದೃಷ್ಟಿಯಿಂದ | 10 |
| 07 | ಮುಸ್ಲಿಮೇತರರೊಂದಿಗೆ ಸಮಾನತೆಯ ಹಾಗೂ ಉತ್ತಮ ನಡವಳಿಕೆಯ ಕುರಿತು ಪವಿತ್ರ ಖುರ್‌ಆನ್‌ನ ಬೋಧನೆಗಳು. | 14 |
| 08 | ಪವಿತ್ರ ಖುರ್‌ಆನ್‌ನಲ್ಲಿ ಜಾಗತಿಕ ಶಾಂತಿಯ ಬೋಧನೆಗಳು | 18 |
| 09 | ಪವಿತ್ರ ಖುರ್‌ಆನ್ ಮತ್ತು ಮಹಿಳೆಯರ ಹಕ್ಕುಗಳು | 23 |


## ಪವಿತ್ರ ಖುರ್‌ಆನ್‌ನಲ್ಲಿ ತೌಹೀದ್ (ಏಕದೇವತ್ವ) ಮತ್ತು ಅದರ ಬೋಧನೆಗಳಲ್ಲಿನ ಮಹತ್ವ ಮತ್ತು ಶ್ರೇಷ್ಠತೆ

ಇಸ್ಲಾಮಿನ ಅತ್ಯಂತ ಮೂಲಭೂತ ಮತ್ತು ಪ್ರಮುಖ ಬೋಧನೆಯು ತೌಹೀದ್ ಆಗಿದೆ, ಅಂದರೆ ಅಲ್ಲಾಹನ ಹೊರತು ಬೇರೆ ದೇವನಿಲ್ಲ. ಅಂದರೆ ಅಲ್ಲಾಹನನ್ನು ಹೊರತುಪಡಿಸಿ ಯಾರೂ ಆರಾಧನೆಗೆ ಅರ್ಹರಲ್ಲ. ಮನುಷ್ಯನು ತನ್ನಂತೆಯೇ ಮನುಷ್ಯನನ್ನು ಪೂಜಿಸುವುದು, ಜೀವಿಗಳನ್ನು, ಪರ್ವತಗಳನ್ನು, ನದಿಗಳನ್ನು ಪೂಜಿಸುವುದು, ಅಥವಾ ವಿಗ್ರಹಗಳನ್ನು, ಮರಗಳು ಮತ್ತು ಕಲ್ಲುಗಳನ್ನು ಪೂಜಿಸಲು ಅನುಮತಿಸುವುದಿಲ್ಲ. ಒಬ್ಬನೇ ಭಗವಂತ, ಒಬ್ಬನೇ ದೇವನು, ಒಬ್ಬನೇ ಸೃಷ್ಟಿಕರ್ತ ಮತ್ತು ಇಡೀ ಬ್ರಹ್ಮಾಂಡದ ಒಡೆಯ. ಅವನು ಯಾವಾಗಲೂ ಇದ್ದನು ಮತ್ತು ಯಾವಾಗಲೂ ಇರುತ್ತಾನೆ. ಪ್ರತಿಯೊಂದಕ್ಕೂ ವಿನಾಶವಿದೆ. ಆದರೆ ಅಲ್ಲಾಹನಿಗೆ ವಿನಾಶವಿಲ್ಲ. ಪವಿತ್ರ ಖುರ್‌ಆನ್ ಏಕೈಕ ಪುಸ್ತಕವಾಗಿದ್ದು ಅದು ಏಕದೇವತಾವಾದದ ಬೋಧನೆಯಿಂದ ತುಂಬಿದೆ. ಜನರನ್ನು ಏಕದೇವೋಪಾಸನೆಯ ಮೇಲೆ ಸ್ಥಾಪಿಸಲು ಮತ್ತು ಬಹುದೇವತಾವಾದವನ್ನು ನಿರ್ಮೂಲನೆ ಮಾಡಲು ಅಲ್ಲಾಹನು ಪ್ರವಾದಿಗಳನ್ನು ಕಳುಹಿಸಿದನು. ಅಲ್ಲಾಹನು ತನ್ನ ಏಕದೇವತಾವಾದದ ಬಗ್ಗೆ ಬಹಳ ಹೆಮ್ಮೆಪಡುತ್ತಾನೆ. ಅವನು ಇಡೀ ವಿಶ್ವವನ್ನು ಮಾನವಕುಲಕ್ಕಾಗಿ ಸೃಷ್ಟಿಸಿದನು ಮತ್ತು ಅದರ ಆಧ್ಯಾತ್ಮಿಕ ಮತ್ತು ಭೌತಿಕ ಬೆಳವಣಿಗೆಯ ಸಂಪೂರ್ಣ ಕಾಳಜಿಯನ್ನು ವಹಿಸಿದನು. ಆಗ ಅವನನ್ನು ಬಿಟ್ಟು ಬೋರೊಬ್ಬರನ್ನು ಆರಾಧಿಸಲು ಮನುಷ್ಯನಿಗೆ ಯಾರ ಅನುಮತಿ ಇದೆ? ಮನುಷ್ಯ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳನ್ನು ಪೂಜಿಸುತ್ತಾನೆ. ಆದರೆ ತನ್ನ ಸೃಷ್ಟಿಕರ್ತನನ್ನು ಮರೆತುಬಿಡುವುದು ಎಷ್ಟು ಕ್ರೂರವಾಗಿದೆ. ಎಷ್ಟು ಮೂರ್ಖತನ! ಒಬ್ಬ ವ್ಯಕ್ತಿಯು ಚಹಾ ಉಪಕಾರವನ್ನು ಸ್ವೀಕರಿಸುತ್ತಾನೆ ಮತ್ತು ಅದನ್ನು ಕೊಡುವವನನ್ನೂ ಮರೆತುಬಿಡುತ್ತಾನೆ. ಉಪಕಾರವನ್ನು ಮರೆತು ಅವನು ನೀಡಿದ ವಸ್ತುವನ್ನು ಸ್ವೀಕರಿಸುತ್ತಾನೆ.

ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಪೋಷಕರೊಂದಿಗೆ ವಿಧೇಯತೆ ಮತ್ತು ಅನಸುರಣೆಯನ್ನು ಒತ್ತಿ ಹೇಳಿದ್ದಾನೆ. ಆದರೆ ಬಹುದೇವತೆಯ ವಿಷಯದಲ್ಲಿ ಅವರನ್ನು ಪಾಲಿಸುವುದನ್ನು ಅವನು ನಿಷೇಧಿಸಿದ್ದಾನೆ. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ.

**ವ ಇನ್ ಜಾಹದಾಕ ಅಲಾ ಅನ್ ತುಶ್ರಿಕ ಬೀ ಮಾ ಲೈಸ ಲಕ ಬಿಹೀ ಇಲ್‌ಮುನ್; ಫಲಾ ತುತಿಅ್‌ಹುಮಾ ವಸಾಹಿಬ್‌ಹುಮಾ ಫಿದ್ದುನ್‌ಯಾ ಮಾರೂಫನ್; ವತ್ತಬಿಅ್ ಸಬೀಲ ಮನ್ ಅನಾಬ ಇಲೈಯ, ಸುಮ್ಮ ಇಲೈಯ ಮರ್‌ಜಿಉಕುಮ್ ಫಉನಬ್ಬಿಉಕುಮ್ ಬಿಮಾ ಕುಂತುಮ್ ತಅ್‌ಮಲೂನ್** (ಲುಖ್ಮಾನ್–16) "ನಿನಗೆ ಗೊತ್ತಿಲ್ಲದ ಯಾವುದಾದರೂ ನನ್ನೊಂದಿಗೆ ಸೇರಿಸಿ ಆರಾಧಿಸಲು ಅವರು ನಿನ್ನನ್ನು ಒತ್ತಾಯಪಡಿಸಿದರೆ, ಆಗ ನೀನು ಅವರನ್ನು ಅನುಸರಿಸಬಾರದು. ಆದರೆ ಐಹಿಕ ವಿಚಾರಗಳಲ್ಲಿ ನೀನು ಅವರೊಡನೆ ಉತ್ತಮವಾದ ರೀತಿಯಲ್ಲಿ ವರ್ತಿಸು. (ಪರಲೋಕದ ವಿಚಾರಗಳಲ್ಲಿ) ನನ್ನ ಕಡೆಗೆ ತಿರುಗಿದವರ ಮಾರ್ಗವನ್ನು ನೀನು ಅನುಸರಿಸು. ಆ ಮೇಲೆ ನಿಮ್ಮ ಮರಳಿಕೆ ನಮ್ಮ ಕಡೆಯೇ ಆಗಿದೆ, ನಿಮ್ಮ ಕೃತ್ಯಗಳ ಬಗ್ಗೆ ಆಗ ನಿಮಗೆ ತಿಳಿಸಿಕೊಡಲಾಗುವುದು.

ನಂತರ ಸೂರಃ ಅನ್‌ಕಬೂತ್‌ನಲ್ಲೂ ಅಲ್ಲಾಹನು ಅದೇ ಬೋಧನೆಯನ್ನು ನೀಡಿದನು.

**ವ ವಸ್ಸೈನಲ್ ಇನ್‌ಸಾನ ಬಿ ವಾಲೈದೈಹಿ ಹುಸ್ನಾ, ವಿನ್ ಜಹದಾಕ ಲಿತುಶ್ರಿಕ ಬೀ ಮಾ ಲೈಸ ಲಕ ಬಿಹೀ ಇಲ್ಮುನ್ ಫಲಾ ತುತಿಅ್‌ಹುಮಾ, ಇಲೈಯ ಮರ್‌ಜಿಉಕುಮ್ ಫಉನಬ್ಬಿಉಕುಮ್ ಬಿಮಾ ಕಿನ್‌ತುಮ್ ತಅ್‌ಮಲೂನ** (ಅಲ್‌ಅನ್‌ಕಬೂತ್–9) "ತನ್ನ ತಂದೆತಾಯಂದಿರೊಡನೆ ಔದಾರ್ಯದಿಂದ ವರ್ತಿಸಬೇಕೆಂದು ನಾವು ಮನುಷ್ಯನಿಗೆ ಉಪದೇಶಿಸಿದ್ದೇವೆ. ಆದರೆ ನಿನಗೆ ತಿಳುವಳಿಕೆಯಿಲ್ಲದ ಏನನ್ನಾದರೂ ನನಗೆ ಸಹಭಾಗಿ ಮಾಡಲು ಅವರು ನಿನ್ನನ್ನು ಒತ್ತಾಯಿಸುವುದಾದರೆ, ಆಗ (ಆ ವಿಷಯದಲ್ಲಿ) ನೀನು ಅವರಿಗೆ ವಿಧೇಯನಾಗಬಾರದು. ನಿಮ್ಮ ಮರಳಿಕೆ ನನ್ನ ಬಳಿಗೆ ಆಗಿದೆ. ಆಗ ನಿಮ್ಮ ಕರ್ಮಗಳ (ಒಳಿತು, ಕೆಡುಕುಗಳ) ಬಗ್ಗೆ ನಿಮಗೆ ವಿವರಿಸಿಕೊಡುವೆನು.

ಅಲ್ಲಾಹನು ಬಹುದೇವತಾವಾದವನ್ನು ದೊಡ್ಡ ಅನ್ಯಾಯವೆಂದು ಘೋಷಿಸಿದ್ದಾನೆ ಮತ್ತು ಅದು ಕ್ಷಮಿಸಲಾಗದ ಅನ್ಯಾಯವಾಗಿದೆ. ಇದರ ಜೊತೆಗೆ ಯಾವ ಪಾಪಗಳಿದ್ದರೂ, ಎಷ್ಟರಮಟ್ಟಿಗಿದ್ದರೂ ಅಲ್ಲಾಹನು ಕ್ಷಮಿಸಬಹುದು. ಆದರೆ ಶಿರ್ಕ್ (ಬಹುದೇವತಾವಾದ) ಕ್ಷಮಿಸುವುದಿಲ್ಲ. ಏಕೆಂದರೆ ಅಲ್ಲಾಹನನ್ನು ಹೊರತುಪಡಿಸಿ ಒಬ್ಬ ವ್ಯಕ್ತಿ ಜೀವನಪರ್ಯಂತ ಬೇಡುವನಾದರೆ ಈಗ ಅವನು ಅಲ್ಲಾಹನಿಂದ ಹೇಗೆ ಬೇಡುವನು ಮತ್ತು ಅವನಿಗೆ ಕೊಡುವುದಾದರೂ ಹೇಗೆ, ಶಿರ್ಕ್ (ಬಹುದೇವಾತಾವಾದ) ದೊಡ್ಡ ಅನ್ಯಾಯವಾಗಿದೆ ಎಂಬ ಕುರಿತು ಅಲ್ಲಾಹನು ಹೇಳಿದನು.

**ವ ಇಝ್ ಖಾಲ ಲುಖ್ಮಾನು ಲಿಇಬ್ನಿಹೀ ವಹುವ ಯಇಝುಹೂ ಯಾಬುನೈಯ ಲಾ ತುಶ್ರಿಕ ಲಝುಲ್ಮುನ್ ಅಝೀಮ್** (ಲುಖ್ಮಾನ್–14) "ತನ್ನ ಪುತ್ರನಿಗೆ ಉಪದೇಶಿಸುತ್ತಾ ಲುಖ್‌ಮಾನ್ ನುಡಿದ ಸಂದರ್ಭ.

ನನ್ನ ಪ್ರಿಯ ಮಗನೇ, ನೀನು ಅಲ್ಲಾಹನಿಗೆ ಸಹಭಾಗಿಗಳನ್ನು ಕಲ್ಪಿಸಬೇಡ. ಅಲ್ಲಾಹನಿಗೆ ಸಹಭಾಗಿಗಳನ್ನು ಕಲ್ಪಿಸುವುದು ಖಂಡಿತವಾಗಿಯೂ ಘೋರ ದುಷ್ಕರ್ಮವಾಗಿದೆ.

ಹಾಗೆಯೇ ಶಿರ್ಕ್ (ಸಹಭಾಗಿತ್ವ) ಕ್ಷಮಿಸಲಾಗದು ಎಂಬ ವಿಷಯ ಸೂರ: ಅನ್ನಿಸಾಅನಲ್ಲಿ ಎರಡು ಸ್ಥಳಗಳಲ್ಲಿ ವಿವರಿಸಲಾಗಿದೆ.

ಅಲ್ಲಾಹನು ಹೇಳಿದನು: **ಇನ್ನಲ್ಲಾಹ್ ಲಾ ಯಗ್ಫಿರು ಅಂಯುಶ್ರಿಕ ಬಿಹೀ ವ ಯಗ್‌ಫಿರು ಮ ದೂನ ಝಾಲಿಕ ಲಿಮಂ ಯಶಾಉ, ವಮೈಂಯುಶ್ರಿಕ್ ಬಿಲ್ಲಾಹಿ ಫಖದಿಫ್ತರಾ ಇಸ್ಮನ್ ಅಝೀಮಾ.** (ಅನ್ನಿಸಾಅ್: 49)

ಅನುವಾದ: ಬೇರೆ ಯಾವುದಕ್ಕು ಅವನೊಂದಿಗೆ ಸಹಭಾಗಿತ್ವ ಕಲ್ಪಿಸುವುದನ್ನು (ಶಿರ್ಕ್‌ನ್ನು) ಖಂಡಿತವಾಗಿಯೂ ಅಲ್ಲಾಹನು ಕ್ಷಮಿಸಲಾರ. ಅದರ ಹೊರತಿರುವುದನ್ನು ತಾನಿಚ್ಛಿಸುವವರಿಗೆ ಅವನು ಕ್ಷಮಿಸುವನು. ಯಾವನಾದರೂ ಅಲ್ಲಾಹನಿಗೆ ಸಹಭಾಗಿಗಳನ್ನು ಕಲ್ಪಿಸಿದರೆ ಖಂಡಿತವಾಗಿಯೂ ಅವನು ಘೋರ ಪಾಪಕರವಾದ ಮಿಥ್ಯಾರೋಪವನ್ನು ಮಾಡುತ್ತಾನೆ.

ನಂತರ ವಚನ 117 ರಲ್ಲಿ ಅಲ್ಲಾಹನು ಹೇಳಿದನು. **ಇನ್ನಲ್ಲಾಹ ಲಾ ಯಗ್ಫ್‌ಫಿರು ಅಂಯುಶ್ರಕ ಬಿಹೀ ವಯಗ್‌ಫಿರು ಮಾ ದೂನ ಝಾಲಿಕ ಲಿಮೈಂಯಶಾಉ ವಮೈಂಯುಶ್ರಿಕ್ ಬಿಲ್ಲಾಹಿ ಫಖದ್ ಝಲ್ಲ ಝಲಾಲನ್ ಬೀದ.** (ಅನ್ನಿಸಾಅ–117)

"ತನ್ನೊಂದಿಗೆ ಏನನ್ನಾದರೂ ಸಹಭಾಗಿಯಾಗಿ ಕಲ್ಪಿಸುವುದನ್ನು ಖಂಡಿತವಾಗಿಯೂ ಅಲ್ಲಾಹನು ಕ್ಷಮಿಸಲಾರ. ಅದರ ಹೊರತು ಇತರ ಪಾಪಗಳನ್ನು ತಾನು ಉದ್ದೇಶಿಸುವವರಿಗೆ ಅವನು ಕ್ಷಮಿಸಿಕೊಡುವನು. ಯಾರು ಅಲ್ಲಾಹನಿಗೆ ಸಹಭಾಗಿತ್ವವನ್ನು ಕಲ್ಪಿಸುತ್ತಾನೋ ನಿಸ್ಸಂದೇಹವಾಗಿಯೂ ಅವನು ಮಾರ್ಗಭ್ರಂಶನಾಗಿ ಬಹುದೂರ ಅಗಲಿ ಹೋಗುತ್ತಾನೆ.

ಇನ್ನೊಂದೆಡೆ ಅಲ್ಲಾಹನು ಹೇಳಿದನು. ಸಹಭಾಗಿತ್ವ ಕಲ್ಪಿಸಿದವನು ನರಕ ಸೇರುವನು ಅಲ್ಲಾಹನು ಹೇಳಿದನು. **ಇನ್ನಹು ಮೈಂ ಯುಶ್ರಿಕ್ ಬಿಲ್ಲಾಹಿ**

*(ಉಳಿದ ಭಾಗ ಪುಟ ಸಂಖ್ಯೆ 27ರಲ್ಲಿ ಮುಂದುವರಿಸಲಾಗಿದೆ)*

# ಪವಿತ್ರ ಖುರ್‌ಆನ್‌ನ ಶ್ರೇಷ್ಠ ಸ್ಥಾನ

## ಪವಿತ್ರ ಖುರ್‌ಆನ್‌ನ ಬೆಳಕಿನಲ್ಲಿ

### ಪವಿತ್ರ ಖುರ್‌ಆನ್ ಒಂದು ವಿಶಿಷ್ಟವಾದ ಗ್ರಂಥವಾಗಿದೆ

قُلْ لَّئِنِ اجْتَمَعَتِ الْاِنْسُ وَالْجِنُّ عَلٰٓى اَنْ يَّاْتُوْا بِمِثْلِ هٰذَا الْقُرْاٰنِ لَا يَاْتُوْنَ بِمِثْلِهٖ وَلَوْ كَانَ بَعْضُهُمْ لِبَعْضٍ ظَهِيْرًا ﴿۸۹﴾

(ಬನೀ ಇಸ್ರಈಲ್: 89)

ಅನುವಾದ: ಹೇಳು: 'ಈ ಖುರ್‌ಆನಿಗೆ ಸಮಾನವಾದ ಮತ್ತೊಂದನ್ನು ತರಲಿಕ್ಕಾಗಿ ಇನ್ಸ್ ಮತ್ತು ಜಿನ್ನ್ ಒಟ್ಟು ಸೇರಿ ಪ್ರಯತ್ನಿಸಿದರೂ ಅವರು ಪರಸ್ಪರ ಸಹಾಯ ಮಾಡಿದರೂ ಅದಕ್ಕೆ ತುಲ್ಯವಾದುದನ್ನು ತರಲಿಕ್ಕೆ ಅವರಿಂದ ಸಾಧ್ಯವಿಲ್ಲ.'

### ಪವಿತ್ರ ಖುರ್‌ಆನ್ ಮಾರ್ಗದರ್ಶನದ ಅತ್ಯುತ್ತಮ ಪುಸ್ತಕವಾಗಿದೆ

اِنَّ هٰذَا الْقُرْاٰنَ يَهْدِيْ لِلَّتِيْ هِيَ اَقْوَمُ وَيُبَشِّرُ الْمُؤْمِنِيْنَ الَّذِيْنَ يَعْمَلُوْنَ الصّٰلِحٰتِ اَنَّ لَهُمْ اَجْرًا كَبِيْرًا ﴿۱۰﴾

(ಬನೀ ಇಸ್ರಈಲ್: 10)

ಅನುವಾದ: ದಿಟವಾಗಿಯೂ ಈ ಖುರ್‌ಆನ್ ಅತ್ಯಂತ ಋಜುವಾದ ಮಾರ್ಗದರ್ಶನ ಮಾಡುತ್ತದೆ ಹಾಗೂ ಸತ್ಕರ್ಮ ಗೈಯುವ ವಿಶ್ವಾಸಿಗಳಿಗೆ ಬಹಳ ದೊಡ್ಡ ಪ್ರತಿಫಲವಿದೆಯೆಂದು ಶುಭವಾರ್ತೆಯನ್ನು ಸಹ ಅರುಹುತ್ತದೆ.

### ಪವಿತ್ರ ಖುರ್‌ಆನ್ ಸತ್ಯ ವಿಶ್ವಾಸಿಗಳಿಗೆ ಶಿಫಾ ಮತ್ತು ಕರುಣೆಯಾಗಿದೆ

وَنُنَزِّلُ مِنَ الْقُرْاٰنِ مَا هُوَ شِفَآءٌ وَّرَحْمَةٌ لِّلْمُؤْمِنِيْنَ ۙ وَلَا يَزِيْدُ الظّٰلِمِيْنَ اِلَّا خَسَارًا ﴿۸۳﴾

(ಬನೀ ಇಸ್ರಈಲ್: 83)

ಅನುವಾದ: ಸತ್ಯ ವಿಶ್ವಾಸಿಗಳಿಗೆ ಉಪಶಮನ ಮತ್ತು ಕಾರುಣ್ಯವಾಗಿರುವ ಅಧ್ಯಾಪನವನ್ನು ನಾವು ಖುರ್‌ಆನಿನಿಂದ ಅವತೀರ್ಣಗೊಳಿಸುತ್ತಿದ್ದೇವೆ. ಆದರೆ ಅಧರ್ಮಿಗಳಿಗೆ ಅದು ನಷ್ಟವನ್ನೇ ಹೆಚ್ಚಿಸುತ್ತದೆ.

### ಪವಿತ್ರ ಖುರ್‌ಆನ್ ಪಠಿಸುವ ಮೊದಲು ಇಸ್ತಿಯಾಝು

فَاِذَا قَرَاْتَ الْقُرْاٰنَ فَاسْتَعِذْ بِاللّٰهِ مِنَ الشَّيْطٰنِ الرَّجِيْمِ ﴿۹۸﴾ (ಅನ್ನಹಲ್:99)

ಅನುವಾದ: ನೀನು ನಿನ್ನ ಪ್ರಭುವನ್ನು ಸ್ತುತಿಸುತ್ತಾ ಅವನ ಮಹತ್ವದ ಕೀರ್ತನೆ ಮಾಡು ಮತ್ತು ಅವನಿಗೆ ಸಾಷ್ಟಾಂಗವೆರಗುವವರಲ್ಲಿ ನೀನಾಗು.

### ಪವಿತ್ರ ಖುರ್‌ಆನ್ ಪಠಣವನ್ನು ಮೌನವಾಗಿ ಆಲಿಸಬೇಕು

وَاِذَا قُرِئَ الْقُرْاٰنُ فَاسْتَمِعُوْا لَهٗ وَاَنْصِتُوْا لَعَلَّكُمْ تُرْحَمُوْنَ (ಅಅ್‌ರಾಫ್:204)

ಅನುವಾದ: ಖುರ್‌ಆನ್ ಪಠಿಸಲ್ಪಡುವಾಗ, ಅದನ್ನು ಲಕ್ಷ್ಯವಿಟ್ಟು ಆಲಿಸಿರಿ ಮತ್ತು ಮೌನವಾಗಿರಿ ನಿಮ್ಮ ಮೇಲೆ ಕರುಣೆ ತೋರಿಸಲ್ಪಡಲಿಕ್ಕಾಗಿ.

### ವುಝೂವಿನ ನಂತರ ಪವಿತ್ರ ಖುರ್‌ಆನ್ ಪಠಿಸಬೇಕು

اِنَّهٗ لَقُرْاٰنٌ كَرِيْمٌ ﴿۷۸﴾ فِيْ كِتٰبٍ مَّكْنُوْنٍ ﴿۷۹﴾ لَّا يَمَسُّهٗٓ اِلَّا الْمُطَهَّرُوْنَ ﴿۸۰﴾

(ಅಲ್‌ವಾಖಿಅಃ: 78-80)

ಅನುವಾದ: ದಿಟವಾಗಿಯೂ ಇದು ಆದರಣೀಯವಾದ ಖುರ್‌ಆನ್ ಆಗಿದೆ. ಸುರಕ್ಷಿತವಾದ ಗ್ರಂಥರೂಪದಲ್ಲಿ. ಪರಿಶುದ್ಧರಾದವರು ಹೊರತು ಬೇರ್‍ಯಾರೂ ಅದನ್ನು ಸ್ಪರ್ಶಿಸಲಾರರು.

## ಹದೀಸ್‌ಗಳ ಬೆಳಕಿನಲ್ಲಿ

### ಪವಿತ್ರ ಖುರ್‌ಆನ್ ಅನ್ನು ಕಲಿಯುವ ಮತ್ತು ಕಲಿಸುವ ಸದ್ಗುಣಗಳು

عَنْ عُثْمَانَ بْنِ عَفَّانَ رَضِيَ اللّٰهُ عَنْهُ قَالَ : قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ : خَيْرُكُمْ مَنْ تَعَلَّمَ الْقُرْاٰنَ وَعَلَّمَهٗ.

(بخاری کتاب فضائل القرآن باب خیرکم من تعلم القرآن)

ಅನುವಾದ: ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು, "ನಿಮ್ಮಲ್ಲಿ ಪವಿತ್ರ ಖುರ್‌ಆನ್ ಅನ್ನು ಕಲಿಯುವವರು ಮತ್ತು ಅದನ್ನು ಇತರರಿಗೆ ಕಲಿಸುವವರು ಉತ್ತಮರಾಗಿದ್ದಾರೆ.

### ಪವಿತ್ರ ಖುರ್‌ಆನ್‌ನಿಂದ ಸ್ವರ್ಗದಲ್ಲಿ ಪದವಿಗಳ ವರ್ಧನೆ

قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ يُقَالُ لِصَاحِبِ الْقُرْاٰنِ اِذَا دَخَلَ الْجَنَّةَ اِقْرَاْ وَاصْعَدْ فَيَقْرَاُ وَيَصْعَدُ بِكُلِّ اٰيَةٍ دَرَجَةً حَتّٰى يَقْرَاَ اٰخِرَ شَيْءٍ مَعَهٗ.

(سنن ابن ماجہ کتاب الادب باب ثواب القرآن)

ಅನುವಾದ: ಹಝ್ರತ್ ಪೈಗಂಬರ್(ಸ) ನನುಡಿದರು: ಪವಿತ್ರ ಖುರ್‌ಆನ್‌ನ ಹಾಫಿಝ್ (ಖುರ್‌ಆನ್ ಅನ್ನು ಕಂಠಪಾಠ ಮಾಡಿದ ವ್ಯಕ್ತಿ) ಸ್ವರ್ಗವನ್ನು ಪ್ರವೇಶಿಸಿದಾಗ, ನೀವು ಪವಿತ್ರ ಖುರ್‌ಆನ್ ಅನ್ನು ಪಠಿಸುತ್ತಾ ಹೋಗಿ ಮತ್ತು ಉನ್ನತ ಪದವಿಗಳನ್ನು ಪಡೆಯುತ್ತಾ ಹೋಗಿ ಎಂದು ಹೇಳಲಾಗುತ್ತದೆ. ಹೀಗೆ ಆತನಿಗೆ ಕಂಠಪಾಠವಿದ್ದ ಕೊನೆಯ ಆಯತ್ ವರೆಗೂ ಆತನು ಪವಿತ್ರ ಖುರ್‌ಆನ್ ಅನ್ನು ಪಠಿಸುತ್ತಾ ಮತ್ತು ಉತ್ತುಂಗ ಪದವಿಗಳನ್ನು ಪಡೆಯುತ್ತಾ ಹೋಗುತ್ತಾನೆ.

### ಪವಿತ್ರ ಖುರ್‌ಆನ್ ಒಂದು ವಿಶಿಷ್ಟ ಪುಸ್ತಕವಗಿದೆ

عَنِ ابْنِ عَبَّاسٍ رَضِيَ اللّٰهُ عَنْهُمَا قَالَ : قَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ : اِنَّ الَّذِيْ لَيْسَ فِيْ جَوْفِهٖ شَيْءٌ مِّنَ الْقُرْاٰنِ كَالْبَيْتِ الْخَرِبِ

(ترمذی فضائل القرآن باب من قرأ حرفا)

ಅನುವಾದ: ಹಝ್ರತ್ ಇಬ್ನೆ ಅಬ್ಬಾಸ್(ರ) ವರದಿ ಮಾಡುತ್ತಾರೆ ಪವಿತ್ರ ಖುರ್‌ಆನ್‌ನ ಒಂದು ಭಾಗವನ್ನು ಸಹ ನೆನಪಿಟ್ಟುಕೊಳ್ಳದವನು ನಿರ್ಜನವಾದ ಮನೆಯಂತೆ ಇದ್ದಾನೆ.

### ಪವಿತ್ರ ಖುರ್‌ಆನ್ ಅನ್ನು ಆಗಾಗ್ಗೆ ಪಠಿಸುವ (ತಿಲಾವತ್ ಮಾಡುವ) ವ್ಯಕ್ತಿಯು ಹೆಮ್ಮೆಪಡುವವನಾಗಿರುತ್ತಾನೆ

لَا حَسَدَ اِلَّا فِي اثْنَتَيْنِ رَجُلٌ اٰتَاهُ اللّٰهُ الْقُرْاٰنَ فَهُوَ يَتْلُوْهُ اٰنَاءَ اللَّيْلِ وَاٰنَاءَ النَّهَارِ وَرَجُلٌ اٰتَاهُ اللّٰهُ مَالًا فَهُوَ يُنْفِقُهٗ اٰنَاءَ اللَّيْلِ وَاٰنَاءَ النَّهَارِ

(بخاری کتاب التوحید، باب قول النبی صلی اللہ علیہ وسلم رجل آتاہ اللہ القرآن فهو يقوم به)

ಅನುವಾದ: ಇಬ್ಬರು ವ್ಯಕ್ತಿಗಳು ಹೆಮ್ಮೆ ಪಡುವವರಗಿದ್ದಾರೆ ಅವರಲ್ಲಿ ಮೊದಲನೆಯವನು ಯಾರಿಗೆ ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್ ಅನ್ನು ಅನುಗ್ರಹಿಸಿರುವನು ಆತನು ಅದನ್ನು ಹಗಲು ರಾತ್ರಿ ವಿವಧ ಹೊತ್ತುಗಳಲ್ಲಿ ಅದನ್ನು ಪಠಿಸುವವನು ಮತ್ತು ಇನ್ನೊಬ್ಬನು ಯಾರಿಗೆ ಸರ್ವಶಕ್ತನಾದ ಅಲ್ಲಾಹನು ಸಂಪತ್ತನ್ನು ನೀಡಿದ್ದಾನೊ ಆತನು ಅದನ್ನು ಹಗಲು ರಾತ್ರಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವವನಾಗಿದ್ದಾನೆ.

...*...*...*...

# ಪವಿತ್ರ ಖುರ್ಆನ್‌ಗಿರುವ ಅನ್ಯ ಗ್ರಂಥಗಳ ಮೇಲೆ ಶ್ರೇಷ್ಠತೆ
# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪವಿತ್ರ ಅಧ್ಯಾಪನೆಗಳ ಬೆಳಕಿನಲ್ಲಿ

ಪವಿತ್ರ ಖುರ್ಆನ್‌ನಲ್ಲಿ ಅನೇಕ ಪರಿಶುದ್ಧ ಆಜ್ಞೆಗಳಿವೆ. ಅದರಲ್ಲಿ ಒಂದು ಹೀಗಿದೆ;– ನೀವು ಶಿರ್ಕ್ (ಬಹು ದೇವಾರಾಧನೆ) ಪರಿಪೂರ್ಣವಾಗಿ ದೂರಸರಿಯಿರಿ ಮುಶ್ರೀಕ್ (ಬಹು ದೇವರಾದಕ) ಮೋಕ್ಷದಿಂದ ವಂಚಿತನಾಗುತ್ತಾನೆ. ನೀವು ಸುಳ್ಳು ಹೇಳಬೇಡಿರಿ. ಸುಳ್ಳು ಸಹ ಶಿರ್ಕ್‌ನ ಒಂದು ಭಾಗವಾಗಿದೆ. ಇಂಬೇಲ್ (ಹೊಸ ಒಡಂಬಡಿಕೆ) ಹೇಳುವ ರೀತಿಯಲ್ಲಿ ಪವಿತ್ರ ಖುರ್ಆನ್ ಹೇಳುವುದಿಲ್ಲ. ನೀವು ಕಾಮದ ಭಾವನೆಯಿಂದ ಪರ ಸ್ತ್ರೀಯರನ್ನು ನೋಡಬಾರದು ಎಂದು ಹೇಳುವುದಿಲ್ಲ. ಕಾಮಭಾವನೆ ರಹಿತವಾಗಿ ನೋಡಬಹುದು ಎಂದು ಹೇಳುವುದಿಲ್ಲ, ಪವಿತ್ರ ಖುರ್ಆನ್ ಹೇಳುತ್ತಿದೆ ಪರಸ್ತ್ರೀಯರನ್ನು ಕಾಮ ಭಾವನೆಯಾಗಲಿ ಕಾಮ ಭಾವನೆ ರಹಿತವಾಗಿಯಾಗಲಿ ನೋಡಬಾರದು ಎಂದು ಪರಸ್ತ್ರೀಯರನ್ನು ನೋಡುವಾಗ ನಿಮ್ಮ ದೃಷ್ಟಿ ತಗ್ಗಿಸು ಎಂದು ಪವಿತ್ರ ಖುರ್ಆನ್ ಹೇಳುತ್ತದೆ. ಆಕೆಯ ರೂಪ ಅಸ್ಪಷ್ಟವಾಗಿ ಮಾತ್ರ ಗೋಚರವಾಗುವಂತಿರಬೇಕು ಪವಿತ್ರ ಖುರ್ಆನ್ ಸುವಾರ್ತೆಗಳ ಹಾಗೆ ನೀನು ಮತ್ತನಾಗುವಷ್ಟು ಮದ್ಯ ಕುಡಿಯಬೇಡ ಎಂದು ಹೇಳುವುದಿಲ್ಲ. ಪವಿತ್ರ ಖುರ್ಆನ್ ಆಜ್ಞಾಪಿಸುವುದು ಮದ್ಯವನ್ನು ಕುಡಿಯಲೇ ಬಾರದೆಂದಾಗಿದೆ. ಮದ್ಯ ಕುಡಿದರೆ ದೇವರು ದೊರಕದೆಂದೂ ದೇವನು ನಿನ್ನೊಂದಿಗೆ ಮಾತನಾಡಲಾರನೆಂದು ನಿನ್ನನ್ನು ಮಾಲಿನ್ಯಗಳಿಂದ ಮುಕ್ತನನ್ನಾಗಿ ಮಾಡಲಾರನೆಂದೂ ಮಧ್ಯ ಶೈತಾನನು ನಿರ್ಮಿಸಿದೆಂದೂ ನೀನು ಅದರಿಂದ ದೂರ ಸರಿಯಬೇಕೆಂದೂ ಅದು ಹೇಳುತ್ತದೆ.

ತನ್ನ ಸಹೋದರನ ವಿರುದ್ಧ ವಿನಾ ಕಾರಣ ಸಿಟ್ಟು ಮಾಡಬೇಡ ಎಂದು ಸುವಾರ್ತೆಗಳು ಹೇಳುತ್ತವೆ. ಆದರೆ ಪವಿತ್ರ ಖುರ್ಆನ್ ಹೇಳುವುದು ಸಿಟ್ಟನ್ನು ನೀನು ನಿಯಂತ್ರಿಸಬೇಕಲ್ಲದೆ **ತವಾಸವ್ ಬಿಲ್ ಮರ್ ಹಮ** ಎಂಬ ಪರಸ್ಪರ ಕರುಣೆ ತೋರಲು ಉಪದೇಶಿಸುವ ಆಜ್ಞೆಸಹ ಪಾಲಿಸು ಎಂದಾಗಿದೆ. ನೀನು ಸ್ವತಃ ಕರುಣೆದೋರಬೇಕಲ್ಲದೆ ಅನ್ಯರು ಸಹ ಹಾಗೆ ಮಾಡಬೇಕೆಂದು ತನ್ನ ಎಲ್ಲಾ ಸಹೋದರರಿಗೆ ಉಪದೇಶಿಸು. ಸುವಾರ್ತೆಗಳು ಹೇಳುವುದೇನೆಂದರೆ ವ್ಯಭಿಚಾರದ ಹೊರತು ಬೇರೆ ಎಲ್ಲಾ ದುರ್ಗುಣಗಳನ್ನು ತನ್ನ ಪತ್ನಿಗೆ ಸಂಬಂಧಿಸಿ ಸಹಿಸಬೇಕು ಮತ್ತು ವಿವಾಹ ವಿಚ್ಛೇದನೆ ಮಾಡಬಾರದು ಎಂದಾಗಿದೆ. ಆದರೆ ಪವಿತ್ರ ಖುರ್ಆನ್ ಹೇಳುವುದು **ಅತ್ತಯ್ಯಿಬಾತು ಲಿತ್ತೆಯ್ಯಿಬೀನ್** ಪರಿಶುದ್ಧವಾದುದುದರೊಂದಿಗೆ ಅಪರಿಶುದ್ಧವಾದುದು ಇರಲಾರದೆಂದು. ಅದು ಉದ್ದೇಶಿಸುವುದು ಹೀಗೆ "ನಿನ್ನ ಪತ್ನಿ ವ್ಯಭಿಚಾರ ಮಾಡುವುದಿಲ್ಲವಾದರೂ ಅನ್ಯರನ್ನು ಕಾಮ ಭಾವನೆಯಿಂದ ನೋಡುವುದಾದರೆ ಅವರನ್ನು ಆಲಿಂಗಿಸುವುದಾದರೆ ಮತ್ತು ವ್ಯಭಿಚಾರದ ಪ್ರಾರಂಭ ಕ್ರಿಯೆಗಳು ಆಕೆಯಿಂದ ನಡೆಸಲ್ಪಡುವುದಾದರೆ ಆಕೆ ವ್ಯಭಿಚಾರವನ್ನು ಪೂರ್ಣಗೊಳಿಸದಿದ್ದರೂ ತನ್ನ ನಗ್ನತೆ ಪ್ರಕಟಿಸುವುದಾದರೆ, ಬಹುದೈವರಾಧಕಳಾದರೆ, ನೀನು ನಂಬುವ ಪರಿಶುದ್ಧ ದೇವನ ಬಗ್ಗೆ ಆಕೆ ಬೇಸರಗೊಂಡಿದ್ದರೆ, ಆಕೆ ಈ ಎಲ್ಲ ದುರ್ಗುಣಗಳಿಂದ ಹಿಂದೆಸರಿಯದ್ದಿದ್ದರೆ ಆಕೆಗೆ ವಿವಾಹ ವಿಚ್ಛೇದನೆ ನೀಡಬಹುದು. ಏಕೆಂದರೆ ಆಕೆ ತನ್ನ ವರ್ತನೆಗಳಿಂದ ನಿನ್ನಿಂದ ಬೇರೆಯಾಗಿರುವಳು. ಆಕೆ ಈಗ ನಿನ್ನ ಶರೀರದ ಭಾಗವಾಗಿ ಉಳಿದಿಲ್ಲ. ಆದುದರಿಂದ ನೀನು ಈಗ ನಪುಂಸಕನ ಹಾಗೆ ಆಕೆಯೊಂದಿಗೆ ಬಾಳಬಾರದು. ಆಕೆ ಒಂದು ಕೊಳೆತು ಹೋದ ಅಂಗದ ಹಾಗೆ ಆಗಿದ್ದಾಳೆ. ಅದನ್ನು ಕಡಿದು ಹಾಕಬೇಕಾಗಿದೆ. ಹಾಗೆ ಮಾಡದಿದ್ದರೆ ಉಳಿದ ಅಂಗಗಳಿಗೂ ಹಾನಿ ಉಂಟಾಗುವುದು ಮತ್ತು ನೀನು ಸಾಯುವೆ. ಸುವಾರ್ತೆಗಳು ಹೇಳುತ್ತವೆ ಆಣೆ ಹಾಕಬಾರದೆಂದು. ಆದರೆ ಪವಿತ್ರ ಖುರ್ಆನ್ ಅನಾವಶ್ಯಕ ಪ್ರಮಾಣ ಮಾಡುವುದರಿಂದ ನಿಮ್ಮನ್ನು ತಡೆಯುತ್ತದೆ. ಏಕೆಂದರೆ ಕೆಲವು ಸಂದರ್ಭಗಳಲ್ಲಿ ಪ್ರಮಾಣ ಮಾಡುವುದು ತೀರ್ಮಾನ ಮಾಡಲು ಸಹಕಾರಿಯಾಗುತ್ತದೆ. ಯಾವುದೇ ಸಾಕ್ಷವನ್ನು ದೇವನು ನಿರರ್ಥಕಗೊಳಿಸಲು ಇಚ್ಛಿಸುವುದಿಲ್ಲ. ಹಾಗೆ ಮಾಡಿದರೆ ಅವನ ಚಾಣ್ಮೆಗೆ ಕುಂದುಂಟಾಗುತ್ತದೆ. ಒಂದು ವಿವಾದದಲ್ಲಿ ಒಬ್ಬನು ಸಾಕ್ಷ್ಯ ನೀಡದಿದ್ದರೆ ತೀರ್ಪು ನೀಡಲು ದೇವನ ಸಾಕ್ಷ್ಯ ಅವಶ್ಯಕವಾಗುತ್ತದೆ ಆಣೆ ಹಾಕುವುದು ದೇವನನ್ನು ಸಾಕ್ಷಿಯನ್ನಾಗಿ ಮಾಡುತ್ತದೆ. ಸ್ವಾರ್ಥಿಗಳು, ದೌರ್ಜನ್ಯಗಾರನನ್ನು ಎದುರಿಸಬಾರದೆಂದು ಹೇಳುವಹಾಗೆ ಪವಿತ್ರ ಖುರ್ಆನ್ ಹೇಳುವುದಿಲ್ಲ. ಅದು ಹೇಳುವುದು ಹೀಗೆ **ಜಝಾಉ ಸಯ್ಯಿಅತಿನ್ ಸಯ್ಯಿಅತುನ್ ಮಿಸ್‌ಲುಹಾ ಫ ಮನ್ ಅಫಾ ವ ಅಸ್‌ಲಹ ಫ ಅಜ್‌ರುಹೂ ಅಲಲ್ಲಾಹಿ.** ಕೆಡುಕಿಗಿರುವ ಪ್ರತಿಫಲ ಅದಕ್ಕೆ ಸಮಾನವಾದ ಕೆಡುಕಾಗಿದೆ. ಆದರೆ ಯಾರಾದರೂ ಕ್ಷಮೆ ನೀಡಿದರೆ (ಮತ್ತು ಅದರ ಪರಿಣಾಮ ಒಳಿತುಂಟಾದರೆ ಅದರ ಪ್ರತಿಫಲ ಅವನಿಗೆ ಅಲ್ಲಾಹನಿಂದ ಲಭಿಸುವುದು. (ಪವಿತ್ರ ಖುರ್ಆನ್ 42:41)

ಪವಿತ್ರ ಖುರ್ಆನ್ ಪ್ರಕಾರ ಪ್ರತಿಯೊಂದು ಸ್ಥಳದಲ್ಲಿ ಪ್ರತೀಕಾರ ಸ್ತುತ್ಯಾರ್ಹವಲ್ಲ. ಅದೇ ರೀತಿ ಪ್ರತಿಯೊಂದು ಸ್ಥಳದಲ್ಲಿ ಕ್ಷಮಿಸುವುದು ಸಹ ಹೊಗಳಿಕೆಗೆ ಅರ್ಹವಲ್ಲ. ಸಂದರ್ಭವನ್ನು ನೋಡಿಕೊಳ್ಳಬೇಕು. ಪ್ರತೀಕಾರ ಮಾಡುವುದು ಮತ್ತು ಕ್ಷಮಿಸುವುದು ಸಂದರ್ಭ ಮತ್ತು ಅವಶ್ಯಕತೆಗೆ ಅನುಸಾರವಾಗಿರಬೇಕು. ಯಾವುದೇ ನಿಯಂತ್ರಣವಿಲ್ಲದೆ ಹೀಗೆ ಮಾಡಬಾರದು. ಪವಿತ್ರ ಖುರ್ಆನ್ ಉದ್ದೇಶಿಸುವುದು ಇದನ್ನೇ ಆಗಿದೆ ಸುವಾರ್ತೆಗಳು ಶತ್ರುವನ್ನು ಪ್ರೀತಿಸಲು ಹೇಳುವ ಹಾಗೆ ಪವಿತ್ರ ಖುರ್ಆನ್ ಹೇಳುವುದಿಲ್ಲ. ಅದು ಹೇಳುವುದೇನೆಂದರೆ ನಿನ್ನ ವೈಯ್ಯಕ್ತಿಕ ಕಾರಣಗಳಿಂದ ನೀನು ಯಾರನ್ನೂ ಶತ್ರುವಾಗಿ ಗಣಿಸಬೇಡ. ನೀನು ಎಲ್ಲರೊಂದಿಗೂ ಸಹಾನುಭೂತಿ ಹೊಂದಿದವನಾಗಬೇಕು. ಆದರೆ ನಿನ್ನ ದೇವನ ಶತ್ರು, ನಿನ್ನ ಸಂದೇಶವಾಹಕರ ಶತ್ರು ಮತ್ತು ಅಲ್ಲಾಹನ ಗ್ರಂಥದ ಶತ್ರು ಮಾತ್ರ ನಿನ್ನ ಶತ್ರು ಆಗಿರುವನು. ಆದರೆ ನೀನು ಅಂತಹ ಜನರನ್ನು ನಿನ್ನ ಆಹ್ವಾನ ಮತ್ತು ಪ್ರಾರ್ಥನೆಯಿಂದ ವಂಚಿತರನ್ನಾಗಿ ಮಾಡಬೇಡ. ನೀನು ಅವರ ಕೆಲಸಗಳನ್ನು ದ್ವೇಷಿಸಬೇಕು ಹೊರತು ಸ್ವತಃ ಅವರನ್ನಲ್ಲ. ಅವರನ್ನು ಸರಿಪಡಿಸಲು ಪ್ರಯತ್ನಿಸು. ಇದರ ಬಗ್ಗೆ ಪವಿತ್ರ ಖುರ್ಆನ್ ಹೀಗೆ ಹೇಳಿದೆ: **ಇನ್ನಲ್ಲಾಹ ಯಅ್‌ಮುರು ಬಿಲ್‌ಅದಲಿ ವಲ್ ಇಹ್‌ಸಾನಿ ವ ಈತಾಇಝಿಲ್ ಖುರ್‌ಬಾ** ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗಲಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. (ಪವಿತ್ರ ಖುರ್ಆನ್ 16:91). ಪವಿತ್ರ ಖುರ್ಆನಿನ ಈ ವಚನ ಸೂಚಿಸುವುದೇನೆಂದರೆ ನೀವು ಎಲ್ಲಾ ಮನುಷ್ಯರೊಂದಿಗೆ ನ್ಯಾಯ ನಿಷ್ಠೆಯಿಂದ ವರ್ತಿಸಬೇಕೆಂದಾಗಿದೆ. ನಿಮಗೆ ಯಾವ ಒಳಿತನ್ನೂ ಮಾಡದವರಿಗೂ ನೀವು ಒಳಿತನ್ನು ಮಾಡಬೇಕು. ನೀವು ಎಂತಹ ಸಹಾನುಭೂತಿಯಿಂದ ವರ್ತಿಸಬೇಕೆಂದರೆ ಅವರು ನಿಮ್ಮ ವಾಸ್ತವಿಕ ಸಂಬಂಧಿಕರೋ ಎಂಬಂತೆ. ತಾಯಿ ತನ್ನ ಮಕ್ಕಳೊಂದಿಗೆ ವರ್ತಿಸುವ ಹಾಗೆ. ಏಕೆಂದರೆ ಸಹಾನುಭೂತಿಯಿಂದ ಉಪಕಾರ ಮಾಡುವವನಲ್ಲಿ ಒಂದು ರೀತಿಯ ತೋರಿಕೆ ಇರುತ್ತವೆ. ಅವನು ಕೆಲವು ಸಲ ಮಾಡಿದ ಉಪಕಾರದ ಬಗ್ಗೆ ಚುಚ್ಚು ಮಾತುಗಳನ್ನು ಹೇಳುತ್ತಾನೆ. ಆದರೆ ತಾಯಿಯ ಹಾಗೆ ಸಹಜ ಪ್ರೀತಿಯಿಂದ ಒಳಿತನ್ನು ಮಾಡುವವನು ಅದರ ಬಗ್ಗೆ ಹೆಮ್ಮೆ ಕೊಚ್ಚುವುದಿಲ್ಲ. ಒಳಿತಿನ ಅತ್ಯಂತ ಉನ್ನತ ಮಟ್ಟ ತಾಯಿಯ ಹಾಗೆ ವರ್ತಿಸುವುದಾಗಿದೆ. ಈ ವಚನ ಮನುಷ್ಯರಿಗೆ ಸಂಬಂಧಿಸಿ ಮಾತ್ರವಲ್ಲ ದೇವನಿಗೆ ಸಂಬಂಧಿಸಿಯೂ ಆಗಿದೆ. ದೇವನಿಗೆ ಸಂಬಂಧಿಸಿ ನ್ಯಾಯನಿಷ್ಠೆಯ ವರ್ತನೆ ಅವನು ನೀಡಿದ

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

# ಪವಿತ್ರ ಖುರ್‌ಆನ್‌ಗಿರುವ ಅನ್ಯ ಗ್ರಂಥಗಳ ಮೇಲೆ ಶ್ರೇಷ್ಠತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಖಲೀಫರ ಪವಿತ್ರ ಅಧ್ಯಾಪನೆಗಳ ಬೆಳಕಿನಲ್ಲಿ

ನೀವು ಪವಿತ್ರ ಖುರ್‌ಆನ್ ಅನ್ನು ಎಷ್ಟು ಹೆಚ್ಚು ಓದುತ್ತೀರೋ ಅಷ್ಟು ಹೆಚ್ಚು ಆನಂದ ಹಾಗೂ ನೆಮ್ಮದಿ ಪಡೆಯುತ್ತೀರಿ

**ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್**(ರಝಿಯಲ್ಲಾಹು ಅನ್‌ಹು) **ಹೇಳುತ್ತಾರೆ:**

ನಾನು ಪ್ರಪಂಚದ ಅನೇಕ ಪುಸ್ತಕಗಳನ್ನು ಓದಿದ್ದೇನೆ ಮತ್ತು ಅತೀ ಹೆಚ್ಚು ಸಲ ಓದಿದ್ದೇನೆ, ಆದರೆ ಓದುವ, ಅಧ್ಯಯನ ಮಾಡುವ ಮತ್ತು ಮತ್ತೆ ಮತ್ತೆ ಯೋಚಿಸುವ ಮೂಲಕ ದುಃಖಕ್ಕೆ ಕಾರಣವಾಗದ ಸಾಂತ್ವನ ಹಾಗೂ ಸಂತೋಷ ನಿಡುವ, ಅಂತಹ ಮಸ್ತಕವನ್ನು ನಾನು ಜಗತ್ತಿನಲ್ಲಿ ನೋಡಿಲ್ಲ. ಹೌದು ನನ್ನ ವಯಸ್ಸು ನನ್ನ ಅಧ್ಯಾಯನಶಿಲ ಸವಭಾವ ಪುಸ್ತಕಗಳ ಮೇಲಿನ ನನ್ನ ಓಲವು, ಒಳನೋಟ ಮತ್ತು ಗಣನೀಯ ಅನುಭವದ ಆಧಾರದ ಮೇಲೆ ಅಂತಹ ಯಾವುದೇ ಪುಸ್ತಕವಿಲ್ಲ ಎಂದು ಹೇಳಲು ನನಗೆ ಧೈರ್ಯವನ್ನು ನೀಡುತ್ತದೆ ಎಂದು ನಿಮಗೆ ಮತ್ತೊಮ್ಮೆ ಭರವಸೆ ನಿಡುತ್ತೇನೆ. ಅಂತಹ ಪುಸ್ತಕ ಇದೆ ಎಂದಾದರೆ ಅದು ಒಂದೇ ಒಂದು ಮಾತ್ರ, ಅದು ಯಾವ ಪುಸ್ತಕ? **ಝಾಲಿಕಲ್ ಕಿತಾಬು ಲಾ ರೈಬ ಫೀಹೀ** ಎಂತಹ ಪ್ರೀಯವಾದ ಹೆಸರಾಗಿದೆ. ಪವಿತ್ರ ಖುರ್‌ಆನ್ ಅನ್ನು ಹೊರತುಪಡಿಸಿ ಅಂತಹ ಯಾವುದೇ ಪುಸ್ತಕವಿಲ್ಲ ಎಂದು ನಾನು ನಿಜವಾಗಿ ಹೇಳುತ್ತೇನೆ, ನೀವು ಅದನ್ನು ಎಷ್ಟು ಹೆಚ್ಚು ಓದುತ್ತೀರೋ ಮತ್ತು ನೀವು ಅದನ್ನು ಹೆಚ್ಚು ಧ್ಯಾನಿದಷ್ಟು ಹೆಚ್ಚು ಸಂತೋಷ ಮತ್ತು ಉತ್ಸಾಹ ಹೆಚ್ಚಾಗುತ್ತದೆ. ಉದಾಸೀನತೆ ತಾಳುವ ಬದಲು ಅದರ ಮೇಲೆ ಸಮಯ ಕಳೆಯಿರಿ. ಕ್ರೀಯಶೀಲರಾಗಲು ಕನಿಷ್ಠ ಉತ್ಸಾಹ ಬರುತ್ತದೆ ಮತ್ತು ಮನಸ್ಸಿನಲ್ಲಿ ನಂಬಿಕೆ ಮತ್ತು ಭರವಸೆ ಹಗೂ ಆಧ್ಯಾತ್ಮದ ಅಲೆಗಳು ಏರುತ್ತವೆ. **(ಹಖಾಎಖುಲ್ ಫುರ್ಖಾನ್, ಸಂಪುಟ-1, ಪುಟ-34)**

ಪವಿತ್ರ ಖುರ್‌ಆನ್‌ನ ಒಂದೇ ಒಂದು ಶ್ಲೋಕವನ್ನು ರದ್ದುಗೊಳಿಸಲಾಗಿಲ್ಲ

**ಹಝ್ರತ್ ಖಲೀಫತುಲ್ ಮಸೀಹ್ ಸಾನಿ**(ರಝಿಯಲ್ಲಾಹು ಅನ್‌ಹು) **ಹೇಳುತ್ತಾರೆ:**

ಪವಿತ್ರ ಖುರ್‌ಆನ್ ಎಲ್ಲರಿಗೂ ಅನ್ವಯಿಸುತ್ತದೆ. ಆದ್ದರಿಂದ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ತನ್ನ ಮರಣದ ದಿನದವರೆಗೂ ಪವಿತ್ರ ಖುರ್‌ಆನ್‌ನ ಎಲ್ಲಾ ಆಜ್ಞೆಗಳಿಗೆ ಜವಾಬ್ದಾರರಾಗಿದ್ದರು ಮತ್ತು ಅವುಗಳನ್ನು ಅನುಸರಿಸುವುದನ್ನು ಮುಂದುವರೆಸಿದರು. ಮತ್ತು ಪವಿತ್ರ ಖುರ್‌ಆನ್ ತನ್ನ ಸುರಕ್ಷತೆಯ ಬಗ್ಗೆ ಮುಕ್ತ ಪದಗಳಲ್ಲಿ ಪುರಾವೆಗಳನ್ನು ನೀಡುತ್ತಿದೆ, **ಇನ್ನಾ ನಹ್‌ನು ನಝ್ಝಲ್ ನಝ್ಝಿಕ್‌ರ ವ ಇನ್ನಾ ಲಹೂ ಲಹಾಫಿಝೂನ್** ಎಂಬ ಆಯತ್‌ನಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ, ಈ ಘಟನೆಗಳ ಉಪಸ್ಥಿತಿಯಲ್ಲಿ, ಪವಿತ್ರ ಖುರ್‌ಆನ್‌ನ ಕೆಲವು ಆಯತ್‌ಗಳನ್ನು ರದ್ದುಗೊಳಿಸಲಾಗಿದೆ ಎಂದು ಭಾವಿಸಲಾಗುವುದಿಲ್ಲ. ಈ ಸಮಯದಲ್ಲಿ ಜಗತ್ತಿನಲ್ಲಿ ಇರುವ ಪವಿತ್ರ ಖುರ್‌ಆನ್‌ನ ಒಂದೇ ಒಂದು ಶ್ಲೋಕವನ್ನು ರದ್ದುಗೊಳಿಸಲಾಗಿಲ್ಲ. ಮತ್ತು ಅದರಲ್ಲಿ ಯಾವುದೇ ವ್ಯತ್ಯಾಸವಿಲ್ಲ, ಇದಕ್ಕಾಗಿ ನಾವು ನಮಗೆ ಮನವರಿಕೆ ಮಾಡಿಕೊಳ್ಳಲು ಆವೃತ್ತಿಯನ್ನು ಸಮರ್ಥಿಸಲು ಫತ್ವಾವನ್ನು ನೀಡುವ ಅಗತ್ಯವಿಲ್ಲ. ಇದು ಅದರ ಪ್ರಸ್ತುತ ರೂಪದಲ್ಲಿ ಪರಿಪೂರ್ಣ ಮತ್ತು ದೋಷರಹಿತವಾಗಿದೆ, ಮತ್ತು ಇಸ್ಲಾಂನ ಎಲ್ಲಾ ವಿರೋಧಿಗಳು ಸೇರಿಯೂ ಅದರಲ್ಲಿ ಯಾವುದೇ ವ್ಯತ್ಯಾಸವನ್ನು ಸಾಬೀತುಪಡಿಸಲು ಬಯಸಿದರೂ ಸಹ, ಅದನ್ನು ಮಾಡಲು ಸಾಧ್ಯವಿಲ್ಲ, ಮತ್ತು ನಾವು ಅಲ್ಲಾಹನ ಅನುಗ್ರಹದಿಂದ ದೃಢೀಕರಿಸುತ್ತೇವೆ, ಯಾವ ಎದುರಾಳಿ ಪಕ್ಷವು ಪವಿತ್ರ ಖುರ್‌ಆನ್‌ನಲ್ಲಿ ವ್ಯತ್ಯಾಸವನ್ನು ಸಾಬೀತುಪಡಿಸಲು ಬಯಸಿದರೆ ನಾವು ಅವರನ್ನು ಪವಿತ್ರ ಖುರ್‌ಆನ್‌ನ ಮೂಲಕವೇ ಅದನ್ನು ತಿರಸ್ಕರಿಸಬಹುದು.

**(ತಫ್ಸೀರ್ ಕಬೀರ್, ಸಂಪುಟ-2, ಪುಟ-101)**

ಎಲ್ಲಾ ದೈವಿಕ ಗ್ರಂಥಗಳ ಸತ್ಯಗಳು ಪವಿತ್ರ ಖುರ್‌ಆನ್‌ನ ಒಳಗೆ ಬಂದಿವೆ

**ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್**(ರಹಿಮಹುಲ್ಲಾಹ್) **ಹೇಳುತ್ತಾರೆ:**

ಸರ್ವಶಕ್ತನಾದ ಅಲ್ಲಾಹನು ಸೂರಾ ಅಲ್-ಅನ್‌ಆಮ್‌ನಲ್ಲಿ ಹೇಳುತ್ತಾನೆ, **ವಹಾಝಾ ಕಿತಾಬುನ್ ಅನ್‌ಝಲ್ನಾಹು ಮುಬಾರಕುನ್ ಫತ್ತಬಿಊಹು ವತ್ತಖು ಲಅಲ್ಲಕುಮ್ ತುರ್‌ಹಮೂನ್** ಇದರರ್ಥ ಈ ಪವಿತ್ರ ಖುರ್‌ಆನ್ ಎಂತಹ ಪುಸ್ತಕವಗಿದೆ ಮತ್ತು ಎಂತಹ ಒಂದು ಶರಿಯ್ಯತ್ (ಕಾನೂನ ಸಂಹಿತೆ) ಆಗಿದೆ ಎಂದರೆ ಅದು ಮಂಗಳದಾಯಕವಾಗಿದೆ. ಎಲ್ಲಾ ದೈವಿಕ ಪುಸ್ತಕಗಳ ಸದ್ಗುಣಗಳು ಮತ್ತು ಅವುಗಳ ಮೂಲಭೂತ ಸತ್ಯಗಳು ಅದರಲ್ಲಿ ಹರಿದು ಬಂದಿವೆ. ಈಗ ಈ ಪವಿತ್ರ ಗ್ರಂಥವನ್ನು ಸಂಪೂರ್ಣವಾಗಿ ಅನುಸರಿಸಿ. **(ಇತ್ತಬಿಊಹೂ)** ಇದು ನಿಮಗೆ ಎರಡು ಪ್ರಯೋಜನಗಳನ್ನು ನೀಡುತ್ತದೆ. ಒಂದು ನೀವು ದೇವರ ಆಶ್ರಯದಲ್ಲಿ ಬರುತ್ತೀರಿ. ದೇವರು ನಿಮ್ಮ ಗುರಾಣಿಯಾಗುತ್ತಾನೆ ಮತ್ತು ಅವನು ನಿಮ್ಮನ್ನು ಎಲ್ಲಾ ದುಷ್ಟ ಚಿಂತೆಗಳಿಂದ ರಕ್ಷಿಸುತ್ತಾನೆ ಏಕೆಂದರೆ ಈ ಪವಿತ್ರ ಪುಸ್ತಕವನ್ನು ಅನುಸರಿಸದೆ, ಧರ್ಮನಿಷ್ಠೆಯ ಸರಿಯಾದ ಮಾರ್ಗಗಳ ಜ್ಞಾನವೂ ಲಭಿಸುವುದಿಲ್ಲ ಮತ್ತು ಅವುಗಳನ್ನು ಅನುಸರಿಸುವುದರಿಂದ, ಒಬ್ಬ ವ್ಯಕ್ತಿಯು ಸರ್ವಶಕ್ತನಾದ ಅಲ್ಲಾಹನ ಸಂಪೂರ್ಣ ರಕ್ಷಣೆಗೆ ಬರಲು ಸಾಧ್ಯವಿಲ್ಲ. ಎರಡನೇಯು ಪ್ರಯೋಜನವೆಂದರೆ **(ತುರ್‌ಹಮೂನ್)** ಸರ್ವಶಕ್ತನಾದ ಅಲ್ಲಾಹನ ಅನುಗ್ರಹಕ್ಕೆ ನೀವು ಅರ್ಹರಾಗುತ್ತೀರಿ ಮತ್ತು ಅವನ ಅಪಾರವಾದ ಅನುಗ್ರಹಗಳನ್ನು ಪಡೆಯುವಿರಿ, ಇದು ದೈಹಿಕ ಮತ್ತು ಆಧ್ಯಾತ್ಮಿಕ ಸೌಕರ್ಯವನ್ನು ನೀಡುತ್ತದೆ. **(ಖುತ್‌ಬ ಜುಮುಅ ಮೇ 5, 1967)**

ಪ್ರಾರಂಭದಿಂದ ಅಂತ್ಯದವರೆಗೆ ಎಲ್ಲಾ ಶೈಲಿಯ ಸೂಚನೆಗಳನ್ನು ಕಲಿಸುವ ಪುಸ್ತಕ

**ಹಝ್ರತ್ ಖಲೀಫತುಲ್ ಮಸೀಹ್ ರಾಬಿ**(ರಹಿಮಹುಲ್ಲಾಹ್) **ಹೇಳುತ್ತಾರೆ:**

ಪವಿತ್ರ ಖುರ್‌ಆನ್ ಮಾರ್ಗದರ್ಶನದ ಪುಸ್ತಕವಾಗಿದ್ದು, ಅದರಿಂದ ಮಾರ್ಗದರ್ಶನವನ್ನು ಬಯಸುವ ಪ್ರತಿಯೊಬ್ಬ ವ್ಯಕ್ತಿಗೆ ಮೊದಲ ಹೆಜ್ಜೆಯಿಂದ ಕೊನೆಯವರೆಗೆ ಮಾರ್ಗದರ್ಶನದ ಎಲ್ಲಾ ಮಾರ್ಗಗಳನ್ನು ಬೋಧಿಸುತ್ತದೆ. ಮತ್ತು ಇದು ಪ್ರತಿ ಹಂತವನ್ನು ಬೆಂಬಲಿಸುತ್ತದೆ. ಇದೊಂದು ಮಾರ್ಗದರ್ಶನ ನಿಡುವ ಎಂತಹ ಪುಸ್ತಕವಾಗಿದೆ ಎಂದರೆ ಇದು ಎಲ್ಲಾ ಹಂತಗಳಲ್ಲಿರುವ ಅಪಾಯಗಳನ್ನು ತಿಳಿದಿರುತದೆ ಮತ್ತು ಪ್ರತಿ ಹೆಜ್ಜೆಯಲ್ಲಿ ಪ್ರಯಾಣಿಕ ಮನನುಷ್ಯನಿಗೆ ಮಾರ್ಗದರ್ಶನದ ಎಲ್ಲಾ ಮಾರ್ಗಗಳನ್ನು ಕಲಿಸುತ್ತದೆ ಮತ್ತು ಹೊಸ ಧೈರ್ಯವನ್ನು ನೀಡುತ್ತದೆ. ಒಟ್ಟಿನಲ್ಲಿ ಒಂದು ಕ್ಷಣಕ್ಕೂ ಸಹ ಮಾರ್ಗದರ್ಶನ ಬಯಸುವವರ ಕೈ ಬಿಡುವುದಿಲ್ಲ. ಈ ನಿಟ್ಟಿನಲ್ಲಿ ನಾವು ಪವಿತ್ರ ಖುರ್‌ಆನ್‌ನ ಅನ್ನು ಪರಿಗಣಿಸಿದಾಗ, **ಹಸ್‌ಬುನಾ ಕಿತಾಬುಲ್ಲಾಹ್** ಎಂಬ ಅರ್ಥವು ತಿಳಿದುಬರುತ್ತದೆ. ಸತ್ಯವೆಂದರೆ ಈ ಪುಸ್ತಕವು ಪ್ರಾಮಾಣಿಕತೆ, ಧರ್ಮನಿಷ್ಠೆ ಮತ್ತು ನಾವು ಸೂಚಿಸಿದ ಮಾರ್ಗಗಳನ್ನು ಅನುಸರಿಸುತ್ತೇವೆ ಎಂಬ ದೃಢಸಂಕಲ್ಪದಿಂದ ಮಾರ್ಗದರ್ಶನವನ್ನು ಬಯಸುವವರಿಗೆ ಈ ಪುಸ್ತಕವು ಎಲ್ಲ ರೀತಿಯಲ್ಲೂ ಸಾಕಾಗುತ್ತದೆ. ಮತ್ತು ಅದರ ನಂತರ ಬೇರೇ ಯಾರ ಅವಶ್ಯಕತೆಯೂ ಇರುವುದಿಲ್ಲ. **(ಖುತ್ಬಾತೆ ತಾಹಿರ್, ಸಂಪುಟ-2, ಪುಟ-579)**

ಪವಿತ್ರ ಖುರ್‌ಆನ್ ಎಲ್ಲಾ ರೀತಿಯ ಬೋಧನೆಗಳು ಮತ್ತು ಜೀವನ ಸಂಹಿತೆಗಳ ಸಂಗ್ರಹವಾಗಿದೆ

**ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್**(ಅತಬಿಅ) **ಹೇಳುತ್ತಾರೆ:**

ಪವಿತ್ರ ಖುರ್‌ಆನ್‌ನ ಬೋಧನೆಯು ಎಲ್ಲಾ ರೀತಿಯ ಬೋಧನೆಗಳು ಮತ್ತು ಜೀವನದ ನಿಯಮಗಳ ಸಂಗ್ರಹವಾಗಿದೆ. ಇದು ಆಧ್ಯಾತ್ಮಿಕತೆಯ ಉನ್ನತ ಗುಣಮಟ್ಟವನ್ನು ಕಲಿಸುತ್ತದೆ. ಇದು ನೈತಿಕತೆಯ

*(ಪುಟ ಸಂಖೆ 22 ರಲ್ಲಿ ಮುಂದುವರಿಸಲಾಗಿದೆ)*

ಯಾರು ಪವಿತ್ರ ಖುರ್‌ಆನಿನ ಏಳುನೂರು ಆಜ್ಞೆಗಳಲ್ಲಿ ಒಂದು ಚಿಕ್ಕದಾದ ಆಜ್ಞೆಯನ್ನು ಕೂಡ ಉಲ್ಲಂಘಿಸುತ್ತಾನೋ ಅವನು ತನ್ನ ಮೋಕ್ಷದ ಬಾಗಿಲನ್ನು ತನ್ನ ಕೈಗಳಿಂದಲೇ ಮುಚ್ಚಿಬಿಡುತ್ತಾನೆ. (ಹಝ್ರತ್ ಮಸೀಹ್ ಮೌಊದ್(ಅ))

ನೀವು ಪವಿತ್ರ ಖುರ್‌ಆನನ್ನು ಪರಿತ್ಯಜಿಸಲಾದ ವಸ್ತುವಿನ ಹಾಗೆ ಬಿಟ್ಟು ಬಿಡಬೇಡಿರಿ. ಅದರಲ್ಲಿಯೇ ನಿಮ್ಮ ಜೀವಿತವು ಅಡಕವಾಗಿದೆ. ಪವಿತ್ರ ಖುರ್‌ಆನಿಗೆ ಗೌರವ ನೀಡುವವರು ಆಕಾಶದಲ್ಲಿ ಗೌರವಿಸಲ್ಪಡುವರು.

ಮಾನವರಿಗೆ ಭೂಲೋಕದಲ್ಲಿ ಪವಿತ್ರ ಖುರ್‌ಆನಿನ ಹೊರತು ಈಗ ಬೇರೆ ಗ್ರಂಥವಿಲ್ಲ, ಎಲ್ಲಾ ಆದಮ್ ಸಂತತಿಗಳಿಗೆ ಈಗ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವಸಲ್ಲಂ ರ ಹೊರತು ಅನ್ಯ ಸಂದೇಶ ವಾಹಕನಾಗಲಿ ಶಿಫಾರಸು ಗಾರನಾಗಲೀ ಇಲ್ಲ.

ವಾಸ್ತವತೆ ಏನೆಂದರೆ ಪವಿತ್ರ ಖುರ್‌ಆನ್ ಅನ್ನು ಪಠಿಸುವುದರೊಂದಿಗೆ ಪವಿತ್ರ ಖುರ್‌ಆನ್‌ನ ಬಗ್ಗೆ ಪ್ರೀತಿಯನ್ನು ಬೆಳೆಸುವುದು ಸಹ ಬಹಳ ಮುಖ್ಯವಾಗಿದೆ. ತದನಂತರ ಮಗುವೂ ಸ್ವತಃ ಓದಲು ಇಷ್ಟಪಡುತ್ತದೆ.

ಪೋಷಕರೂ ಪವಿತ್ರ ಖುರ್‌ಆನ್ ಪಠಿಸುವ ಮತ್ತು ಅದರ ಬಗ್ಗೆ ಧ್ಯಾನಿಸುವ ಅಭ್ಯಾಸವನ್ನು ಬೆಳೆಸಿದಾಗ ಪವಿತ್ರ ಖುರ್‌ಆನ್‌ನ ಮೇಲಿನ ಪ್ರೀತಿ ಮಕ್ಕಳಲ್ಲಿಯೂ ಹುಟ್ಟುತ್ತದೆ.

ಪವಿತ್ರ ಖುರ್‌ಆನ್ ಮತ್ತು ಅದರ ಪ್ರೀತಿಯ ನಿಜವಾದ ಗೌರವವೆಂದರೆ ಅದರ ಆಜ್ಞೆಗಳನ್ನು ಅನುಸರಿಸಲು ಶ್ರಮಿಸುವುದು ಮತ್ತು ಅದರ ಆಜ್ಞೆಗಳನ್ನು ಮತ್ತು ನಿಷೇಧಾಜ್ಞೆಗಳನ್ನು ನಮ್ಮ ಜೀವನದ ಒಂದು ಭಾಗವಾಗಿ ಮಾಡುವುದಾಗಿದೆ.

ಪವಿತ್ರ ಖುರ್‌ಆನ್ ಅನ್ನು ಮುಗಿಸಿದ ನಂತರ, ಮಕ್ಕಳು ನಿಯಮಿತವಾಗಿ ಪವಿತ್ರ ಖುರ್‌ಆನ್ ಪಠಿಸುವ ಅಭ್ಯಾಸವನ್ನು ಪಡೆಯಬೇಕು ಎಂಬ ಅಂಶವನ್ನು ತಾಯಿ ಮತ್ತು ತಂದೆ ಸಹ ಮೇಲ್ವಿಚಾರಣೆ ಮಾಡಬೇಕು ಮತ್ತು ಚಿಂತಿಸಬೇಕು.

ಅಲ್ಲಾಹನು ನಮ್ಮನ್ನು ಮತ್ತು ನಮ್ಮ ಸಂತತಿ ಮತ್ತು ಖಿಯಾಮತ್ ದಿನದವರೆಗೆ ಬರುವ ನಮ್ಮ ಮುಂದಿನ ಪೀಳಿಗೆಗಳು ಪವಿತ್ರ ಖುರ್‌ಆನ್‌ನ ಮೇಲೆ ನಿಜವಾದ ಪ್ರೀತಿಯನ್ನಿರಿಸಿ ಅದರ ಬೋಧನೆಗಳನ್ನು ಅನುಸರಿಸುವವರಂತೆ ಮಾಡಲಿ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಬೈತುಲ್ ಲಂಡನ್‌ನ **'ಮಸ್ಜಿದ್ ಫುತೂಹ್ (ಮಾರ್ಡನ್)'** ನಿಂದ **16-12-2011** ರಂದು ನೀಡಿದ **ಖುತ್‌ಬ ಜುಮುಅವನ್ನು** ಬದರ್ ವರಪತ್ರಿಕೆಯ ವಿಶೇಷ ಸಂಚಿಕೆ "ಪವಿತ್ರ ಖುರ್‌ಆನ್"ಗೆ ಸಂಬಂಧಿಸಿದಂತೆ ಓದುಗರ ಹಿತಾದೃಷ್ಟಿಯಿಂದ ಪ್ರಸ್ತುತಪಡಿಸಲಾಗುತ್ತಿದೆ.

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಮಾಶಾ ಅಲ್ಲಾಹ್, ನಮ್ಮ ಮಕ್ಕಳು ಸಾಮಾನ್ಯವಾಗಿ ಚಿಕ್ಕ ವಯಸ್ಸಿನಲ್ಲಿ ಪವಿತ್ರ ಖುರ್‌ಆನ್ ಅನ್ನು ಓದಿ ಮುಗಿಸುತ್ತಾರೆ. ನಮ್ಮ ಮಕ್ಕಳು ಪವಿತ್ರ ಖುರ್‌ಆನ್ ಅನ್ನು ಶೀಘ್ರದಲ್ಲೇ ಮುಗಿಸಬೇಕು ಎಂದು ಯಾರ ತಾಯಂದಿರು ಹೆಚ್ಚು ಚಿಂತಿತರಾಗಿರುತ್ತಾರೊ ಅವರು ಅದಕ್ಕೆ ಬಹಳ ಶ್ರಮವಹಿಸುತ್ತಾರೆ. ಇಲ್ಲಿಯೂ ಮತ್ತು ನಾನು ವಿವಿಧ ದೇಶಗಳಿಗೆ ಹೋದಾಗ, ಮಕ್ಕಳು ಮತ್ತು ಪೋಷಕರು ನನ್ನ ಮುಂದೆ ಮಕ್ಕಳಿಗೆ ಪವಿತ್ರ ಖುರ್‌ಆನ್ ಪಠಿಸಲು ಮತ್ತು ಆಮೀನ್ ಮಾಡಿಸಲು ಇಷ್ಟಪಡುತ್ತಾರೆ. ಆದರೆ ಪವಿತ್ರ ಖುರ್‌ಆನ್ ಅನ್ನು ಒಮ್ಮೆ ಮುಗಿಸಿದ ನಂತರ, ಮಗುವಿಗೆ ಅದನ್ನು (ಪವಿತ್ರ ಖುರ್‌ಆನನ್ನು) ಪುನರಾವರ್ತಿಸಲು ಮತ್ತು ಪವಿತ್ರ ಖುರ್‌ಆನ್ ಅನ್ನು ಸ್ಥಿರತೆಯಿಂದ ಓದುವ ಅಭ್ಯಾಸವನ್ನು ಮಾಡಿಸಲು ಸಾಮಾನ್ಯವಾಗಿ ಪವಿತ್ರ ಖುರ್‌ಆನ್ ಅನ್ನು ಮೊದಲ ಸಲ ಮುಗಿಸಲು ಮಾಡುವಷ್ಟು ಪ್ರಯತ್ನ ಮತ್ತು ಶ್ರಮ ವಹಿಸುವುದಿಲ್ಲ ಎಂದು ನೋಡಿದ್ದೇನೆ. ಏಕೆಂದರೆ ನಾನು ಯಾವಾಗ ನೀವು ನಿಯಮಿತವಾಗಿ ಪವಿತ್ರ ಖುರ್‌ಆನ್‌ನ ಪಠಣವನ್ನು ಮಾಡುತ್ತೀರಾ ಅಥವಾ ಇಲ್ಲವೇ ಎಂದು ಕೇಳಿದಾಗ (ಕೆಲವರು ಉತ್ತರ ನೀಡುವ ರೀತಿಯಲ್ಲಿ ನನಗೆ ತಿಳಿಯುತ್ತದೆ), ಸಾಮಾನ್ಯವಾಗಿ ಪವಿತ್ರ ಖುರ್‌ಆನ್ ಅನ್ನು ನಿಯಮಿತವಾಗಿ ಪಠಣದಲ್ಲಿ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ಇರುವುದಿಲ್ಲ. ಆದಾಗ್ಯೂ, ಪವಿತ್ರ ಖುರ್‌ಆನ್ ಅನ್ನು ಮುಗಿಸಿದ ನಂತರ, ಮಕ್ಕಳು ನಿಯಮಿತವಾಗಿ ಪವಿತ್ರ ಖುರ್‌ಆನ್ ಪಠಿಸುವ ಅಭ್ಯಾಸವನ್ನು ಪಡೆಯಬೇಕು ಎಂಬ ಅಂಶವನ್ನು ತಾಯಿ ಮತ್ತು ತಂದೆ ಸಹ ಮೇಲ್ವಿಚಾರಣೆ ಮಾಡಬೇಕು ಮತ್ತು ಚಿಂತಿಸಬೇಕು. ಆದ್ದರಿಂದ ನಿಮ್ಮ ಚಿಂತೆಗಳನ್ನು ಪವಿತ್ರ ಖುರ್‌ಆನ್ ಅನ್ನು ಕೇವಲ ಒಂದು ಸಲ ಮುಗಿಸಲು ಮಾತ್ರ ಸೀಮಿತಗೊಳಿಸಬೇಡಿ, ಬದಲಿಗೆ ನಂತರವೂ ಸ್ಥಾಯಿಯಾಗಿ ಅದರ ಮೇಲ್ವಿಚಾರಣೆ ಮಾಡುವುದು ಅವಶ್ಯಕವಾಗಿದೆ. ವಾಸ್ತವವಾಗಿ, ಪವಿತ್ರ ಖುರ್‌ಆನ್ ಅನ್ನು ಮೊದಲ ಬಾರಿಗೆ ಕಲಿಸುವುದು ಮತ್ತು ಮುಗಿಸುವುದು ಬಹಳ ಪ್ರಮುಖ ಕಾರ್ಯವಾಗಿದೆ. ಕೆಲವು ತಾಯಂದಿರು ನಾಲ್ಕು-ಐದು ವರ್ಷದ ಮಕ್ಕಳನ್ನು ಪವಿತ್ರ ಖುರ್‌ಆನ್ ಮುಗಿಸುವಂತೆ ಮಾಡುತ್ತಾರೆ ಮತ್ತು ಇದು ತುಂಬಾ ಶ್ರಮದಾಯಕ ಕೆಲಸವಾಗಿದೆ. ಆದರೆ ನಾನು ಹೇಳಿದಂತೆ, ಅದನ್ನು ನಿರಂತರವಾಗಿ ಮುಂದುವರಿಸುವುದು ಇನ್ನೂ ಮುಖ್ಯವಾದ ಕೆಲಸವಗಿದೆ. ಕೆಲವು ದಿನಗಳ ಮುಂಚೆ ನಾನು ಓರ್ವ ಮಹಿಳೆಯಿಂದ ಪತ್ರವನ್ನು ಸ್ವೀಕರಿಸಿದ್ದೇನೆ, ಅದರಲ್ಲಿ ಅವರು ನನ್ನ ತಾಯಿಯನ್ನು ಉಲ್ಲೇಖಿಸಿದ್ದಾರೆ. ಅವರು ಬರೆದಿದ್ದಾರೆ: ನನಗೆ ಅವರು ಹೇಳಿದ ಒಂದು ವಿಷಯವಿದೆ ಅದಕ್ಕಾಗಿ ನಾನು ಇಂದಿನವರೆಗೂ ಕೃತಜ್ಞನಾಗಿದ್ದೇನೆ, ಒಮ್ಮೆ ನನ್ನ ಮಗನನ್ನು ಅಥವಾ ಮಗಳು ಪವಿತ್ರ ಖುರ್‌ಆನ್ ಅನ್ನು ಮೊದಲ ಬಾರಿಗೆ ಓದಿ ಮುಗಿಸಿದ ನಂತರ ಅವರ ಬಳಿಗೆ ಕರೆದುಕೊಂಡು ಹೋಗಿ ಬಹಳ ಹೆಮ್ಮೆಯಿಂದ ಹೇಳಿದೆ ಈ ನನ್ನು ಮಗು ಆರನೇ ವಯಸ್ಸಿನಲ್ಲಿ ಪವಿತ್ರ ಖುರ್‌ಆನ್ ಅನ್ನು ಓದಿ ಮುಗಿಸಿದೆ ಎಂದು ಹೇಳಿದೆ. ಈ ಕುರಿತು ಅವರು ಪವಿತ್ರ ಖುರ್‌ಆನ್ ಅನ್ನು ಆರು ವರ್ಷ ಅಥವಾ ಐದು ವರ್ಷದಲ್ಲಿ ಮುಗಿಸುವುದು

ಅಂತಹ ದೊಡ್ಡ ವಿಷಯವಲ್ಲ. ಮಗುವಿನ ಹೃದಯದಲ್ಲಿ ಪವಿತ್ರ ಖುರ್‌ಆನ್‌ನ ಪ್ರೀತಿಯನ್ನು ನೀವು ಎಷ್ಟು ಸೃಷ್ಟಿಸಿದ್ದೀರಿ ಹೇಳಿ? ಎಂದು ಹೇಳಿದರು. ಹೀಗಾಗಿ ವಾಸ್ತವತೆ ಏನೆಂದರೆ ಪವಿತ್ರ ಖುರ್‌ಆನ್ ಅನ್ನು ಪಠಿಸುವುದರೊಂದಿಗೆ ಪವಿತ್ರ ಖುರ್‌ಆನ್‌ನ ಬಗ್ಗೆ ಪ್ರೀತಿಯನ್ನು ಬೆಳೆಸುವುದು ಸಹ ಬಹಳ ಮುಖ್ಯವಾಗಿದೆ. ತದನಂತರ ಮಗುವೂ ಸ್ವತಃ ಓದಲು ಇಷ್ಟಪಡುತ್ತದೆ. ಮತ್ತು ಮಕ್ಕಳು ವಿಭಿನ್ನ ಆಸಕ್ತಿಗಳನ್ನು ಹೊಂದಿರುವ ಸಮಯ ಮತ್ತು ಯುಗದಿಂದ ನಾವು ಹಾದುಹೋಗುತ್ತಿದ್ದೇವೆ. ಟಿವಿ ಇದೆ, ಇಂಟರ್ನೆಟ್ ಇದೆ, ಬೇರೆ ಪುಸ್ತಕಗಳಿವೆ. ಈ ಆಸಕ್ತಿಗಳ ನಡುವೆ, ಮಗುವಿನ ನಿಯಮಿತವಾದ ಪವಿತ್ರ ಖುರ್‌ಆನ್‌ನ ಪಠಣ ಮತ್ತು ಬೆಳಿಗ್ಗೆ ಓದುವುದು ಪವಿತ್ರ ಖುರ್‌ಆನ್‌ನ ಮಹತ್ವವನ್ನು ಅರಿತುವಂತಾಗುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸಹ ವಿವಿಧ ರೀತಿಯ ಆಸಕ್ತಿದಾಯಕ ಸಾಮಗ್ರಿಗಳಿರುವ ಈ ಯುಗದಲ್ಲಿ ವಿವಿಧ ರೀತಿಯ ಆಸಕ್ತಿದಾಯಕ ಪುಸ್ತಕಗಳು ಲಭ್ಯವಿವೆ, ವಿವಿಧ ರೀತಿಯ ವಿಜ್ಞಾನಗಳು ಕಾಣಿಸಿಕೊಳ್ಳುತ್ತಿವೆ ಎಂಬ ಅಂಶದ ಬಗ್ಗೆಯೂ ಗಮನ ಸೆಳೆದಿದ್ದಾರೆ. ಈ ಯುಗದಲ್ಲಿ ಪವಿತ್ರ ಖುರ್‌ಆನ್ ಅನ್ನು ಪಠಿಸುವ ಮಹತ್ವವು ಬಹಳ ಹೆಚ್ಚಾಗಿದೆ ಮತ್ತು ನಾವು ಅದರತ್ತ ಗಮನ ಹರಿಸಬೇಕಾಗಿದೆ. ಹಾಗಾಗಿ ಅದರ ಓದಿನ ಕಡೆಗೆ ಹೆಚ್ಚಿನ ಗಮನ ಹರಿಸುವ ಅವಶ್ಯಕತೆ ಇದೆ. ಪೋಷಕರೂ ಪವಿತ್ರ ಖುರ್‌ಆನ್ ಪಠಿಸುವ ಮತ್ತು ಅದರ ಬಗ್ಗೆ ಧ್ಯಾನಿಸುವ ಅಭ್ಯಾಸವನ್ನು ಬೆಳೆಸಿದಾಗ ಪವಿತ್ರ ಖುರ್‌ಆನ್‌ನ ಮೇಲಿನ ಪ್ರೀತಿ ಮಕ್ಕಳಲ್ಲಿಯೂ ಹುಟ್ಟುತ್ತದೆ. ಅದರ ಓದಿನ ಕಡೆ ಹೆಚ್ಚು ಗಮನ ಹರಿಸುತ್ತಾರೆ. ಪ್ರತಿ ಮನೆಯಿಂದ ಬೆಳಗಿನ ನಮಾಝ್‌ನ ನಂತರ ಅಥವಾ ಇಂದಿನ ದಿನಗಳಲ್ಲಿ ನಮಾಝ್ ಚಳಿಗಾಲದಲ್ಲಿ ತಡವಾಗಿರುವುದರಿಂದ, ಯಾರಾದರೂ ಕೆಲಸಕ್ಕೆ ಬೇಗನೆ ಹೋಗಬೇಕಾದರೆ, ನಮಾಝ್‌ನ ಮೊದಲು ಪವಿತ್ರ ಖುರ್‌ಆನ್‌ನ ಪಠಣವು ನಿಯಮಿತವಾಗಿದ್ದಾಗ ಆ ಮನೆಯು ಪವಿತ್ರ ಖುರ್‌ಆನ್‌ನ ಅನುಗ್ರಹಗಳಿಂದ ತುಂಬಿರುತ್ತದೆ. ಮತ್ತು ಮಕ್ಕಳು ಸಹ ಈ ಬಗ್ಗೆ ಗಮನ ಹರಿಸುತ್ತಾರೆ. ಮಕ್ಕಳು ಸಹ ವಿಶ್ವಾಸಿಯಲ್ಲಿ ಇರಬೇಕಾದ ಸದ್ಗುಣಗಳನ್ನು ಅನುಸರಿಸುತ್ತಾರೆ ಮತ್ತು ಅವರು ವಯಸ್ಸಾದಂತೆ, ಅವರ ಹೃದಯದಲ್ಲಿ ಪವಿತ್ರ ಖುರ್‌ಆನ್‌ನ ಹಿರಿಮೆ ಮತ್ತು ಪ್ರೀತಿಯೂ ವರ್ಧಿಸುತ್ತದೆ. ತದನಂತರ ನಾವು ಪ್ರತಿಯೊಬ್ಬರೂ ಪವಿತ್ರ ಖುರ್‌ಆನ್ ಅನ್ನು ನಿಯಮಿತವಾಗಿ ಧ್ಯಾನ ಮಾಡುತ್ತಿದ್ದರೆ ಮತ್ತು ಪಠಿಸುತ್ತಿದ್ದರೆ, ಸರ್ವಶಕ್ತನಾದ ಅಲ್ಲಾಹನಿಗಾಗಿ ಪತಿ-ಪತ್ನಿಯರ ನಡುವೆ ಪ್ರೀತಿ ಮತ್ತು ವಾತ್ಸಲ್ಯದ ದರ್ಶನಗಳು ಮನೆಗಳಲ್ಲಿ ಕಂಡುಬರುತ್ತವೆ, ಅಲ್ಲಿ ಮಕ್ಕಳು ಸಹ ಜಮಾತ್‌ನ ಫಲಕಾರಿ ಅಸ್ತಿತ್ವವಾಗುತ್ತಾರೆ. ಅವರ ತರಬೇತಿಯೂ ಉನ್ನತ ಮಟ್ಟದಲ್ಲಿರುತ್ತದೆ. ಮತ್ತು ಇದಕ್ಕಾಗಿಯೇ ಒಬ್ಬ ಅಹ್ಮದಿಯು ತನ್ನ ಜೀವನದ ಭಾಗವಾಗಿಸಲು ಸಂಪೂರ್ಣ ಗಮನ ಮತ್ತು ಶ್ರಮ ವಹಿಸಬೇಕಾಗಿದೆ.

ಈ ಯುಗದಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಇದನ್ನು ನಮ್ಮಲ್ಲಿ ಸೃಷ್ಟಿಸಲು ಬಹಳ ಪ್ರಯತ್ನಿಸಿದ್ದಾರೆ ಮತ್ತು ಅವರ ಆಗಮನದ ಉದ್ದೇಶವು ಸಹ ಪವಿತ್ರ ಖುರ್‌ಆನ್ ಅನ್ನು ಲೋಕದಲ್ಲಿ ಇತರೆ ವಸ್ತುಳಿಗಿಂತ ಉತ್ತುಂಗ ಸ್ಥಾನವನ್ನು ನೀಡುವುದು ಮತ್ತು ಪವಿತ್ರ ಖುರ್‌ಆನ್ ಅನ್ನು ಪ್ರಪಂಚಾದ್ಯಂತ ಇರುವ ಗೌರವಗಳಿಗಿಂತ ಹೆಚ್ಚು ಗೌರವನ್ನು ನೀಡಬೇಕು ಎಂದಾಗಿದೆ. ಪವಿತ್ರ ಖುರ್‌ಆನ್‌ನ ಗೌರವವನ್ನು ನಾವು ಸಾಮಾನ್ಯವಾಗಿ ಅಹ್ಮದಿಯೇತರು ಸುಂದರವಾದ ಬಟ್ಟೆಗಳಲ್ಲಿ ಇಡುವಷ್ಟು, ಸುಂದರವಾದ ಕಪಾಟಿನಲ್ಲಿ ಇಡುವ, ಸುಂದರವಾದ ಪೆಟ್ಟಿಗೆಗಳಲ್ಲಿ ಇಡುವ ಮಟ್ಟಕ್ಕೆ ಇಡಬಾರದು. ಪವಿತ್ರ ಖುರ್‌ಆನ್ ಮತ್ತು ಅದರ ಪ್ರೀತಿಯ ನಿಜವಾದ ಗೌರವವೆಂದರೆ ಅದರ ಆಜ್ಞೆಗಳನ್ನು ಅನುಸರಿಸಲು ಶ್ರಮಿಸುವುದು ಮತ್ತು ಅದರ ಆಜ್ಞೆಗಳನ್ನು ಮತ್ತು ನಿಷೇಧಾಜ್ಞೆಗಳನ್ನು ನಮ್ಮ ಜೀವನದ ಒಂದು ಭಾಗವಾಗಿ ಮಾಡುವುದಾಗಿದೆ. ಒಬ್ಬ ವ್ಯಕ್ತಿಯು ಸರ್ವಶಕ್ತನಾದ ಅಲ್ಲಾಹನು ನಿಷೇಧಿಸಿರುವ ವಿಷಯಗಳಿಂದ ದೂರವಿರಬೇಕು ಮತ್ತು ತನಗೆ ಆಜ್ಞಾಪಿಸಲ್ಪಟ್ಟದ್ದನ್ನು ಅನುಸರಿಸಲು ತನ್ನ ಎಲ್ಲಾ ಶಕ್ತಿಗಳು ಮತ್ತು ಸಾಮರ್ಥ್ಯಗಳನ್ನು ಬಳಸಬೇಕು. ಸರ್ವಶಕ್ತನಾದ ಅಲ್ಲಾಹನ ಭಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಪವಿತ್ರ ಖುರ್‌ಆನ್ ಅನ್ನು ಪಠಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಮ್ಮ ಪುಸ್ತಕಗಳಲ್ಲಿ, ತಮ್ಮ ಸಭೆಗಳಲ್ಲಿ, ಮಲ್‌ಫೂಜಾತ್‌ನಲ್ಲಿ ಅನೇಕ ಸ್ಥಳಗಳಲ್ಲಿ ಪವಿತ್ರ ಖುರ್‌ಆನ್‌ನ ಮಹತ್ವವನ್ನು ವಿವರಿಸಿದ್ದೇನೆ ಮತ್ತು ಈ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಅವರು ಒಬ್ಬ ಅಹ್ಮದಿ ಹಾಗೂ ಬೈಅತ್ ಮಾಡಿರುವವರಿಂದ ನಿರೀಕ್ಷೆಗಳನ್ನು ಪ್ರಸ್ತಾಪಿಸಿದ್ದಾರೆ. ಹೀಗಾಗಿ ನಾವು ನಮ್ಮ ಮನೆಗಳನ್ನು ಪವಿತ್ರ ಖುರ್‌ಆನ್‌ನ ತಿಲಾವತ್ (ಪಠಣ) ದಿಂದ ತುಂಬಿಸಬೇಕಾಗಿದೆ. ಮತ್ತು ಅದರ ಆಜ್ಞೆಗಳನ್ನು ಅರ್ಥಮಾಡಿಕೊಳ್ಳಲು ತಿಲಾವತ್‌ನೊಂದಿಗೆ ಅದರ ತರ್ಜುಮೆಯನ್ನು ಸಹ ಅಧ್ಯಾಯನ ಮಾಡುವುದು ಅವಶ್ಯಕವಾಗಿದೆ. ಮನೆಗಳಲ್ಲಿ ಮಕ್ಕಳ ಮುಂದೆ ಪವಿತ್ರ ಖುರ್‌ಆನ್‌ನ ಪಠಣದೊಂದಿಗೆ ಅದನ್ನು ಅರ್ಥಮಾಡಿಕೊಳ್ಳಲು ಮತ್ತು ಅದರ ಅನುವಾದಗಳ ಚರ್ಚೆಯಾಗಬೇಕು ಮತ್ತು ಪ್ರಯತ್ನಗಳು ನಡೆಯಬೇಕು. ತಿಲಾವತ್‌ನ ಅಭ್ಯಾಸವನ್ನು ರೂಢಿಸಿಕೊಳ್ಳಬಾರದು, ಬದಲಿಗೆ ಪವಿತ್ರ ಖುರ್‌ಆನ್‌ನ ಸಣ್ಣ ವಿಷಯಗಳನ್ನು ತೆಗೆದು ಮಕ್ಕಳ ಮುಂದೆ ವಿವರಿಸುವ ಸಭೆಗಳು ನಡೆಯಬೇಕು ಇದರಿಂದ ಅವರಲ್ಲಿ ಆಸಕ್ತಿಯೂ ಬೆಳೆಯುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪವಿತ್ರ ಖುರ್‌ಆನ್ ಮತ್ತು ನಮಾಝ್‌ನ ಅನುವಾದವನ್ನು ಅರ್ಥಮಾಡಿಕೊಳ್ಳುವುದು ಮತ್ತು ಓದುವುದು ಬಹಳ ಮುಖ್ಯ ಎಂದು ಘೋಷಿಸಿದ್ದಾರೆ. ಆದರೆ ಅನುವಾದವನ್ನು ಮಾತ್ರ ಓದುವುದು ಮತ್ತು ಮೂಲ ಅರೇಬಿಕ್ ಪಠ್ಯವನ್ನು ಓದದಿರುವುದು ಅನುಮತಿಸುವುದಿಲ್ಲ. ಪವಿತ್ರ ಖುರ್‌ಆನ್‌ನ ಅನುವಾದವನ್ನು ಮಾತ್ರ ಓದಬೇಕು ಎಂದು ನಾವು ಎಂದಿಗೂ ಫತ್ವಾ ನೀಡುವುದಿಲ್ಲ ಎಂದು ಅವರು(ಅ) ಹೇಳಿದರು. ಇದು ಪವಿತ್ರ ಖುರ್‌ಆನ್‌ನ ಪವಾಡವನ್ನು ಅಮಾನ್ಯಗೊಳಿಸುತ್ತದೆ. ಹೀಗೆ (ಅನುವಾದವನ್ನು ಮಾತ್ರ ಓದಿದರೆ ಸಾಕು ಎಂಬುದು) ಹೇಳುವ ವ್ಯಕ್ತಿಯು ಪವಿತ್ರ ಖುರ್‌ಆನ್ ಜಗತ್ತಿನಲ್ಲಿ ಉಳಿಯಬಾರದು ಎಂದು ಬಯಸುತ್ತಾನೆ."

(ಮಲ್‌ಫೂಝಾತ್, ಸಂಪುಟ-3, ಪುಟ-265, ಆವೃತ್ತಿ 2003, ರಬ್ವಾದಲ್ಲಿ ಮುದ್ರಿತ)

ಆದ್ದರಿಂದ ಇದು ಪವಿತ್ರ ಖುರ್‌ಆನ್‌ನ (ಎಜಾಝ್) ಪವಾಡ ಮತ್ತು ಇದು ಇನ್ನೂ ಅದರ ಮೂಲ ಸ್ಥಿತಿಯಲ್ಲಿರುವುದು ಒಂದು ದೊಡ್ಡ ಪವಾಡವಾಗಿದೆ ಮತ್ತು ಇದು ಸರ್ವಶಕ್ತನಾದ ಅಲ್ಲಾಹನ ಘೋಷಣೆಯಾಗಿದೆ **ಇನ್ನ ನಹ್‌ನೂ ನಝ್ಝಲ್ ನಝ್ಝಿಕ್ರ ವ ಇನ್ನಾ ಲಹೂ ಲಹಾಫಿಝೂನ್** (ಅಲ್‌ಹಿಜರ್:10) ಅಂದರೆ ನಿಜವಾಗಿಯೂ ನಾವು ಈ ಉಪದೇಶವನ್ನು ಅವತೀರ್ಣಗೊಳಿಸಿದ್ದೇವೆ ಮತ್ತು ಖಂಡಿತವಾಗಿಯೂ ನಾವು ಅದನ್ನು ಸಂರಕ್ಷಿಸುವೆವು."

ಮತ್ತು ಈ ಪವಾಡ, ಹಝ್ರತ್ ಮಸೀಹ್ ಮೌಊದ್ ಅಲಯಹಿಸ್ಸಲಾಮ್ ಹೇಳಿದಂತೆ, ಇದು ಇಂದಿನವರೆಗೂ ಮೂಲ ಅರೇಬಿಕ್ ಪಠ್ಯದಲ್ಲಿ ಮುಂದುವರೆದಿದೆ ಮತ್ತು ಇಸ್ಲಾಂ ಧರ್ಮದ ಕಠೋರ ವಿರೋಧಿಗಳು ಸಹ ಪವಿತ್ರ ಖುರ್‌ಆನ್ ಅದರ ಮೂಲ ರೂಪದಲ್ಲಿ ಮೂಲ ಸ್ಥಿತಿಯಲ್ಲಿ ಇಲ್ಲಿಯ ವರೆಗೆ ಸುರಕ್ಷಿತವಗಿ ಉಳಿದಿದೆ ಎಂದು ಒಪ್ಪಿಕೊಳ್ಳದೆ ಉಳಿಯುವುದಿಲ್ಲ. ನಾವು ಅನುವಾದಗಳನ್ನು ಮಾತ್ರ ಅವಲಂಬಿಸಲು ಪ್ರಾರಂಭಿಸಿದರೆ, ಅನುವಾದಗಳು ಒಂದಕ್ಕೊಂದು ವಿಭಿನ್ನವಾಗುವುದನ್ನು ನಾವು ನೋಡುತ್ತೇವೆ. ಬದಲಿಗೆ, ನಾವು ನಮ್ಮ ಅನುವಾದವನ್ನು ಜಗತ್ತಿಗೆ ಪ್ರಸ್ತುತಪಡಿಸಿದಾಗ, ಈ ಅನುವಾದವು ಸಂಪೂರ್ಣವಗಿ ವಿಭಿನ್ನವಾಗಿದೆ ಎಂದು ಒಪ್ಪಿಕೊಳ್ಳುತ್ತಾರೆ. ಏಕೆಂದರೆ ಅನ್ಯರು ಸರಿಯಾದ ಅನುವಾದಗಳನ್ನು ಮಾಡಲಿಲ್ಲ. ಇಸ್ಲಾಂ ಧರ್ಮವನ್ನು ವಿರೋಧಿಸಿದ ಒಬ್ಬ ಪ್ರಮುಖ ಪಾದರಿಯು ಅಮೇರಿಕದಲ್ಲಿ ಪವಿತ್ರ ಖುರ್‌ಆನ್‌ನ ಕೆಲವು ಅನುವಾದಗಳನ್ನು ವಿರೋಧಿಸಿದರು (ಅನುವಾದಗಳನ್ನು ಮಾತ್ರ ತೆಗೆದುಕೊಂಡಿದ್ದರು, ಅರೇಬಿಕ್ ಪಠ್ಯವನ್ನು ತೆಗೆದುಕೊಳ್ಳಲಾಗಿರಲಿಲ್ಲ) ಅವರು ಆಕ್ಷೇಪಿಸಿದೇನೆಂದರೆ ಇಸ್ಲಾಂ ಇದನ್ನು ಹೇಳುತ್ತದೆ ಮತ್ತು ಪವಿತ್ರ ಖುರ್‌ಆನ್ ಇದನ್ನು ಹೇಳುತ್ತದೆ. ನಾವು ನಮ್ಮ ತಫ್ಸೀರ್ (ವ್ಯಖ್ಯಾನವನ್ನು) ಅನ್ನು ಅವರಿಗೆ ಕಳುಹಿಸಿದಾಗ, ಅವರು ಅದಕ್ಕೆ ಉತ್ತರಿಸಿದರು ಮತ್ತು ಸಾಕಷ್ಟು ಬೆನ್ನಟ್ಟಿದ ನಂತರ, ನಾನು ಮಾಡಿದ ಅನುವಾದವು ಮುಸ್ಲಿಮರು ಮಾಡಿರುವಂತಹ

ಅನುವಾದಗಳಾಗಿವೆ ಎಂದು ಹೇಳಿದರು. ಆದಾಗ್ಯೂ, ಹಝ್ರತ್ ಇದು ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೇ ನಮ್ಮನ್ನು ಅನುವಾದದಲ್ಲಿಯೂ ಸಹ ಅರೇಬಿಕ್ ಪಠ್ಯಕ್ಕೆ ಹತ್ತಿರಕ್ಕೆ ತಂದಿರುವರು ಮತ್ತು ಅದರ ನಿಜವಾದ ಅರ್ಥ ಮತ್ತು ಬೋಧನೆಗಳನ್ನು ನಮಗೆ ಕಲಿಸಿದರು. ನಾನು ಇಲ್ಲಿ ಒಂದು ವಿಷಯವನ್ನು ಸಹ ಉಲ್ಲೇಖಿಸಲು ಬಯಸುತ್ತೇನೆ ಕೆಳೆದ ದಿನಗಳಲ್ಲಿ ಅಹ್ಮದಿಯ್ಯತ್‌ನ ಮೇಲೆ ಅಕ್ಷೇಪಣೆ ಎತ್ತುವನು ಆಕ್ಷೇಪಿದೇನೆಂದರೆ ಮಿರ್ಝಾ ಸಾಹಿಬ್ ಪ್ರವಾದಿಯಾಗಿದ್ದರೆ, ಇಮಾಮ್ ಅಬು ಹನೀಫಾ ಅವರನ್ನು ಅನುಸರಿಸಲು ತಮ್ಮ ಅನುಯಾಯಿಗಳಿಗೆ ಏಕೆ ಉಪದೇಶಿಸಿದರು? ಅದಕ್ಕೆ ಉತ್ತರ ನಿಮ್ಮ ಅನೇಕ ಬರಹಗಳಿಂದ ಲಭಿಸಿದೆ. ಖಂಡಿತವಾಗಿಯೂ ಅನುಸರಿಸಲು ಹೇಳಲಿಲ್ಲ. ಆದರೆ ನಾನು ಪವಿತ್ರ ಖುರ್‌ಆನ್‌ನ ಬಗ್ಗೆ ಮಾತನಾಡುತ್ತಿದ್ದೇನೆ. ಇದು ಉಲ್ಲೇಖವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಜ್ಲಿಸ್‌ನಲ್ಲಿ ಹನಫಿ ನಿಲುವಿನಲ್ಲಿ ಅನುವಾದವನ್ನು ಓದಿದರೆ ಸಾಕು ಎಂದು ಉಲ್ಲೇಖಿಸಿದ್ದಾರೆ. ಈ ಬಗ್ಗೆ ಅವರು ಅಲೈಹಿಸ್ಸಲಾಮ್ ಹೇಳಿದರು, "ಇದು ಇಮಾಮ್ ಆಝಮ್ ಅವರ ಧರ್ಮವಾಗಿದ್ದರೆ, ಅದು ಅವರ ತಪ್ಪು."
(ಮಲ್‌ಫೂಝಾತ್, ಸಂಪುಟ–3, ಪುಟ–265, ಎಡಿಷನ್ 2003 ರಬ್ವಾಹ್)

ಅವರು ತಪ್ಪಾಗಿದ್ದರು. ಖಂಡಿತಾವಾಗಿಯೂ ಅವರು ಇಮಾಮ್ ಆಗಿದ್ದಾರೆ ಅವರು ಇಸ್ಲಾಂ ಧರ್ಮಕ್ಕೆ ದೊಡ್ಡ ಸೇವೆ ಸಲ್ಲಿಸಿದ್ದಾರೆ, ಅವರು ಹಲವಾರು ಸಮಸ್ಯೆಗಳನ್ನು ಸಂಗ್ರಹಿಸಿದ್ದಾರೆ, ಆದರೆ ಅವರು ಅನುವಾದವನ್ನು ಓದಿದರೆ ಸಾಕು ಎಂದು ಹೇಳಿದ್ದರೆ ಅದು ತಪ್ಪಾಗಿದೆ.

ಆದಾಗ್ಯೂ, ಈ ಯುಗದಲ್ಲಿ, ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಪವಿತ್ರ ಖುರ್‌ಆನ್‌ನ ಮೂಲ ರಕ್ಷಕರು ಎಂದು ಕಳುಹಿಸಿದ್ದಾನೆ. ಪವಿತ್ರ ಖುರ್‌ಆನ್ ಅನ್ನು ಅರ್ಥಮಾಡಿಕೊಳ್ಳಲು ಮತ್ತು ಪ್ರೀತಿಸಲು ನೀವು ನಿಮ್ಮ ಜಮಾತನ್ನು ಹಲವು ಬಾರಿ ಉತ್ತೇಜಿಸಿದ್ದಾರೆ. ಹೀಗಾಗಿ ಒಂದೆಡೆ ಅವರು(ಅ) ಹೇಳುತ್ತಾರೆ: "ಪವಿತ್ರ ಖುರ್‌ಆನ್ ದೈವಿಕ ಕಾನೂನು ಹಾಗೂ ಮೋಕ್ಷದ ಮೂಲವಾಗಿದೆ". (ಮಲ್‌ಫೂಝಾತ್, ಸಂಪುಟ–4, ಪುಟ–130, 2003 ಎಡಿಷನ್ ರಬ್ವಾಹ್)

ಪವಿತ್ರ ಖುರ್‌ಆನ್‌ನಿಂದ ಈಸಾ ಮಸೀಹ್(ಅ)ರ ಮರಣವನ್ನು ಸಾಬೀತುಪಡಿಸಲು ನೀವು(ಅ) ಈ ವಾಕ್ಯವನ್ನು ಹೇಳುತ್ತಿದ್ದೀರಿ ಆದರೆ ಪವಿತ್ರ ಖುರ್‌ಆನ್ ದೈವಿಕ ಕಾನೂನು ಮತ್ತು ಈ ಅರ್ಥದಲ್ಲಿ ಅದು ಮೋಕ್ಷದ ಸಾಧನವಾಗಿದೆ ಎಂಬುದು ಸಾಮಾನ್ಯ ತತ್ವವಾಗಿದೆ. ನಾವು ನೋಡಿದರೆ, ಲೌಕಿಕ ಕಾನೂನನ್ನು ಜಾರಿಗೆ ತರದ ಹೊರತು ಕಾನೂನಿಂದ ಪ್ರಯೋಜನವಾಗುವುದಿಲ್ಲ. ಅದೇ ರೀತಿ ಪವಿತ್ರ ಖುರ್‌ಆನ್‌ನ ಕಾನೂನು ಸಹ ಅದನ್ನು ಅನುಸರಿಸಿದಾಗ ಪ್ರಯೋಜನಕಾರಿ ಮತ್ತು ವಿಮೋಚನೆಯನ್ನು ನೀಡುತ್ತದೆ. ಅದನ್ನು ಅನುಸರಿಸದಿದ್ದರೆ, ಅದು ಮೋಕ್ಷದ ಸಾಧನವಾಗುವುದಿಲ್ಲ. ಕೇವಲ ಓದುವುದರಿಂದ ಮತ್ತು ಅದನ್ನು ಅನುಸರಿಸದೆ ಇರುವುದರಿಂದ ಮೋಕ್ಷ ಲಭಿಸುವುದಿಲ್ಲ. ಅಲ್ಲಾಹನ ಪ್ರಸನ್ನತೆ ಸಿಗುವುದಿಲ್ಲ. ನಾವು ಅಲ್ಲಾಹನ ಅನುಗ್ರಹಗಳ ಹಾಗೂ ಪ್ರತಿಫಲಗಳ ವಾರಿಸುದಾರರಾಗುವುದಿಲ್ಲ. ಆದ್ದರಿಂದ, ಪವಿತ್ರ ಖುರ್‌ಆನ್‌ನ ಬೋಧನೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದನ್ನು ಅನುಸರಿಸುವುದು ಬಹಳ ಮುಖ್ಯವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೇಳುತ್ತಾರೆ: "ಪವಿತ್ರ ಖುರ್‌ಆನ್ ನಿಜವಾದ ಅನುಗ್ರಹಗಳಗಳ ಮೂಲವಾಗಿದೆ ಮತ್ತು ಮೋಕ್ಷದ ಸಾಧನವಾಗಿದೆ ಎಂಬುದನ್ನು ನೆನಪಿಡಿ. ಇದು ಪವಿತ್ರ ಖುರ್‌ಆನ್ ಅನ್ನು ಅನುಸರಿಸದವರ ತಪ್ಪಾಗಿದೆ. ಅನುಸರಿಸದವರ ಗುಂಪಿನಲ್ಲಿ ಒಬ್ಬರು ಅದನ್ನು ನಂಬುವುದಿಲ್ಲ ಮತ್ತು ಅದನ್ನು ಸರ್ವಶಕ್ತನಾದ ಅಲ್ಲಾಹನ ಕಲಾಮ್ ಎಂದು ಪರಿಗಣಿಸುವುದಿಲ್ಲ. ಈ ಜನರು ಬಹಳ ದೂರದಲ್ಲಿದ್ದಾರೆ. ಆದರೆ ಅದು ಅಲ್ಲಾಹನ ಕಲಾಮ್ ಮತ್ತು ಮೋಕ್ಷಕ್ಕಾಗಿ ಗುಣಪಡಿಸುವ ಪಾಕವಿಧಾನವಾಗಿದೆ ಎಂದು ನಂಬುವವರು ಅದನ್ನು ಅನುಸರಿಸದಿದ್ದರೆ ಎಷ್ಟು ಆಶ್ಚರ್ಯ ಮತ್ತು ದುಃಖದ ವಿಷಯವಾಗಿದೆ. ಅವರಲ್ಲಿ ಅನೇಕ ಜನರು ತಮ್ಮ ಇಡೀ ಜೀವಮಾನದಲ್ಲಿ ಅದನ್ನು ಪಠಿಸಿಲ್ಲದವರಾಗಿದ್ದಾರೆ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಕಲಾಮ್ ಅನ್ನು ಮರೆತುಬಿಟ್ಟಿರುವ ಮತ್ತು ಅಸಡ್ಡೆ ಹೊಂದಿರುವ ಅಂತಹ ಜನರ ಉದಾಹರಣೆ ಹೇಗಿದೆ ಎಂದರೆ ಓರ್ವ ವ್ಯಕ್ತಿಗೆ ಅಂತಹ ಚಿಲುಮೆಯ ನೀರು ಬಹಳ ಶುದ್ಧ, ಸಿಹಿ ಮತ್ತು ತಂಪಾಗಿರುತ್ತದೆ ಅದೇ ರೀತಿ ಅದರ ನೀರು ಅನೇಕ ಕಾಯಿಲೆಗಳಿಗೆ ಮದ್ದಾಗಿದೆ ಎಂದು ನಿಶ್ಚಿತವಾಗಿಯು ತಿಳಿದಿದ್ದರು. ಆದರೆ ಈ ಪರಿಜ್ಞಾನದ ಹೊರತಾಗಿಯೂ ಬಾಯಾರಿಕೆಯಲ್ಲಿ ಮತ್ತು ಅನೇಕ ರೋಗಗಳಿಂದ ಬಳಲುತ್ತಿದ್ದರೂ, ಅವನು ಅದರ ಬಳಿಗೆ ಹೋಗುವುದಿಲ್ಲ, ಆದ್ದರಿಂದ ಇದು ಆತನ ದುರದೃಷ್ಟ ಮತ್ತು ಅಜ್ಞಾನವಾಗಿದೆ. ಆತನು ಈ ಚಿಲುಮೆಯ ಮೇಲೆ ತನ್ನ ಬಾಯಿಯನ್ನಿರಿಸಿ ನೀರನ್ನು ಕುಡಿದು ಅದರ ಅಭಿರುಚಿ ಮತ್ತು ಅದರ ಗುಣಪಡಿಸುವ ನೀರಿನಿಂದ ಪ್ರಯೋಜನ ಪಡೆಯಬೇಕಾಗಿತ್ತು. ಆದರೆ ಅವನ ಜ್ಞಾನದ ಹೊರತಾಗಿಯೂ, ಅವನು ಅಜ್ಞಾನಿಯಾಗಿ ಅದರಿಂದ ದೂರವಿದ್ದಾನೆ."
(ಮಲ್‌ಫೂಝಾತ್, ಸಂಪುಟ–4, ಪುಟ–140, ಆವೃತ್ತಿ 2003, ರಬ್ವಾದಲ್ಲಿ ಮುದ್ರಿತ)

ಈ ಸಂದೇಶವನ್ನು, ನೋವಿನಿಂದ ತುಂಬಿರುವ ಈ ಮಾತುಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಪವಿತ್ರ ಖುರ್‌ಆನ್‌ನ ಬೋಧನೆಗಳನ್ನು ಅನುಸರಿಸುವ ಸಾಮರ್ಥ್ಯವನ್ನು ಸರ್ವಶಕ್ತನಾದ ಅಲ್ಲಾಹನು ನಮಗೆ ನೀಡಲಿ. ಅದನ್ನು ಅರ್ಥಮಾಡಿಕೊಳ್ಳಲು ಅವಕಾಶವನ್ನು ನೀಡಲಿ. ಪವಿತ್ರ ಖುರ್‌ಆನ್‌ನ ಬೋಧನೆಯನ್ನು ನಮಗೆ ಅನ್ವಯಿಸಿದಾಗ ಮಾತ್ರ ನಮ್ಮ ಬೈಅತ್‌ನ ನಿಜವಾದ ಹಕ್ಕು ಈಡೇರುತ್ತದೆ ಮತ್ತು ಪವಿತ್ರ ಖುರ್‌ಆನ್‌ನ ಬೋಧನೆಯು ಈಗಾಗಲೇ ಹೇಳಿದಂತೆ, ಪವಿತ್ರ ಖುರ್‌ಆನ್‌ನಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಕೆಡುಕುಗಳಿಂದ ದೂರವಿರುವುದು ಮತ್ತು ಅದರಲ್ಲಿ ಉಲ್ಲೇಖಿಸಿರುವ ಪ್ರತಿಯೊಂದು ಸದ್ಗುಣಗಳನ್ನು ಅಳವಡಿಸಿಕೊಳ್ಳಲು ಮತ್ತು ಅದನ್ನು ಅಳವಡಿಸಿಕೊಳ್ಳಲು ಶ್ರಮಿಸಿದಾಗ ಮಾತ್ರ ಬೈಅತ್‌ನ ಹಕ್ಕು ಈಡೇರುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಒಬ್ಬ ವ್ಯಕ್ತಿಯು ತನ್ನ ದುಷ್ಟತನವನ್ನು ತ್ಯಜಿಸಿ ತಾನು ಈಗ ಪರಿಪೂರ್ಣ ವ್ಯಕ್ತಿಯಾಗಿದ್ದೇನೆ ಎಂದು ಭಾವಿಸಲು ಮಾತ್ರ ಪವಿತ್ರ ಖುರ್‌ಆನ್ ಬಯಸುವುದಿಲ್ಲ, ಬದಲಿಗೆ ಪವಿತ್ರ ಖುರ್‌ಆನ್ ಒಬ್ಬ ವ್ಯಕ್ತಿಯನ್ನು ಉನ್ನತ ಮಟ್ಟದ ಪರಿಪೂರ್ಣತೆಗಳು ಮತ್ತು ನೈತಿಕ ಸದ್ಗುಣಗಳಿಂದ ಜೋಡಿಸಲು ಬಯಸುತ್ತಾನೆ ಅದರಿಂದ ಮನುಕುಲದ ಒಳ್ಳೆಯತನ ಮತ್ತು ಸಹಾನುಭೂತಿಯನ್ನು ಒಳಗೊಂಡಿರುವಂತಹ ಕಾರ್ಯಗಳು ಮತ್ತು ಕ್ರೀಯೆಗಳು ಆತನಿಂದ ನಡೆಯಬೇಕೆಂದು ಅಲ್ಲಹನು ಬಯಸುತ್ತಾನೆ ಮತ್ತು ಅವುಗಳ ಫಲಿತಾಂಶವೆಂದರೆ ಸರ್ವಶಕ್ತನಾದ ಅಲ್ಲಾಹನು ಅವನೊಂದಿಗೆ ಸಂತೃಪ್ತನಾಗುತ್ತಾನೆ.
(ಮಲ್‌ಫೂಝಾತ್, ಸಂಪುಟ–4, ಪುಟ–208, ಆವೃತ್ತಿ 2003, ರಬ್ವಾದಲ್ಲಿ ಮುದ್ರಿತ)

ಹೀಗಾಗಿ, ಒಬ್ಬ ವಿಶ್ವಾಸಿಯು (ಮುಮಿನ್) ಪವಿತ್ರ ಖುರ್‌ಆನ್‌ನಲ್ಲಿ ನಿಜವಾದ ಪ್ರೀತಿಯನ್ನು ಹೊಂದಿದ್ದರೆ, ಅವನು ಸ್ವತಃ ಈ ಮಾನದಂಡವನ್ನು ತಲುಪಲು ಪ್ರಯತ್ನಿಸುತ್ತಾನೆ ಮತ್ತು ಅವನು ತನ್ನ ಮಕ್ಕಳನ್ನು ಅಲ್ಲಿಗೆ ಕರೆದೊಯ್ಯಲು ಪ್ರಯತ್ನಿಸುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದಂತೆ, ದುಷ್ಟತನದಿಂದ ಮತ್ತು ಕೆಟ್ಟತನವನ್ನು ತಪ್ಪಿಸುವುದು ಶ್ರೇಷ್ಟತೆ ಅಲ್ಲ. ಯಾವುದೇ ಕೆಟ್ಟ ಕಾರ್ಯದಿಂದ ನಿಲ್ಲುವುದು, ಯಾವುದೇ ದುಷ್ಟತನದಿಂದ ನಿಲ್ಲುವುದು ಪವಾಡವಲ್ಲ. ಇದು ನಮ್ಮ ಮಹತ್ವಾಕಾಂಕ್ಷೆಯಾಗಬಾರದು, ಬದಲಿಗೆ ನಾವು ನಮ್ಮ ಗುರಿಗಳನ್ನು ದೊಡ್ಡದಾಗಿ ಇಟ್ಟುಕೊಳ್ಳಬೇಕು ಮತ್ತು ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಿದ ಎಲ್ಲಾ ಒಳ್ಳೆಯ ಕಾರ್ಯಗಳನ್ನು ಅನ್ವಯಿಸುವ ಮೂಲಕ ಅದನ್ನು ಸಾಧಿಸಲು ಪ್ರಯತ್ನಿಸಬೇಕು. ಈ ಪ್ರಯತ್ನವನ್ನು ಪ್ರತಿಯೊಬ್ಬ ಪುರುಷ, ಮಹಿಳೆ ಮತ್ತು ಮಕ್ಕಳು ಮಾಡಿದಾಗ ಮಾತ್ರ ಶುದ್ಧ ಸಮಾಜ ಸ್ಥಾಪನೆಯಾಗುತ್ತದೆ. ಇಸ್ಲಾಂ ಸ್ಥಾಪಿಸಲು ಬಯಸುವ ಸಮಾಜ ಸ್ಥಾಪನೆಯಾಗುತ್ತದೆ. ಪ್ತಿ ದಿನ ಇಸ್ಲಾಂ ಮತ್ತು ಪವಿತ್ರ ಖುರ್‌ಆನ್ ಅನ್ನು ವಿರೋಧಿಸಲು ಹೊರಟವರ ಬಾಯಿಯೂ ಮುಚ್ಚಲ್ಪಡುತ್ತದೆ.

ಇಲ್ಲಿ, ಇಬ್ಬರು ಮಹಿಳೆಯರು ತಮ್ಮ ಉಪನ್ಯಾಸಗಳಲ್ಲಿ ಇಸ್ಲಾಮಿಕ್ ಕಾನೂನುಗಳ ವಿರುದ್ಧ ಅತಿಯಾದ ಆಕ್ಷೇಪಣೆಗಳನ್ನು ಎತ್ತುವಲ್ಲಿ ಹೆಸರುವಾಸಿಯಾಗಿದ್ದಾರೆ. ಮಜ್ಲಿಸ್ ಖುದ್ದಾಮುಲ್ ಅಹ್ಮದಿಯ್ಯ ಯುಕೆ ಅವರ ಪ್ರಯತ್ನದ ಮೂಲಕ ಯುಸಿಎಲ್ (ಯೂನಿವರ್ಸಿಟಿ ಕಾಲೇಜ್ ಲಂಡನ್) ನಲ್ಲಿ ಅವರೊಂದಿಗೆ ಚರ್ಚೆ ನಡೆಸಲಾಯಿತು. ವಿಶ್ವವಿದ್ಯಾನಿಲಯವು ಚರ್ಚೆಯನ್ನು ಆಯೋಜಿಸಿತ್ತು. ಇಬ್ಬರು ಮಹಿಳೆಯರು, ಅವರ ರೀತಿಯಲ್ಲಿ, ಇಸ್ಲಾಂ ಧರ್ಮದ ವಿರುದ್ಧ ಹೆಚ್ಚಿನ ಆಕ್ಷೇಪಣೆಗಳನ್ನು ಚರ್ಚೆಯಲ್ಲಿ ಮಂಡಿಸಿದರು. ನಮ್ಮ ಇಬ್ಬರು ಖುದ್ದಾಂ, ಪಾಕಿಸ್ತಾನಿ ಮೂಲದ ಜಾಮಿಯಾದ ವಿದ್ಯಾರ್ಥಿಯರು ಮತ್ತು ಇನ್ನೊಬ್ಬರು ಆಂಗ್ಲ ನವ ಅಹ್ಮದಿಯಾಗಿದ್ದಾರೆ. ಇಸ್ಲಾಂ ಧರ್ಮದ ನಿಜವಾದ ಬೋಧನೆಯಾದ ಪವಿತ್ರ ಖುರ್‌ಆನ್‌ನ ಬೋಧನೆಗಳ ಬೆಳಕಿನಲ್ಲಿ ಸಕಾರಾತ್ಮಕ ಮತ್ತು ತರ್ಕಬದ್ಧ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಇಸ್ಲಾಂ ಧರ್ಮದ ನಿಜವಾದ ಬೋಧನೆಗಳಿಂದಾಗಿ, ಅವರಿಬ್ಬರು ಆ ಸಮಯದಲ್ಲಿ ಕೋಪಗೊಳ್ಳೂತ್ತಿದ್ದರು, ಆದರೆ ಅವರ ಬೆಂಬಲಿಗರು ಅವರ ಆಕ್ಷೇಪಿಸುತ್ತಿದ್ದ ರೀತಿಗೆ ವಿಷಾದ ವ್ಯಕ್ತಪಡಿಸುತ್ತಿದ್ದರು. ಹೀಗೆ ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಇಸ್ಲಾಮಿನ ಬೋಧನೆಗಳು ಅಹ್ಮದಿ ಯುವಕರ ಮೂಲಕ ವಿಜಯಶಾಲಿಯಾದವು.

ಆದ್ದರಿಂದ, ನಾವು ಪವಿತ್ರ ಖುರ್‌ಆನ್ ಅನ್ನು ಅರ್ಥಮಾಡಿಕೊಳ್ಳಲು ಸಾಕಷ್ಟು ಪ್ರಯತ್ನಗಳನ್ನು ಮಾಡಬೇಕು, ನಾವು ಅದನ್ನು ಅನುಸರಿಸಲು ಪ್ರಯತ್ನಿಸಬೇಕು, ಇದು ನಮ್ಮ ಮನೆಗಳನ್ನು ಸ್ವರ್ಗವನ್ನಾಗಿ ಮಾಡುತ್ತದೆ ಮತ್ತು ನಮ್ಮ ಸಮಾಜ ಮತ್ತು ಪರಿಸರದಲ್ಲಿ ತಬ್ಲೀಗ್‌ನ ಕರ್ತವ್ಯಗಳನ್ನು ಪೂರೈಸಲು ನಮಗೆ ಸಾಧ್ಯವಾಗುತ್ತದೆ.

ಪವಿತ್ರ ಖುರ್‌ಆನ್ ಅನ್ನು ಪಠಿಸುವ ವಿಧಾನವನ್ನು ಕಲಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಪವಿತ್ರ ಖುರ್‌ಆನ್ ಅನ್ನು ಎಚ್ಚರಿಕೆಯಿಂದ ಓದಬೇಕು. ಇದನ್ನು ಹದೀಸ್‌ನಲ್ಲಿ ಉಲ್ಲೇಖಿಸಲಾಗಿದೆ: **ರುಬ್ಬಖಾರಿಇನ್ ಯಲ್‌ಅನುಹುಲ್ ಖುರ್‌ಆನ್**– ಅಂದರೆ, ಪವಿತ್ರ ಖುರ್‌ಆನ್‌ನಿಂದ ಶಾಪಗ್ರಸ್ತರಾದ ಅನೇಕ ಪವಿತ್ರ ಖುರ್‌ಆನ್‌ನ ಓದುಗರಿದ್ದಾರೆ. ಯಾರು ಪವಿತ್ರ ಖುರ್‌ಆನ್ ಅನ್ನು ಓದಿ ಅದನ್ನು ಅನುಸರಿಸದಿದ್ದರೆ, ಪವಿತ್ರ ಖುರ್‌ಆನ್ ಅಂತಹವರನ್ನು ಶಪಿಸುತ್ತದೆ. ಪವಿತ್ರ ಖುರ್‌ಆನ್‌ನ ಕರುಣೆಯ ಆಯತ್‌ಗಳನ್ನು ಪಠಿಸುವಾಗ, ಸರ್ವಶಕ್ತನಾದ ಅಲ್ಲಾಹನಿಂದ ಕರುಣೆಯನ್ನು ಯಾಚಿಸಬೇಕು ಮತ್ತು ಎಲ್ಲಿ ಒಂದು ಜನಾಂಗದ ಶಿಕ್ಷೆಯ ಬಗ್ಗೆ ಉಲ್ಲೆಖವಿದೆಯೋ ಅಲ್ಲಿ ಅಲ್ಲಾಹನಲ್ಲಿ ಅಲ್ಲಾಹನ ಆಶ್ರಯ ಪಡೆಯುವುದಾಗಿ ಕೇಳಿಕೊಳ್ಳಬೇಕು ಬಹಳ ಗಾಂಭೀರ್ಯದಿಂದ ಅದನ್ನು ಓದಬೇಕು ಮತ್ತು ಅದನ್ನು ಅನುಸರಿಸಬೇಕು."

(ಮಲ್‌ಫೂಝಾತ್, ಸಂಪುಟ–5, ಪುಟ–157)

ಅದರ ಪ್ರಾಮುಖ್ಯತೆಯನ್ನು ಅಂದಾಜಿಸಿದಾಗ ಮಾತ್ರ ಮತ್ತು ಅದರೊಂದಿಗೆ ವಿಶೇಷ ಸಂಬಂಧವಿರಿಸಿದಾಗ ಈ ಪರಿಸ್ಥಿತಿಯು ಸಂಭವಿಸಬಹುದು. ಆದ್ದರಿಂದ ನಾವು ಪವಿತ್ರ ಖುರ್‌ಆನ್‌ಗಾಗಿ ನಮ್ಮ ಹೃದಯದಲ್ಲಿ ಈ ಪ್ರಾಮುಖ್ಯತೆ ಮತ್ತು ವಿಶೇಷ ಸಂಬಂಧವನ್ನು ರಚಿಸಬೇಕಾಗಿದೆ. ಕೆಲವು ಜನರ ಈ ನೆಪ ಪವಿತ್ರ ಖುರ್‌ಆನ್ ಅನ್ನು ಅರ್ಥಮಾಡಿಕೊಳ್ಳುವುದು ತುಂಬಾ ಕಷ್ಟಕರವಾಗಿದೆ ಎಂದು ಹೇಳುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಕೆಲವು ಅಜ್ಞಾನಿಗಳು ನಾವು ಪವಿತ್ರ ಖುರ್‌ಆನ್ ಅನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ." ಇದು ಅವರ ತಪ್ಪಾಗಿದೆ. ಪವಿತ್ರ ಖುರ್‌ಆನ್ ಸಂಬಿಕೆಯ ವಿಷಯಗಳನ್ನು ವಿವರಿಸಿರುವ ವಿಧಾನವು ಅದರ ವಾಕ್ಚಾತುರ್ಯದಲ್ಲಿ ಸಾಟಿಯಿಲ್ಲ ಮತ್ತು ಅದರ ತಾರ್ಕಿಕತೆಯು ಹೃದಯಗಳನ್ನು ಪ್ರಭಾವಿಸುತ್ತದೆ ಎಂದು ವಿವರಿಸಿದರು. ಅದರ ವಾಕ್ಚಾತುರ್ಯ ಎಷ್ಟು ಶಕ್ತಿಯುತವಾಗಿದೆಯೆಂದರೆ ಅದನ್ನು ಸಂಪೂರ್ಣವಾಗಿ ಅನಕ್ಷರಸ್ಥರಾಗಿದ್ದ ಅರೇಬಿಯಾದ ಅಲೆಮಾರಿಗಳು ಅರ್ಥವಾಡಿಕೊಳ್ಳುತ್ತಾರೆ. ಈಗಿನ ಕಾಲದ ಜನರು ಅದನ್ನು ಅರ್ಥಮಾಡಿಕೊಳ್ಳದಿದ್ದರೆ ಹೇಗೆ? (ಮಲ್‌ಫೂಝಾತ್, ಸಂಪುಟ–5, ಪುಟ–177, ಆವೃತ್ತಿ 2003, ಮುದ್ರಿತ ರಬ್ವಾ)

ಈ ಯುಗದಲ್ಲಿ ಸರ್ವಶಕ್ತನಾದ ಅಲ್ಲಾಹನು ಈ ಮಹತ್ತರವಾದ ಅನುಗ್ರಹವನ್ನು ನೀಡಿದ್ದಾನೆ ಮತ್ತು ಈ ಯುಗದಲ್ಲಿ ಸರ್ವಶಕ್ತನಾದ ಅಲ್ಲಾಹನು ನಮಗೆ ಸ್ಪಷ್ಟವಾದ ಆಜ್ಞೆಗಳನ್ನು ವಿವರಿಸುವುದಲ್ಲದೆ, ಪವಿತ್ರ ಖುರ್‌ಆನ್‌ನ ಆಳವಾದ ಸತ್ಯಗಳು ಮತ್ತು ಒಳನೋಟಗಳನ್ನು ನಮಗೆ ಬಿಚ್ಚಿಟ್ಟ ವಾಗ್ದತ್ತ ಮಸೀಹ್ ಹಾಗೂ ಮಹದಿ ಅಲೈಹಿಸ್ಸಲಾಮ್ ಅವರನ್ನು ಕಳುಹಿಸಿದ್ದಾನೆ. **ವಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂ ಬಿಹಿಮ್** (ಅಲ್‌ಜುಮುಅ: 04) ಅನುಗ್ರಹವು ನಮಗೆ ನೀಡಿದ್ದಾನೆ. ಆದ್ದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನಿಡಿರುವಂತಹ ಈ ನಿಧಿಯಿಂದ ನಾವು ರತ್ನಗಳನ್ನು ಸಂಗ್ರಹಿಸಿಕೊಳ್ಳಬೇಕು. ಮತ್ತು ಅವರ ನಿಜವಾದ ಪ್ರೇಮಿಗಳಾಗುವವರೆಗೆ ಇದು ಸಂಭವಿಸುವುದಿಲ್ಲ. ನಮ್ಮ ಜಮಾತ್‌ನ ಹೊರಗಿನ ಮುಸ್ಲಿಮರಲ್ಲಿ, ಜಗತ್ತಿನಲ್ಲಿ ತುಂಬಾ ಉತ್ತಮವಾಗಿ ಪವಿತ್ರ ಖುರ್‌ಆನ್ ಅನ್ನು ಓದುವ, ಬಹುಮಾನ ಪಡೆದಿರುವ, ದೊಡ್ಡ ರೆಕಾರ್ಡಿಂಗ್ ಕ್ಯಾಸೆಟ್‌ಗಳನ್ನು ಹೊಂದಿರುವ ಅನೇಕ ಜನರಿದ್ದಾರೆ. ಆದರೆ ಇದರ ಹೊರತಾಗಿಯೂ, ಪವಿತ್ರ ಖುರ್‌ಆನ್‌ನ ಅರ್ಥಗಳು ಮತ್ತು ಬೇಡಿಕೆಗಳನ್ನು ತಿಳಿದಿಲ್ಲದ ಕೆಲವರು ಉತ್ತಮವಾಗಿ ಪಠಿಸುವವರೂ ಇದ್ದಾರೆ. ಬದಲಿಗೆ, ಪ್ರಮುಖ ವಿದ್ವಾಂಸರಿಗೆ ಅದರ ಬ್ಗಗೆ ತಿಳಿದಿಲ್ಲ ಹೀಗಾಗಿ ಇಸ್ಲಾಂನಲ್ಲಿ ಆಯತ್‌ಗಳ ನಾಸುಖ್ ಮನ್‌ಸೂಖ್ (ರದ್ದತಿಯ) ಸಮಸ್ಯೆ ಬಹಳ ಸಮಯವರೆಗೆ ನಡೆದಿದೆ ಎಂದು ತಿಳಿದಿಲ್ಲ ಮತ್ತು ಅವರು ಈಗಲೂ ಕೆಲವು ಆಯತ್‌ಗಳನ್ನು ಅರ್ಥಮಾಡಿಕೊಳ್ಳುವುದಿಲ್ಲ, ಇದರಲ್ಲಿ ಯೇಸುವಿನ ಮರಣದ ವಿಷಯವೂ ಸೇರಿದೆ. ಆದಾಗ್ಯೂ, ಅದರ ಅರ್ಥಗಳ ಬಗ್ಗೆ ಅವರಿಗೆ ತಿಳಿದಿಲ್ಲ. ಹಝ್ರತ್ ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್(ರ) ಅವರು ಈ ಬಗ್ಗೆ ಒಂದು ದೊಡ್ಡ ಎಚ್ಚರಿಕೆಯನ್ನು ನೀಡುವ ಒಂದು ಹದೀಸ್ ಇದೆ, ಅವರು ಹೇಳುತ್ತಾರೆ ನಾನು ಹಝ್ರತ್ ಪೈಗಂಬರ್(ಸ) ಅವರಿಗೆ ಹೀಗೆ ಹೇಳುತ್ತಿರುವುದನ್ನು ಕೇಳಿದೆ ಅವರು ಹೇಳುತ್ತಿದ್ದರು ಪವಿತ್ರ ಖುರ್‌ಆನ್ ಅನ್ನು ಪಠಿಸುವುದರಲ್ಲಿ ಅಹಂಕಾರದಿಂದ ಹೆಮ್ಮೆ ಪಡುವ ಸಮಯ ಬರುತ್ತದೆ ನಮಗಿಂತ ದೊಡ್ಡ ಓದುಗ ಯಾರಿದ್ದಾರೆ? ನಮಗಿಂತ ದೊಡ್ಡ ವಿದ್ವಾಂಸ ಯಾರಿದ್ದಾರೆ? ಅದಕ್ಕೆ ಹಝ್ರತ್ ಪೈಗಂಬರ್(ಸ) ರವರು ಸಹಾಬರಿಗೆ ಕೇಳಿದರು ಅಂತಹವರಲ್ಲಿ ನೀವು ಏನಾದರೂ ಒಳ್ಳೆಯದನ್ನು ಕಾಣುತ್ತೀರಾ? ಅದಕ್ಕೆ ಸಹಾಬ ಹೇಳಿದರು: ಖಂಡಿತವಾಗಿಯೂ ಇಲ್ಲ. ಈ ಬಗ್ಗೆ, ಹಝ್ರತ್ ಪೈಗಂಬರ್(ಸ) ಹೇಳಿದರು. ಈ ಜನರು ನಿಮ್ಮಿಂದ ಹಾಗೂ ಈ ಉಮ್ಮತ್ತಿನಿಂದಲೇ ಇರುವವರು ಆದರೆ ಅವರು ನರಕದ ಇಂಧನವಾಗುತ್ತಾರೆ.

(ಮಜ್‌ಮರ್ಝ್ಝುವಾಎದ್ ವ ಮಂಬುಲ್ ಫವಾಎದ್, ಕಿತಾಬುಲ್ ಇಲ್ಮ್, ಹದೀಸ್–876, ಸಂಪುಟ–1, ಪುಟಗಳು 251–252, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001, ಮಸ್ನದುಲ್ ಬಝ್ಝಾರ್, ಮಸ್ನದ್ ಅಬ್ಬಾಸ್ ಬಿನ್ ಅಬ್ದುಲ್ ಮುತಲ್ಲಿಬ್, ಸಂಪುಟ–2, ಪುಟ–218)

ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಅನುಗ್ರಹಗಳ ವಾರಸುದಾರರಾಗಿರಲು ಮತ್ತು ಅಲ್ಲಾಹನ ಸಂತೃಪ್ತಿ ನೀಡಲು ಮತ್ತು ಸರಕದ ಬೆಂಕಿಯಿಂದ ರಕ್ಷಿಸುವ ಏಕೈಕ ವಸ್ತು ಅದು ಪವಿತ್ರ ಖುರ್‌ಆನ್‌ನ ಬೋಧನೆಯನ್ನು ನಮ್ರತೆಯಿಂದ ಅರ್ಥಮಾಡಿಕೊಳ್ಳುವುದು ಮತ್ತು ಅದನ್ನು ಅನುಸರಿಸುವುದಗಿದೆ. ಇದು ವೃತ್ತಿಯನ್ನಾಗಿ ಮಾಡಬಾರದು ಬದಲಿಗೆ ಅದನ್ನು ಪ್ರೀತಿಸಬೇಕು. ಮತ್ತು ಇಂದು ನಮ್ಮಲ್ಲಿರುವ ಪ್ರತಿಯೊಬ್ಬ ಅಹ್ಮದಿಯ ಕರ್ತವ್ಯವೂ ಅದರತ್ತ ಗಮನ ಹರಿಸುವುದಾಗಿದೆ. ಅದನ್ನು ಸಾಧಿಸಲು ಪ್ರಯತ್ನಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕಿಶ್ತಿ ಎನೂಹ್‌ನಲ್ಲಿ ನುಡಿಯುತ್ತಾರೆ: ನಾನು ನಮ್ಮೊಂದಿಗೆ ಸತ್ಯವಾಗಿ ಹೇಳುತ್ತೇನೆ. ಯಾರು ಪವಿತ್ರ ಖುರ್‌ಆನಿನ ಏಳುನೂರು ಅಜ್ಞೆಗಳಲ್ಲಿ ಒಂದು ಚಿಕ್ಕದಾದ ಆಜ್ಞೆಯನ್ನು ಕೂಡ ಉಲ್ಲಂಘಿಸುತ್ತಾನೋ ಅವನು ತನ್ನ ಮೋಕ್ಷದ ಬಾಗಿಲನ್ನು ತನ್ನ ಕೈಗಳಿಂದಲೇ ಮುಚ್ಚಿಬಿಡುತ್ತಾನೆ. ನಿಜವಾದ ಮತ್ತು ಪರಿಪೂರ್ಣವಾದ ಮೋಕ್ಷದ ಮಾರ್ಗಗಳನ್ನು ಪವಿತ್ರ ಖುರ್‌ಆನ್ ತೆರೆದಿದೆ. ಉಳಿದವು ಅವುಗಳ ನೆರಳಿನ ರೂಪದಲ್ಲಿದೆ. ಆದುದರಿಂದ ನೀವು ಪವಿತ್ರ ಖುರ್‌ಆನ್‌ನನ್ನು ಗಹನವಾಗಿ ಚಿಂತಿಸುತ್ತಾ ಓದಿರಿ. ಅದನ್ನು ಬಹಳ ಪ್ರೀತಿಸಿರಿ ನೀವು ಬೇರೇನನ್ನು ಪ್ರೀತಿಸುವುದಕ್ಕಿಂತ ಹೆಚ್ಚು ಅದನ್ನು ಪ್ರೀತಿಸಿರಿ. ಏಕೆಂದರೆ ಅಲ್ಲಾಹನು ನನ್ನನ್ನು ಸಂಭೋಧಿಸಿ

ಹೀಗೆ ಹೇಳಿದನು. **ಅಲ್‌ಖೈರು ಕುಲ್ಲುಹು ಫಿಲ್ ಖುರ್‌ಆನ್** ಎಲ್ಲಾ ಒಳಿತುಗಳು ಪವಿತ್ರ ಖುರ್‌ಆನ್‌ನಲ್ಲಿದೆ. ಈ ಮಾತು ಸತ್ಯವೇ ಆಗಿದೆ. ಇತರ ವಸ್ತುಗಳಿಗೆ ಅದರ ಮೇಲೆ ಅಗ್ರಸ್ಥಾನ ನೀಡುವವರ ಬಗ್ಗೆ ಖೇದವಾಗುತ್ತದೆ. ನಿಮ್ಮ ಎಲ್ಲಾ ಜಯಗಳ ಮತ್ತು ಮೋಕ್ಷದ ಮೂಲವು ಪವಿತ್ರ ಖುರ್‌ಆನ್ ಆಗಿದೆ. ಧಾರ್ಮಿಕವಾದ ಯಾವುದೇ ಅವಶ್ಯಕತೆ ಪವಿತ್ರ ಖುರ್‌ಆನ್ ಮೂಲಕ ಪರಿಹರಿಸಲ್ಪಡದೆ ಇರುವುದಿಲ್ಲ. ಪುನರುತ್ಥಾನದ ದಿನದಂದು ನಿಮ್ಮ ವಿಶ್ವಾಸದ ಬಗ್ಗೆ ಸತ್ಯವೂ ಅಸತ್ಯವೂ ಎಂದು ಸಾಕ್ಷ್ಯ ನೀಡುವುದು ಪವಿತ್ರ ಖುರ್‌ಆನ್ ಆಗಿದೆ. ನಿಮಗೆ ನೇರವಾಗಿ ಮಾರ್ಗದರ್ಶನ ನೀಡಬಲ್ಲ ಗ್ರಂಥ ಪವಿತ್ರ ಖುರ್‌ಆನ್ ಹೊರತು ಬೇರೆ ಯಾವುದೂ ಆಕಾಶದ ಕೆಳಗೆ ಇಲ್ಲ. ದೇವನು ಪವಿತ್ರ ಖುರ್‌ಆನನ್ನು ನಿಮಗೆ ದಯಪಾಲಿಸಿ ನಿಮ್ಮ ಮೇಲೆ ಬಹಳ ಉಪಕಾರ ಮಾಡಿರುವನು. ನಾನು ಸತ್ಯವಾಗಿ ಹೇಳುತ್ತೇನೆ. ನಿಮಗೆ ಅವತೀರ್ಣಗೊಳಿಸಲ್ಪಟ್ಟ ಗ್ರಂಥ ಕ್ರೈಸ್ತರಿಗೆ ಅವತೀರ್ಗೊಳಿಸಲ್ಪಟ್ಟಿದ್ದರೆ ಅವರು ನಾಶ ಹೊಂದುತ್ತಿರಲಿಲ್ಲ. ನಿಮಗೆ ನೀಡಲಾದ ಈ ಅನುಗ್ರಹ ಮತ್ತು ಮಾರ್ಗದರ್ಶನವನ್ನು ತೌರಾತ್‌ಗೆ ಬದಲಾಗಿ ಯಹೂದಿಯರಿಗೆ ನೀಡಿರುತ್ತಿದ್ದರೆ ಅವರ ಕೆಲವು ಪಂಗಡಗಳು ಪುನರುತ್ಥಾನವನ್ನು ನಿರಾಕರಿಸುತ್ತಿರಲಿಲ್ಲ. ಆದುದರಿಂದ ನಿಮಗೆ ನೀಡಲ್ಪಟ್ಟ ಈ ಅನುಗ್ರಹವನ್ನು ಗೌರವಿಸಿರಿ. ಇದು ಅತ್ಯಂತ ಪ್ರಿಯಕರ ಅನುಗ್ರಹವಾಗಿದೆ. ಇದು ಬಹಳ ದೊಡ್ಡ ಸಂಪತ್ತಾಗಿದೆ. ಪವಿತ್ರ ಖುರ್‌ಆನ್ ಅವತೀರ್ಣಗೊಳ್ಳದಿರುತ್ತಿದ್ದರೆ ಸಕಲ ಲೋಕವು ಕೊಳಕು ಮಾಂಸದ ಪಿಂಡದ ಹಾಗೆ ಆಗುತ್ತಿತ್ತು. ಪವಿತ್ರ ಖುರ್‌ಆನ್ ಎಂತಹ ಗ್ರಂಥವೆಂದರೆ ಅದರ ಎದುರಿಗೆ ಇತರ ಎಲ್ಲಾ ಮಾರ್ಗದರ್ಶನಗಳು ನಿರರ್ಥಕವಾಗಿವೆ. (ಕಿಶ್ತಿ ಎ ನೂಹ್, ರೂಹಾನಿ ಖಝಾಇನ್, ಸಂಪುಟ-19, ಪುಟ-26-27)

ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಪವಿತ್ರ ಖುರ್‌ಆನನ್ನು ಪರಿತ್ಯಜಿಸಲಾದ ವಸ್ತುವಿನ ಹಾಗೆ ಬಿಟ್ಟು ಬಿಡಬೇಡಿರಿ. ಅದರಲ್ಲಿಯೇ ನಿಮ್ಮ ಜೀವಿತವು ಅಡಕವಾಗಿದೆ. ಪವಿತ್ರ ಖುರ್‌ಆನಿಗೆ ಗೌರವ ನೀಡುವವರು ಆಕಾಶದಲ್ಲಿ ಗೌರವಿಸಲ್ಪಡುವರು. ಯಾರು ಪ್ರತಿಯೊಂದು ಹದೀಸ್ ಮತ್ತು ಪ್ರತಿಯೊಂದು ಮಾತಿನ ಮೇಲೆ ಪವಿತ್ರ ಖುರ್‌ಆನಿಗೆ ಅಗ್ರಸ್ಥಾನ ನೀಡುತ್ತಾರೋ ಅವರಿಗೆ ಆಕಾಶದಲ್ಲಿ ಅಗ್ರಸ್ಥಾನ ದೊರಕುವುದು. ಮಾನವರಿಗೆ ಭೂಲೋಕದಲ್ಲಿ ಪವಿತ್ರ ಖುರ್‌ಆನಿನ ಹೊರತು ಈಗ ಬೇರೆ ಗ್ರಂಥವಿಲ್ಲ, ಎಲ್ಲಾ ಆದಮ್ ಸಂತತಿಗಳಿಗೆ ಈಗ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವಸಲ್ಲಂ ರ ಹೊರತು ಅನ್ಯ ಸಂದೇಶ ವಾಹಕನಾಗಲಿ ಶಿಫಾರಸು ಗಾರನಾಗಲೀ ಇಲ್ಲ. ನೀವು ಸತ್ಯವಾದ ಪ್ರೀತಿಯನ್ನು ಈ ವೈಭವಶಾಲಿಯೂ ಪ್ರತಾಪಶಾಲಿಯೂ ಆಗಿರುವ ಪ್ರವಾದಿಯೊಂದಿಗೆ ಇರಿಸಲು ಪ್ರಯತ್ನಿಸಿರಿ ಅನ್ಯರಿಗೆ ಅವರ ಮೇಲೆ ಯಾವುದೇ ಶ್ರೇಷ್ಠತೆ ನೀಡಬೇಡಿರಿ ಆಗ ನೀವು ಆಕಾಶದಲ್ಲಿ ಮೋಕ್ಷಗಳಿಸಿದವರೆಂದು ಬರೆಯಲ್ಪಡುವಿರಿ ನೀವು ನೆನಪಿಡಿರಿ. ಮೋಕ್ಷವೆಂದರೆ ಮೃತಪಟ್ಟ ನಂತರ ಪ್ರಕಟವಾಗುವ ಏನೋ ಒಂದು ವಸ್ತುವೆಂದು ಭಾವಿಸಬೇಡಿರಿ. ವಾಸ್ತವಿಕ ಮೋಕ್ಷವು ಇಹಲೋಕದಲ್ಲೇ ತನ್ನ ಪ್ರಕಾಶ ತೋರಿಸುತ್ತದೆ. ಮೋಕ್ಷಗಳಿಸಿದವರು ಯಾರು? ದೇವನ ಅಸ್ತಿತ್ವ ಸತ್ಯವೆಂದು; ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಂ ದೇವನ ಮತ್ತು ಅವನ ಸೃಷ್ಟಿಗಳ ನಡುವೆ ಶಿಫಾರಸುಗಾರರಾಗಿರುವರೆಂದು; ಆಕಾಶದ ಕೆಳಗೆ ಅವರಿಗೆ ಸಮಾನವಾದ ಸ್ಥಾನ ಗಳಿಸಿದ ಯಾವುದೇ ಸಂದೇಶವಾಹಕ ನಿಲ್ಲವೆಂದು; ಪವಿತ್ರ ಖುರ್‌ಆನಿಗೆ ಸಮಾನವಾದ ಸ್ಥಾನ ಗಳಿಸಿದ ಯಾವ ಗ್ರಂಥವೂ ಇಲ್ಲವೆಂದು ಯಾರನ್ನೂ ಶಾಶ್ವತವಾಗಿ ಜೀವಂತವಾಗಿರಿಸಲು ಅಲ್ಲಾಹನು ಬಯಸಿಲ್ಲವಾದರೂ ನಮ್ಮ ಆದರಣೀಯ ಪ್ರವಾದಿ ಶಾಶ್ವತವಾಗಿ ಜೀವಿಸಿರಲು ಅವರ ಶರೀಅತಿನೊಂದಿಗೆ ಇರುವ ಆಧ್ಯಾತ್ಮಿಕ ಅನುಗ್ರಹವು ಪುನರುತ್ಥಾನದ ಕಾಲದ ತನಕ ಜಾರಿಯಾಗಿರುವಂತೆ ದೇವನು ಆಸ್ತಿಭಾರ ಹಾಕಿರುವನೆಂದು; ಅವರ ಆಧ್ಯಾತ್ಮಿಕ ಅನುಗ್ರಹವನ್ನು ನೀಡುವ ಮೂಲಕ ಈ ವಾಗ್ದತ್ತ ಮಸೀಹನ್ನು ಲೋಕಕ್ಕೆ ಕಳುಹಿಸಿದನು. ಮತ್ತು ಇಸ್ಲಾಮೀ ಭವನದ ನಿರ್ಮಾಣವು ಪೂರ್ಣವಾಗಲು ವಾಗ್ದತ್ತ ಮಸೀಹ್ ಆಗಮಿಸುವುದು ಅವಶ್ಯಕವಾಗಿತ್ತು ಎಂದು ದೃಢ ವಿಶ್ವಾಸವನ್ನು ಹೊಂದಿರುವವನು ಮೋಕ್ಷಗಳಿಸಿದವನು. ಪ್ರವಾದಿ ಮೂಸಾ(ಅಲೈಹಿಸ್ಸಲಾಮ್) ರ ಸಮುದಾಯಕ್ಕೆ ಆಗಮಿಸಿದ ಮಸೀಹರ ಹಾಗೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿವಸಲ್ಲಂ ರ ಸಮುದಾಯಕ್ಕೆ ಆಧ್ಯಾತ್ಮಿಕ ರೀತಿಯಲ್ಲಿ ಒಬ್ಬ ಮಸೀಹ್ ಆಗಮಿಸುವುದು ಲೋಕದ ಅತ್ಯಂತ ಮೊದಲು ಅವಶ್ಯಕವಾಗಿತ್ತು. ಇದರ ಕಡೆಗೆ ಪವಿತ್ರ ಖುರ್‌ಆನಿನ ಈ ವಚನವು ಸೂಚಿಸುತ್ತದೆ. **ಇಹ್‌ದಿನಸ್ಸಿರಾತಲ್ ಮುಸ್ತಖೀಮ್, ಸಿರಾತಲ್ಲಝೀನ ಅನ್‌ಅಮ್‌ತ ಅಲೈಹಿಮ್**. ಎಂದರೆ, ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು, ನಿನ್ನ ಅನುಗ್ರಹಕ್ಕೆ ಪಾತ್ರರಾದವರ ಮಾರ್ಗದಲ್ಲಿ. (ಪವಿತ್ರ ಖುರ್‌ಆನ್ 1:6,7) (ಕಿಶ್ತಿ ಎ ನೂಹ್, ರೂಹಾನಿ ಖಝಾಇನ್, ಸಂಪುಟ-19, ಪುಟ-13-14)

ಅಲ್ಲಾಹನು ನಮ್ಮನ್ನು ಮತ್ತು ನಮ್ಮ ಸಂತತಿ ಮತ್ತು ಖಿಯಾಮತ್ ದಿನದವರೆಗೆ ಬರುವ ನಮ್ಮ ಮುಂದಿನ ಪೀಳಿಗೆಗಳು ಪವಿತ್ರ ಖುರ್‌ಆನ್‌ನ ಮೇಲೆ ನಿಜವಾದ ಪ್ರೀತಿಯನ್ನಿರಿಸಿ ಅದರ ಬೋಧನೆಗಳನ್ನು ಅನುಸರಿಸುವವರಂತೆ ಮಾಡಲಿ. ಆಮೀನ್

...*...*...*...

*(ಪುಟ ಸಂಖ್ಯೆ 03ರ ಉಳಿದ ಭಾಗ)*

ಅನುಗ್ರಹಗಳನ್ನು ನೆನಪಿಸಿ ಅವನ ಅಜ್ಞೆಗಳನ್ನು ಪಾಲಿಸುವುದಾಗಿದೆ. ಅಲ್ಲಾಹನೊಂದಿಗೆ ಔದಾರ್ಯಪೂರ್ಣ ವರ್ತನೆ ಅವನನ್ನು ನೋಡುತ್ತಿರುವೆವೋ ಎಂಬಂತೆ ಅವನ ಅಸ್ತಿತ್ವದ ಬಗ್ಗೆ ದೃಢ ವಿಶ್ವಾಸ ಹೊಂದುವುದಾಗಿದೆ. ಅಲ್ಲಾಹನೊಂದಿಗೆ **ಈತಾಯಿಝಿಲ್‌ಖುರ್‌ಬಾ** (ನಿಕಟ ಬಂಧುಗಳಿಗೆ ಸಹಾಯ ನೀಡುವುದು) ಹೀಗೆ:- ಸ್ವರ್ಗದ ಆಶೆಯಿಂದಾಗಲಿ ನರಕದ ಭಯದಿಂದಾಗಲಿ ಅಲ್ಲಾಹನ ಆರಾಧನೆ ಮಾಡದೆ- ಸ್ವರ್ಗ ನರಕಗಳಿಲ್ಲವೆಂದು ಊಹಿಸಿದರೂ- ಅವನ ಬಗ್ಗೆ ಪ್ರೀತಿ ಮತ್ತು ಅನುಸರಣೆಯಲ್ಲಿ ವ್ಯತ್ಯಾಸವಿಲ್ಲದೆ ಆರಾಧಿಸಬೇಕು. ಸುವಾರ್ತೆಗಳಲ್ಲಿ ಬರೆದಿದೆ ನಿಮ್ಮನ್ನು ಶಪಿಸಿದವರಿಗೆ ನೀವು ಅನುಗ್ರಹ ಕೋರಿರಿ ಎಂದು; ಪವಿತ್ರ ಖುರ್‌ಆನ್ ಹೇಳುವುದೇನೆಂದರೆ ನೀವು ಸ್ವಾರ್ಥಕ್ಕೋಸ್ಕರ ಏನನ್ನು ಮಾಡಬೇಡಿರೆಂದು. ನೀವು ಅಲ್ಲಾಹನ ಪ್ರಕಾಶದ ಭವನವಾದ ನಿಮ್ಮ ಹೃದಯದೊಂದಿಗೆ ತೀರ್ಪು ಕೇಳಿರಿ ಎಂದು ಪವಿತ್ರ ಕುರ್‌ಆನ್ ಹೇಳುತ್ತದೆ. ಅತಂಹ ವ್ಯಕ್ತಿಯೊಂದಿಗೆ ಹೇಗೆ ವರ್ತಿಸಬೇಕೆಂದು ನಿಮ್ಮ ಹೃದಯದೊಂದಿಗೆ ಕೇಳಿರಿ. ಶಾಪ ನೀಡಿದವನು ದಯೆ ತೋರಿಸಲ್ಪಟ್ಟಡಲು ಅರ್ಹನು ಆತನ ಮೇಲೆ ಆಕಾಶದಿಂದ ಶಾಪವಿಲ್ಲ ಎಂದು ನಿರ್ಧರಿಸಿದರೆ ಶಪಿಸಬೇಡಿರಿ. ನೀವು ದೇವನ ಇಚ್ಛೆಗೆ ವಿರುದ್ಧವಾಗಿ ವರ್ತಿಸಬೇಡಿ. ಆದರೆ ನಿಮ್ಮ ಮನಸ್ಸಾಕ್ಷಿ ಅವನು ಕ್ಷಮಾರ್ಹನಲ್ಲವೆಂದು ನಿರ್ಧರಿಸುವುದಾದರೆ, ಆಕಾಶದಿಂದಲೂ ಅವನ ಮೇಲೆ ಶಾಪವಿದೆ ಎಂದು ನಿಮ್ಮ ಹೃದಯಕ್ಕೆ ತೋಚುವುದಾದರೆ ನೀವು ಅವನಿಗೋಸ್ಕರ ಅನುಗ್ರಹ ಕೋರಬೇಡಿರಿ. ಶೈತಾನನಿಗೆ ಯಾವ ಪ್ರವಾದಿಯು ಅನುಗ್ರಹ ಬಯಸಲಿಲ್ಲವೋ ಹಾಗೆ. ಯಾವುದೇ ಪ್ರವಾದಿ ಶೈತಾನನ್ನು ಶಾಪದಿಂದ ಸ್ವತಂತ್ರನನ್ನಾಗಿ ಮಾಡಲಿಲ್ಲ. ಆದರೆ ಯಾರಿಗೂ ಶಾಪ ನೀಡುವ ಬಗ್ಗೆ ಅವಸರ ಪಡಬೇಡಿರಿ. ಬಹುತೇಕ ಕೆಟ್ಟ ಸಂಶಯಗಳು ಸುಳ್ಳುಗಳಾಗಿರುತ್ತವೆ. ಬಹುತೇಕ ಶಾಪಗಳು ಶಪಿಸುವವನ ಮೇಲೆಯೇ ಬೀಳುತ್ತವೆ. ಜಾಗರೂಕತೆಯಿಂದ ಹೆಜ್ಜೆ ಹಾಕಿರಿ. ಚೆನ್ನಾಗಿ ಪರಿಶೀಲಿಸಿ ಒಂದು ಕೆಲಸ ಮಾಡಿರಿ ಮತ್ತು ದೇವನಿಂದ ಸಹಾಯ ಬೇಡಿಕೊಳ್ಳಿರಿ. ನೀವು ಅಂಧರಾಗಿ ನ್ಯಾಯನಿಷ್ಠನನ್ನು ದೌರ್ಜನ್ಯಗಾರನೆಂದು ಗಣಿಸಬೇಡಿರಿ. ಸತ್ಯವಂತನನ್ನು ಸುಳ್ಳುಗಾರನೆಂದು ಯೋಚಿಸಬೇಡಿರಿ. ನೀವು ದೇವನ ಕೋಪಕ್ಕೆ ಪಾತ್ರರಾಗಿ ನಿಮ್ಮ ಎಲ್ಲಾ ಸತ್ಯ ಮಾರ್ಗಗಳು ವ್ಯರ್ಥವಾಗದಿರಲಿ. **(ಕಿಶ್ತಿ ಎ ನೂಹ್, ರೂಹಾನಿ ಖಝಾಇನ್, ಸಂಪುಟ-19, ಪುಟ-29-28)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

# ಹಝ್ರತ್ ಮುಹಮ್ಮದ್ ಸಲ್ಲಲ್ಲಹು ಅಲೈಹಿವ ಸಲ್ಲಮ್ ರವರ ಜೀವನ ಚರಿತ್ರೆ, ಪವಿತ್ರ ಖುರ್‌ಆನ್‌ನ ದೃಷ್ಟಿಯಿಂದ

**(ಲಈಖ್ ಅಹ್ಮದ್ ನಾಯೆಕ್, ಮುರಬ್ಬಿ ಸಿಲ್ಸಿಲಾ)**

ಪ್ರವಾದಿಯರ ಜೀವನ ಚರಿತ್ರೆಯ ಯಾವುದೇ ಅಂಶವನ್ನು ನೋಡಿದರೂ ಅದು ಅತ್ಯಂತ ಮನಮೋಹಕತೆಯಿಂದ ಹಾಗೂ ಸೌಂದರ್ಯತೆಯಿಂದ ಕೂಡಿರುತ್ತದೆ. ಹಝ್ರತ್ ಅಖದಸ್ ಮುಹಮ್ಮದ್ ಮುಸ್ತಫಾ[ಸ]ರ ಮಹೋನ್ನತವಾದ ವ್ಯಕ್ತಿತ್ವವನ್ನು ಹೊಂದಲು ಅಲ್ಲಾಹನು ಆಕಾಶದಿಂದ ಹೀಗೆ ಕೊಂಡಾಡಿದನು. **ಲಖದ್ ಕಾನ ಲಕುಂ ಫೀ ರಸೂಲುಲ್ಲಾಹ್ ಉಸ್ವತುನ್ ಹಸನ** (ಅಲ್‌ಅಹ್‌ಝಾಬ್: 22) ನಿಮ್ಮ ಪೈಕಿ ಈ ಪ್ರವಾದಿ[ಸ] ಯ ಚರಿತ್ರೆಯೂ ಮಾದರಿ ರೂಪವಾಗಿದೆ.

ಅವರ[ಸ] ಕಾರುಣ್ಯಭರಿತ ವ್ಯಕ್ತಿತ್ವ ಎಲ್ಲಾ ಮನುಷ್ಯತ್ವ ಗುಣಗಳ ಸರ್ವೋನ್ನತ ಸಂಗ್ರಹದಿಂದ ಕೂಡಿದೆ ಮತ್ತು ಎಲ್ಲಾ ದೃಷ್ಟಿಯಿಂದಲೂ ಅದ್ವಿತೀಯ ಹಾಗೂ ಅವಿಸ್ಮರಣೀಯವಾಗಿದೆ. ಅವರ[ಸ] ಜೀವನ ಚರಿತ್ರೆ ಕುರಿತು ಪವಿತ್ರ ಖುರ್‌ಆನ್ ಈ ಮಹೋನ್ನತವಾದ ಸಾಕ್ಷಿಯನ್ನು ನೀಡಿದೆ. **"ವ ಇನ್ನಕ ಲಅಲಾ ಖುಲುಖಿನ್ ಅಝೀಮ್"** ಎಂದರೆ ಅವರು[ಸ] ಚರಿತ್ರೆಯ ನೆಲೆಯಲ್ಲಿ ಸರ್ವೋನ್ನತ ಪದವಿಯನ್ನು ಹೊಂದಿದ್ದಾರೆ. (ಸೂರಃ ಖಲಮ್–5) ಅವರ[ಸ] ಚರಿತ್ರೆಯ ನಿಮಿತ್ತ ಮತ್ತು ಪರಿಪೂರ್ಣ ಗುಣವಂತಿಕೆಯ ಚಿತ್ರ ಆ ದೈವಿಕ ಸಾಕ್ಷಿಗಿಂತ ಮಿಗಿಲಾಗಿ ಯಾವುದಾಗಿರಲು ಸಾಧ್ಯ. ರಸೂಲುಲ್ಲಾಹ್[ಸ] ರವರ ಜೀವನ ಸಂಗಾತಿ ಹಝ್ರತ್ ಆಯಿಶಾ[ರ] ಅವರು ಸಹ ಅದೇ ಸಾಕ್ಷಿಯನ್ನು ನೀಡಿದ್ದಾರೆ. ಅಲ್ಲಾಹನ ಸಂತೃಪ್ತಿಗೆ ಅನುಗುಣವಾಗಿಯೇ ಅವರ ಎಲ್ಲಾ ಕಾರ್ಯಗಳಾಗುತ್ತಿತ್ತು. ಮತ್ತು ಯಾವ ಕಾರ್ಯಗಳಲ್ಲಿ ಅಲ್ಲಾಹನ ಅಸಂತುಷ್ಟತೆ ಇರುತ್ತಿತ್ತೋ ಅದರಿಂದ ದೂರವಿರುತ್ತಿದ್ದರು.
(ನವಾದಿರುಲ್ ಉಸೂಲ್ ಫೀ ಅಹಾದಿರ್ ರಸೂಲ್ ಹಕೀಮ್ ತಿಮಿಧ್ಧಿ, ಸಂಪುಟ–4, ಪುಟ–205)

ಹಝ್ರತ್ ಆಯಿಶಾ (ರ) ರವರ ಕಣ್ಣಾರೆ ಕಂಡ ಸಾಕ್ಷಿಯ ಸಾರಾಂಶ ಹೀಗಿತ್ತು. ಪ್ರವಾದಿ (ಸ) ರ ಚರಿತ್ರೆ ಖುರ್‌ಆನ್‌ನ ಪ್ರತಿರೂಪದಂತಿತ್ತು. ಅದರ ಅರ್ಥವೇನೆಂದರೆ,

(1) ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಲಾದ ಎಲ್ಲ ನಡತೆ ಮತ್ತು ಸತ್ಯವಿಶ್ವಾಸಿಗಳಿಗೆ ಬೇಕಾದ ಎಲ್ಲಾ ಗುಣಗಳ ಚಿತ್ರಣ ಹಝ್ರತ್ ರಸೂಲುಲ್ಲಾಹ್[ಸ] ರವರ ವ್ಯಕ್ತಿತ್ವವಾಗಿತ್ತು. ಆದ್ದರಿಂದ ಅವರು[ಸ] ಖುರ್‌ಆನ್‌ನ ನೈತಿಕ ಶಿಕ್ಷಣಗಳಂತೆ ನಡೆದು ಎಂತಹ ಸೌಂದರ್ಯಯುತ ಮಾದರಿ ಪ್ರಸ್ತುತಪಡಿಸಿದೆಂದರೆ ಅದನ್ನು ಪವಿತ್ರ ಖುರ್‌ಆನ್ ಅನುಸರಣೆಯೋಗ್ಯ ಮಾದರಿ ಎಂದು ಘೋಷಿಸಿದೆ.

(2) ಖುರ್‌ಆನ್ ನೀಡಿದ ಎಲ್ಲಾ ಆದೇಶಗಳನ್ನು ಪಾಲಿಸಿ ತೋರಿಸಿದ್ದಾರೆ. ಅಂದರೆ ಅವರು ನಡೆದಾಡುವ ಸಾಕ್ಷಾತ್ ಖುರ್‌ಆನ್ ಆಗಿದ್ದರು. ಪ್ರವಾದಿ[ಸ] ರವರ ಜೀವನ ಚರಿತ್ರೆಯ ಕುರಿತು ಪವಿತ್ರ ಖುರ್‌ಆನ್‌ನಲ್ಲಿ ಹಲವು ಕಡೆ ಅತ್ಯಂತ ಸುಂದರವಾಗಿ ಬೆಳಕನ್ನು ಚೆಲ್ಲಲಾಗಿದೆ. ಅದರಲ್ಲಿ ಅವರ ಪವಿತ್ರ ನಡತೆ, ಪವಿತ್ರ ಗುಣಗಳು, ಮತ್ತು ಸದ್ವರ್ತನೆ ಇತ್ಯಾದಿಯ ಅಗಣಿತ ಅಂಶಗಳನ್ನು ವಿವರಿಸಲಾಗಿದೆ. ಅದು ಸೃಷ್ಟಿಯ ಹಕ್ಕುಗಳ ಪಾಲನೆಯಲ್ಲಾಗಲೀ, ಅವರ ದಿನನಿತ್ಯದ ಕರ್ಮಗಳ ಬಗ್ಗೆಯಾಗಲಿ ಅಥವಾ ದೈನಂದಿನ ಚಟುವಟಿಕೆಗಳಲ್ಲಾಗಲಿ, ಆರಾಧನೆಯು ಪೈಕಿಯುದ್ದಾಗಲಿ ಅಥವಾ ಪ್ರಚಾರ ಹೊಣೆಗಾರಿಕೆಯಲ್ಲಾಗಲೀ ಅಥವಾ ಅವರ ಪವಿತ್ರ ನಡಾವಳಿಕೆಯಾಗಲಿ ಒಟ್ಟಿನಲ್ಲಿ ಚರಿತ್ರೆಯ ಹಲವು ಉಜ್ವಲ ಅಂಶಗಳನ್ನು ಸೈದ್ಧಾಂತಿಕ ರೂಪದಲ್ಲಾಗಲಿ ಅಥವಾ ಸವಿವರವಾಗಲಿ ಪವಿತ್ರ ಖುರ್‌ಆನ್ ಅದನ್ನು ಸ್ಪಷ್ಟಪಡಿಸಿದೆ ಮತ್ತು ತನ್ನ ಸಮುದಾಯಕ್ಕೆ ಒಂದು ಪರಿಪೂರ್ಣ ಮಾದರಿಯನ್ನಾಗಿ ಮಾಡಿದೆ.

ಮನುಷ್ಯನ ಚರಿತ್ರೆ ಎರಡು ವಿಧಗಳಲ್ಲಿ ವಿಭಜಿಸಲ್ಪಟ್ಟಿದೆ. ಒಂದು ಸೃಷ್ಟಿಕರ್ತನ ಹಕ್ಕುಗಳು ಅಂದರೆ ದೇವನ ಹಕ್ಕುಗಳು ಇನ್ನೊಂದು ಸೃಷ್ಟಿಗಳ ಪೈಕಿ ಹಕ್ಕುಗಳು. ಈ ಎರಡೂ ಜವಾಬ್ಧಾರಿಗಳು ಎಷ್ಟು ಸುಂದರತೆ ಹಾಗೂ ಪೂರ್ಣತೆಯಿಂದ ಅದಕ್ಕೆ ತಕ್ಕಂತೆ ಪಾಲಿಸಲಾಗುವುದು ಮನುಷ್ಯನ ಚರಿತ್ರೆಯು ಸಹ ಪರಿಪೂರ್ಣ ಎಂದು ಸಾಬೀತಾಗುತ್ತದೆ. ಬನ್ನಿ ಪವಿತ್ರ ಖುರ್‌ಆನ್‌ನ ದೃಷ್ಟಿಯಿಂದ ಪ್ರವಾದಿಗಳ ನಾಯಕ ಹಝ್ರತ್ ಅಖದಸ್ ಮುಹಮ್ಮದ್ ಮುಸ್ತಫಾ (ಸ) ರವರ ಪವಿತ್ರ ಚರಿತ್ರೆಯ ಮೇಲೆ ಬೆಳಕು ಚೆಲ್ಲೋಣ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ:

**ಲಖದ್ ಜಾಅಕುಮ್ ರಸೂಲುಮ್ಮಿನ್ ಅನ್‌ಫುಸಿಕುಮ್ ಅಝೀಝುನ್ ಅಲೈಹಿ ಮಾ ಅನಿತ್ತುಮ್ ಹರೀಸುನ್ ಅಲೈಕುಮ್ ಬಿಲ್ ಮುಮಿನೀನ ರಊಫುರ್ರಹೀಮ್** (ಅತ್ತೌಬಃ: 128) ನಮಗೆ ತಿಳಿದಿರುವಂತೆ ಅಲ್ಲಾಹನು ತನ್ನ ಗುಣಲಕ್ಷಣಗಳ ಮೂಲಕ ಅವನ ವ್ಯಕ್ತಿತ್ವವನ್ನು ನಮಗೆ ಬಹಿರಂಗಪಡಿಸುತ್ತಾನೆ. ಮತ್ತು ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ನನ್ನ ಬಣ್ಣವನ್ನು ಸ್ವೀಕರಿಸಿ, ನನ್ನ ಬಣ್ಣದಲ್ಲಿ ಎಂದು ಹೋಗಬೇಕು, ಆಗ ಮಾತ್ರ ನೀವು ನನ್ನ ನಿಜವಾದ ದಾಸರಾಗಲು ಸಾಧ್ಯ. ಅಲ್ಲಾಹನ ಈ ನುಡಿಯು ಸಾದರ ಮಹೋನ್ನತವಾದ ಉದಾಹರಣೆ ಎಂದು ನಿಸ್ಸಂಶಯವಾಗಿ ಪ್ರವಾದಿ ಮುಹಮ್ಮದ್ (ಸ) ರಲ್ಲದೆ ಮತ್ತಾರಲ್ಲೂ ಕಾಣಲಾಗದು. ಏಕೆಂದರೆ ಅವರೆ (ಸ) ಅಲ್ಲಾಹನ ಆ ಪ್ರಿಯಕರ ದಾಸರಾಗಿದ್ದಾರೆ, ಅವರ ಪ್ರಕಾಶದಿಂದ ಒಂದು ಲೋಕವೇ ಅನುಗ್ರಹಿತವಾಗುತ್ತಿದೆ. ಇನ್‌ಶಾಅಲ್ಲಾಹ್ ಅನುಗ್ರಹಿತರಾಗುತ್ತಾ ಹೋಗುವುದು. ಅದರಿಂದ ತನ್ನ ಸೃಟಿಕರ್ತನನ್ನು ಗುರುತಿಸಿಕೊಳ್ಳಬಹುದಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಪ್ರವಾದಿ ಮುಹಮ್ಮದ್ (ಸ) ರವರ ಅನುಗ್ರಹಿತ ವ್ಯಕ್ತಿತ್ವದ ನಕ್ಷೆಯನ್ನು ಈ ರೀತಿ ಚಿತ್ರಿಸಿದ್ದಾರೆ. ಆ ವ್ಯಕ್ತಿ, ಅವನು ತನ್ನ ಸ್ವಭಾವದಿಂದ, ತನ್ನ ಗುಣಲಕ್ಷಣಗಳಿಂದ, ತನ್ನ ಕಾರ್ಯಗಳಿಂದ, ತನ್ನ ಕರ್ಮಗಳಿಂದ, ಮತ್ತು ತನ್ನ ಆಧ್ಯಾತ್ಮಿಕ ಹಾಗೂ ಪವಿತ್ರ ಶಕ್ತಿಯ ಬಲದಿಂದ ಪರಿಪೂರ್ಣ ನಮೂನೆ ಜ್ಞಾನರೂಪದಲ್ಲಿ ಮತ್ತು ಕಾರ್ಯರೂಪದಲ್ಲಿ ಮತ್ತು ನಿಷ್ಠೆಯಲ್ಲಿ ಮತ್ತು ದೃಢತೆಯಲ್ಲಿ ಸಾಬೀತುಪಡಿಸಿ ಪರಿಪೂರ್ಣ ಮನುಷ್ಯ ಎನಿಸಿಕೊಂಡನು.

ಆ ಮನುಷ್ಯ, ಅವನು ಎಲ್ಲ ಮನುಷ್ಯರಿಗಿಂತಲೂ ಪರಿಪೂರ್ಣ ಮನುಷ್ಯ ಎನಿಸಿಕೊಂಡನು. ಪರಿಪೂರ್ಣ ಪ್ರವಾದಿಯಾಗಿದ್ದನು ಮತ್ತು ಪರಿಪೂರ್ಣ ಕಾರುಣ್ಯಗಳಿಂದ ಒಳಗೂಡಿ ಬಂದಿದ್ದರು, ಅವನ ಆಧ್ಯಾತ್ಮಿಕ ಆಗಮನದಿಂದಾಗಿ ಮತ್ತು ಪುನರುಸ್ಥಾನದಿಂದಾಗಿ ಪ್ರಪಂಚದ ಮೊದಲ ಪುನರುಸ್ಥಾನವನ್ನು ಬಹಿರಂಗಪಡಿಸಿತು. ಮತ್ತು ಅವನ ಆಗಮನದಿಂದಾಗಿ ಮರಣ ಹೊಂದಿದ ಒಂದು ಲೋಕವೇ ಜೀವಿತಗೊಂಡಿತು. ಆ ಶುಭದಾಯಕ ಪ್ರವಾದಿ, ಹಝ್ರತ್ ಖಾತಮಲ್‌ಬಿಯಾ, ಇಮಾಮುಲ್ ಅಸ್‌ಫಿಯಾ, ಖತಮಲ್ ಮುರ್ಸಲೀನ್, ಫಖರುನ್ನಬಿಯೀನ್ ಜನಾಬ್ ಮುಹಮ್ಮದ್ ಮುಸ್ತಫಾ (ಸ)ರವರಾಗಿದ್ದಾರೆ. ಓ ನನ್ನ ಪ್ರೀತಿಯ ಪ್ರಭುವೇ ! ಈ ಪ್ರೀತಿಯ ಪ್ರವಾದಿಯ ಮೇಲೆ ಈ ಪ್ರಪಂಚದ ಆರಂಭದಿಂದಲೂ ನೀನು ಯಾರ ಮೇಲೆಯೂ ಕಳುಹಿಸಿದ ಕರುಣೆ ಮತ್ತು ಆಶೀರ್ವಾದವನ್ನು ದಯಪಾಲಿಸು. **ಅಲ್ಲಾಹುಮ್ಮ ಸಲ್ಲಿ ವ ಸಲ್ಲಿಮ್ ವ ಬಾರಿಕ್ ಅಲೈಹಿ ವಆಲಿಹೀ ವ ಅಸ್‌ಹಾಬಿಂಹೀ ಅಜ್‌ಮೀನ್** (ಅತ್ಮಾಮಲ್ ಹುಜ್ಜ, ರೂಹಾನಿ ಖಝಾಈನ್, ಸಂಪುಟ–8, ಪಉಟ–308)

ಮತ್ತು ಅವರು (ಅ) ನುಡಿಯುತ್ತಾರೆ: ಪವಿತ್ರ ಖುರ್‌ಆನ್ ಶಿಕ್ಷಣ ಅಕ್ರಮಗಳ ಹಾಗೂ ನಾಸ್ತಿಕರ ಮೇಲೂ ಕರುಣಿಸು. ಅಲ್ಲಾಹನು ಹೇಳುತ್ತಾನೆ. **ಅಝೀಝುನ್ ಅಲೈಹಿ ಮಾ ಅನಿತ್ತುಮ್ ಹರೀಸುನ್ ಅಲೈಕುಮ್** (ಅತ್ತೌಬ–128) ಅಂದರೆ ಓ ನನ್ನ ಸ್ನೇಹಿತ. ಈ ಪ್ರವಾದಿಯು ತಮ್ಮ ದು:ಖವನ್ನು ನೋಡಲಾರದಂತಹ ಪುಣ್ಯಾತ್ಮನು. ಅವರು ನಿಮ್ಮ ವಿಪತ್ತುಗಳನ್ನು ದೂರ ಮಾಡಬಯಸುತ್ತಾನೆ.
(ನೂರುಲ್ ಖುರ್‌ಆನ್, ರೂಹಾನಿ ಖಝಾಈನ್, ಸಂಘುಟ–9, ಪುಟ–423)

**ಸೃಷ್ಟಿಕರ್ತ (ದೇವನ) ಹಕ್ಕುಗಳ ಈಡೇರಿಸುವಿಕೆ**

ಪ್ರವಾದಿ ಮುಹಮ್ಮದ್(ಸ) ರವರ ಆಧ್ಯಾತ್ಮಿಕ ಜೀವನದ ಮೇಲೆ ನೀವು ದೃಷ್ಟಿ ಬೀರಿದರೆ ಈ ನೆಲೆಯಲ್ಲಿ ಅವರ ವ್ಯಕ್ತಿತ್ವ ಅದ್ವಿತೀಯವಾಗಿ ಕಂಡುಬರುತ್ತಿದೆ. ವಿಶೇಷವಾಗಿ ಸೃಷ್ಟಿಕರ್ತನ (ದೇವನ) ಹಕ್ಕು ಪಾಲನೆಯ ದೃಷ್ಟಿಯಿಂದ ನೋಡಿದರೆ, ಪವಿತ್ರ ಖುರ್‌ಆನ್ ಈ ನಿಟ್ಟಿನಲ್ಲಿ ಅವರ ಶುಭ ಚರಿತ್ರೆಯ ನಕ್ಷೆ ತನ್ನ ಭಾಷೆಯಲ್ಲಿ ಎಷ್ಟು ಸುಂದರವಾಗಿ ಎಳೆದಿದೆ. **ಇನ್ನ ಸಲಾತಿ ವ ನುಸೂಕಿ ವ ಮಹ್‌ಯಾಯ ವ ಮಮಾತಿ ಲಿಲ್ಲಾಹಿ ರಬ್ಬಿಲ್ ಆಲಮೀನ** (ಅಲ್‌ಅನ್‌ಆಮ್-163) ಅನುವಾದ: ಹೇಳು. ನನ್ನ ನಮಾಝ್, ನನ್ನ ತ್ಯಾಗ, ನನ್ನ ಜೀವನ, ನನ್ನ ಮರಣ ಎಲ್ಲವೂ ಸರ್ವಲೋಕ ಪರಿಪಾಲಕನಾದ ಅಲ್ಲಾಹನಿಗಾಗಿವೆ.

ಇನ್ನೊಂದು ಸ್ಥಳದಲ್ಲಿ ಹೇಳಿದನು. **ಇನ್ನರಬ್ಬಕ ಯಅ್‌ಲಮು ಅನ್ನಕ ತಖೂಮು ಅದ್ನಾ ಮಿನ್ ಸುಲುಸಲ್ಲೈಲಿ ವ ನಿಸ್‌ಫಹೂ ವ ಸುಲುಸಹೂ** (ಅಲ್‌ಮುಝ್ಝಮ್ಮಿಲ್-21) ಅನುವಾದ: ನೀನು ಮತ್ತು ನಿನ್ನೊಂದಿಗಿರುವವರಲ್ಲಿ ಒಂದು ಗುಂಪು, ಜನರು ಎದ್ದು ರಾತ್ರಿಯ ಮೂರರಲ್ಲಿ ಎರಡಂಶವಾಗಲಿ ಅದರ ಅರ್ಧಂಶವಾಗಲಿ ಅದರ ಮೂರರಲ್ಲಿ ಒಂದಂಶವಾಗಲಿ ಪ್ರಾರ್ಥಿಸುತ್ತಿರುವಿರಿ ಎಂದು ಖಂಡಿತವಾಗಿಯೂ ನಿನ್ನ ಪ್ರಭುವಿಗೆ ಗೊತ್ತಿದೆ."

ಹಝ್ರತ್ ಮುಸ್ಲಿಹ್ ಮೌಊದ್(ರ) ತಫ್ಸೀರುಲ್ ಖುರ್‌ಆನ್ ಪೀಠಿಕೆಯಲ್ಲಿ ಬರೆಯುತ್ತಾರೆ. **"ರಸೂಲುಲಾಹ್ (ಸ)** ರವರ ಜೀವನವೆಲ್ಲ ದೇಶಪ್ರೇಮದಲ್ಲಿ ಮುಳುಗಿ ಹೋಗಿರುವುದನ್ನು ಕಾಣಬಹುದಾಗಿದೆ. ಜಮಾಅತಿನ ಬಹುದೊಡ್ಡ ಜವಾಬ್ದಾರಿಯ ಹೊರತಾಗಿಯೂ ಹಗಲಿರುಳು ಅವರು (ಸ) ಆರಾಧನೆಗಳಲ್ಲಿ ತಲ್ಲೀನರಾಗಿರುತ್ತಿದ್ದರು. ಅರ್ಧ ರಾತ್ರಿ ಕಳೆಯುತ್ತಲೆ ಅವರು (ಸ) ಅಲ್ಲಾಹನ ಆರಾಧನೆಗೋಸ್ಕರ ಎದ್ದು ನಿಲ್ಲುತ್ತಿದ್ದರು ಮತ್ತು ಬೆಳಿಗ್ಗೆಯವರೆಗೆ ಆರಾಧನೆ ಮಾಡುತ್ತಿದ್ದರು. ಕೆಲವೊಮ್ಮೆ ಅವರ (ಸ) ಕಾಲುಗಳು ಬಾತು ಹೋಗುತ್ತಿದ್ದವು. ನೋಡುವವರಿಗೆ ಅವರ ಮೇಲೆ ಕರುಣೆ ಉಕ್ಕಿ ಬರುತ್ತಿತ್ತು. ಹಝ್ರತ್ ಆಯಿಶಾ (ರ) ಹೇಳುತ್ತಾರೆ. ಇಂತಹ ಸಂದರ್ಭದಲ್ಲೇ ಒಮ್ಮೆ ಹೇಳೀದರು. ಓ ಪ್ರವಾದಿವರ್ಯರೆ ! ನೀವು ಮೊದಲೇ ಅಲ್ಲಾಹನ ಪ್ರೀತಿಗೆ ಪಾತ್ರರಾದವರಾಗಿದ್ದೀರಿ. ತಾವು ತಮ್ಮ ಆತ್ಮಕ್ಕೆ ಏಕಿಷ್ಟು ಕಷ್ಟ ಕೊಡುತ್ತಿದ್ದೀರಿ? ಅವರು (ಸ) ನುಡಿದರು. ಹೇ ಆಯಿಶಾ ! **ಅಫಲ ಅಕೂನ ಅಬ್ದನ್ ಶಕೂರ !** ನಾನು ಅಲ್ಲಾಹನ ಪ್ರೀತಿಗೆ ಪಾತ್ರನಾದ ವಿಷಯ ನಿಜವಾಗಿದೆ. ಅಲ್ಲಾಹನು ತನ್ನ ಅನುಗ್ರಹದಿಂದ, ತನ್ನ ಪ್ರೀತಿಯನ್ನು ದಯಪಾಲಿಸಿದ್ದಾನೆ, ಹೀಗಿರುವಾಗ ಅವನಿಗೆ ಕೃತಜ್ಞತೆ ಅರ್ಪಿಸುವುದು ನನ್ನ ಕರ್ತವ್ಯವಲ್ಲವೇ. ಏಕೆಂದರೆ ಉಪಕಾರದ ಪ್ರತಿಫಲ, ಕೃತಜ್ಞತೆಯೇ ಆಗಿರುತ್ತದೆ. (ಪೀಠಿಕೆ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-382)

**ದೈವಪ್ರೇಮ**

ಪ್ರವಾದಿ ಮುಹಮ್ಮದ್ (ಸ) ರವರ ಜೀವನದ ಪ್ರತಿ ಕ್ಷಣವು ದೇವಪ್ರೇಮದಿಂದ ತುಂಬಿರುವುದನ್ನು ಕಾಣಬಹುದಾಗಿದೆ. ಅವರ ಈ ಪ್ರೇಮವನ್ನು ಸ್ವೀಕರಿಸಿ ಅಲ್ಲಾಹನು ಅವರ ಈ ಅನುಸರಣೆ ಮಾಡುವವರಿಗೂ ಅಲ್ಲಾಹನ ಪ್ರೀತಿಗೆ ಅರ್ಹತೆ ದಯಪಾಲಿಸುವ ವಾಗ್ದಾನ ನೀಡಿದನು.

ಉದಾಹರಣೆಗೆ ಹೇಳಿದನು. **ಖುಲ್ ಇನ್‌ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನಿ ಯುಹ್‌ಬಿಬ್ ಕುಮುಲ್ಲಾಹ್** (ಆಲಿ ಇಮ್ರಾನ್-32) ಅನುವಾದ : ಹೇಳು: ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ.

ರಸೂಲುಲ್ಲಾಹ್(ಸ) ರ ಮಾರ್ಗದಲ್ಲಿ ವಿಧೇಯರಾಗಿ ನಡೆದವರಿಗೆ ಪವಿತ್ರ ಖುರ್‌ಆನ್‌ನಲ್ಲಿ ಪ್ರವಾದಿಗಳು ಸಿದ್ದೀಖ್‌ಗಳು, ಶಹೀದರು ಮತ್ತು ಸಜ್ಜನರು ಆಗುವ ಸುವಾರ್ತೆಯನ್ನು ನೀಡಲಾಗಿದೆ. ಮತ್ತು ಕೆಲವರಿಗೆ ಬನೀ ಇಸ್ರೇಲ್‌ನ ಪ್ರವಾದಿಗಳ ಹೆಸರನ್ನು ನೀಡಲಾಗಿದೆ. ಕೆಲವರಿಗೆ ಹದೀಸುಗಳಲ್ಲಿ ರಸೂಲುಲ್ಲಾಹ್ (ಸ) ಬನೀ ಇಸ್ರೇಲ್ ಪ್ರವಾದಿಗಳಿಗೆ ಸಮ ಮತ್ತು ಮುಜದ್ದಿದ್ (ಸುಧಾರಕರು) ಮತ್ತು ಮಸೀಹ್‌ವ ಮಹದಿಯ ಹೆಸರನ್ನು ನೀಡಲಾಗಿದೆ. ಆದ್ದರಿಂದ ಪ್ರವಾದಿಯ ವಿಧೇಯತೆಯ ಮಾರ್ಗವನ್ನು ಅನುಸರಿಸಿ, ಉಮ್ಮಾದ ಪ್ರವಾದಿ (ಶಿಷ್ಯ ಪ್ರವಾದಿ) ಗುಲಾಮ ಮತ್ತು ಸತ್ಯಪ್ರೇಮಿಯರಾದ ವಾಗ್ದತ್ತ ಮಸೀಹ್ (ಅ) ಇಂದು ದೇವಪ್ರೇಮದ ದೀಪವನ್ನು ಮತ್ತೊಮ್ಮೆ ಬೆಳಗಿಸಿದದ್ದಾರೆ. ಅಲ್ಲಾಹನ ಪ್ರೀತಿಯ ಈ ನಡೆಯನ್ನು ಹೀಗೆ ಸಾರ್ವಜನಿಕಗೊಳಿಸಬೇಕಾಗಿದೆ. ಅವರು(ಅ) ಹೇಳಿದರು:

"ಜೀವವನ್ನು ಬಲಿಯರ್ಪಿಸುವ ಮೂಲಕ ದೊರಕುವ ನಿಧಿಯಾಗಿರುವುದಾದರೂ ಅದು ಪಡೆಯಲು ಅರ್ಹವಾಗಿದೆ. ಎಲ್ಲವನ್ನೂ ತೆತ್ತು ಖರೀದಿಸಲು ಯೋಗ್ಯವಾದ ರತ್ನ ಇದಾಗಿದೆ."

(ಕಿಶ್ತ ನೂಹ್, ರೂಹನಿ ಖಝಾಇನ್, ಸಂಪುಟ-19, ಪುಟ-21)

**ಅಲ್ಲಾಹನೆಡೆ ಕರೆ ನೀಡುವ ನೆಲೆಯಲ್ಲಿ**

ಅಲ್ಲಾಹನೆಡೆಗೆ ಕರೆ ನೀಡುವುದು ಮತ್ತು ಏಕದೇವತ್ವ ಸ್ಥಾಪನೆಯು ಪ್ರವಾದಿಗಳ ಪ್ರಮುಖ ಜವಾಬ್ದಾರಿಗಳಲ್ಲಿ ಒಂದಾಗಿದೆ. ಜಗತ್ತಿನಲ್ಲಿ ಆಗಮಿಸಿದ ಎಲ್ಲ ಪ್ರವಾದಿಗಳು ಮನುಷ್ಯರೆಲ್ಲರನ್ನು ಅಲ್ಲಾಹನೆಡೆಗೆ ಕರೆ ನೀಡಿದ್ದಾರೆ ಮತ್ತು ಅವನ ಆರಾಧನೆ ಮೊದಲೆಂದೇ ಹಾಗೂ ಅವನ ಎಲ್ಲ ಗುಣಲಕ್ಷಣಗಳ ಮೇಲೆ ವಿಶ್ವಾಸ ತರುವಂತೆ ಆಹ್ವಾನಿಸಿದ್ದಾರೆ. ಓದುಗರೇ ! ನಮ್ಮ ನಾಯಕರು, ಸರದಾರರು ಸಯ್ಯದನಾ ಹಝ್ರತ್ ರಸೂಲುಲ್ಲಾಹ್(ಸ) ಎಷ್ಟೊಂದು ಉತ್ತಮ ರೀತಿಯಲ್ಲಿ ಅಲ್ಲಾಹನೆಡೆಗೆ ಕರೆ ನೀಡುವ ಜವಾಬ್ದಾರಿ ನಿರ್ವಹಿಸಿದ್ದಾರೆಂದರೆ ಅದು ಅದ್ವಿತೀಯ ಹಾಗೂ ಅವರ್ಣಿಯವಾಗಿತ್ತು. ಅವರ (ಸ) ಆಗಮಕ್ಕಿಂತ ಮುಂಚೆ ಲೋಕದ ಸ್ಥಿತಿ ಹೇಗಿತ್ತೆಂದರೆ, ಅದ ಪವಿತ್ರ ಖುರ್‌ಆನ್‌ನ ಪ್ರಕಾರ **"ಝಹರಲ್ ಫಸಾದ ಫಿಲ್ ಬರ್ರಿ ವಲ್ ಬಹರಿ"** ಮಾದರಿಯಾಗಿತ್ತು. ಜನರಲ್ಲಿ ಅಸಂಖ್ಯಾತ ದುಷ್ಕರ್ಮಿಗಳಿದ್ದರೂ. ಎಲ್ಲರಿಗಿಂತ ಘೋರ ಪಾಪ ಅದು. ನೂರಾರು ಮಿಥ್ಯಾ ದೇವರುಗಳ ಆರಾಧಿಸುವುದಾಗಿತ್ತು. ಇಂತಹ ಪರಿಸ್ಥಿತಿಯನ್ನು ಕಂಡು ಪವಿತ್ರ ಖುರ್‌ಆನ್‌ನ ಪ್ರಕಾರ **"ವವಜದಕ ಝಾಲನ್ ಫಹದಾ"** ಹೃದಯವು ವ್ಯಥೆಪಟ್ಟಿತು ಮತ್ತು ದೇವರು ಅವರನ್ನುಸುಧಾರಕರನ್ನಾಗಿ ಮಾಡಿದನು.

ಓದುಗರೇ ! ಹಝ್ರತ್ ಮುಹಮ್ಮದ್ ಮುಸ್ತಫಾ (ಸ) ರವರು ಸತ್ಯಥದಲ್ಲಿ ಕರೆಯುವ ನಿಟ್ಟಿಯಲ್ಲಿ ಪಡೆದ ಕಷ್ಟಕಾರ್ಪಣ್ಯಗಳು ಯಾರಿಂದಲೂ ಮರೆಯಾಗಿಲ್ಲ. ಹಝ್ರತ್ ರಸೂಲುಲ್ಲಾಹ್(ಸ) ಅಲ್ಲಾಹನ ನಿರ್ದೇಶನದಂತೆ ಹೇಗೆ ತಮ್ಮ ಪ್ರಚಾರ ಕಾರ್ಯ ಚುರುಕುಗೊಳಿಸುತ್ತಿದ್ದರು. ಅಂತೆಯೇ ವಿರೋಧದ ಜ್ವಾಲೆ ಉಲ್ಬಣಿಸುತ್ತಿತ್ತು. ಅದರ ಪರಿಣಾಮವಾಗಿ ಅವರು (ಸ) ಮತ್ತು ಅವರ (ಸ) ಎಲ್ಲಾ ಕುಟುಂಬಸ್ಥರಿಗೆ ಶುಅಬ್ ಅಬಿತಾಂಬ್‌ನಲ್ಲಿ ಬಂಧಿಯಾಗಿರಬೇಕಾಯಿತು. ಒಂದು ದೀರ್ಘ ಅವಧಿಯ ನಂತರ 10 ನಬ್ವಿಯಲ್ಲಿ ಬಂಧನದ ಕರುಣಾಜನಕ ಅವಧಿ ಮುಗಿಯುತ್ತಿದ್ದಂತೆ, ಅವರು (ಸ) ಮಕ್ಕದ ಹೊರಗೆ ಪ್ರಚಾರಕ್ಕಾಗಿ ತಾಯಿಫ್‌ಗೆ ಪ್ರಯಾಣ ಬೆಳೆಸಿದರು. ತಾಯಿಫ್‌ನಲ್ಲಿ ಪ್ರವಾದಿ (ಸ) ಅವರೊಡನೆ ಆದ ನಾಚಿಕೆಗೇಡಿನ ವರ್ತನೆ ಯಾವ ಮುಸಲ್ಮಾನ ತಿಳಿದಿಲ್ಲ. ಆದರೆ ಈ ವರ್ತನೆಯೂ ಸಹ ಅವರ (ಸ) ಧೈರ್ಯ ಕುಂದಿಸಲಾಗಿಲ್ಲ. ಒಟ್ಟಿನಲ್ಲಿ ಮಕ್ಕದ ಇಸ್ಲಾಂ ಧರ್ಮವನ್ನು ಅಥವಾ ಪ್ರವಾದಿ (ಸ) ಅವರ ವ್ಯಕ್ತಿತ್ವಕ್ಕೆ ಧಕ್ಕೆ ತರಬೇಕೆಂದು. ಆದರೆ ದೈವಿಕ ವಿಧಿಯು ಎಲ್ಲಾ ಪ್ರಯತ್ನಗಳನ್ನು ವಿಫಲಗೊಳಿಸಿತು. ಅಂತೆಯೇ ಇಸ್ಲಾಮಿ ಪ್ರವಾಹಕ್ಕೆ ಕಡಿವಾಣ ಹಾಕಲು ಶಕ್ತಿ ಮೀರಿ ಪ್ರಯತ್ನ ಮಾಡುತ್ತಿದ್ದರು. ಅವರು ಯಪ್ರಬಿನತ್ತ ಮುಖ ಮಾಡಿದರು. ಹೀಗೆ ಇಸ್ಲಾಮಿನ ಹೊಸ ಅಧ್ಯಾಯ ಬರೆದಂತಾಯಿತು. ಪ್ರಚಾರಕ ಶ್ರೇಷ್ಠರು (ಸ) 13 ವರ್ಷಗಳು ಮಕ್ಕದಲ್ಲಿ ಮೈ ಮರೆತು ಸತ್ಯಸಂದೇಶವನ್ನು ತಲುಪಿಸಲು ಹೋರಾಡಿದರು. ಯಸ್ರಬ್‌ನಲ್ಲಿ ಅವರು ಶಾಂತಿ ನೆಮ್ಮದಿಯಿಂದ ಧರ್ಮ ಪ್ರಚಾರ ಮಾಡಲೆಂದು ಹೊರಟರೆ ಶತ್ರುಗಳಿಗೆ ಅದು ಹಿಡಿಸದಂತಾಯಿತು. ಮದೀನಾ ಹಿಜರತ್ ನಿಂದ ಹಿಡಿದು ಸುಲಹ ಹುದೇಬಿಯಾವರೆಗೆ ಲೋಕದೊಂದ ನಿರ್ನಾಮ ಮಾಡಲು ಎಲ್ಲಾ ರೀತಿಯ ಪ್ರಯತ್ನ ಮಾಡಿದರು. ಆದರೆ ಅವರೇ ಬೆಂಕಿಯನ್ನಾಗಿ ಮಾಡಿದ ರಣರಂಗವನ್ನು ಅಲ್ಲಾಹನು ಏಕದೇವತ್ವ ಮತ್ತು ಏಕದೇವಪ್ರಿಯರಿಗೆ ವೈಭವದ ಕುರುಹನ್ನಾಗಿ ಮಾಡಿದನು. ಆದರೆ ಇದೆಲ್ಲ ಹೊರತಾಗಿಯೂ ಅವರ (ಸ) ಪವಿತ್ರ ಹೃದಯಾಂತರವು ಪವಿತ್ರ ಖುರ್‌ಆನ್‌ನ ಪ್ರಕಾರ **ಲಅಲ್ಲಕ ಬಾಖಿಉನ್ನಫ್ಸಕ ಅಲ್ಲಾ ಯಕೂನೂ ಮುಮಿನೀನ್** (ಅಶುರಅ-4) ಪ್ರಾಶ ಅವರು ನಂಬುವುದಿಲ್ಲವೆಂಬ

ಕಾರಣದಿಂದ ಕಲರವಗೊಂಡು ನೀನು ನಿನ್ನ ಜೀವವನ್ನು ಹಾನಿಗೊಳಿಸುವೆ.

**ಪವಿತ್ರ ಖುರ್‌ಆನ್‌ನೊಂದಿಗೆ ಪ್ರೀತಿ**

ಪವಿತ್ರ ಖುರ್‌ಆನ್ ಪ್ರವಾದಿ(ಸ) ರವರ ಕುರಿತು ಹೇಳುತ್ತದೆ: **ರಸೂಲುಮ್ಮಿನಲ್ಲಾಹಿ ಯತ್ಲೂ ಸುಹುಫಮ್ಮುತಹ್ಹರ** (ಅಲ್‌ಬಯ್ಯಿನ-03) ಎಂದರೆ ಅಲ್ಲಾಹನ ಓರ್ವ ಸಂದೇಶವಾಹಕ, ಆತನು ಪವಿತ್ರವಾದ ಹಾಳೆಗಳನ್ನು ಪಠಿಸುತ್ತಾನೆ.

ಅವರ (ಸ) ಪಠಿಸುವ ಮಹಿಮೆ ಕುರಿತು ಪವಿತ್ರ ಖುರ್‌ಆನ್ ಹೀಗೆ ಸಾಕ್ಷಿ ನೀಡುತ್ತದೆ. **"ಅಲ್ಲಝೀನ ಆತೈನಾಹುಮುಲ್ ಕಿತಾಬ ಯತ್‌ಲೂನಹು ಹಕ್ಕ ತಿಲಾವತಿಹೀ"** (ಅಲ್‌ಬಖರ-122) ನಾವು ಯಾರಿಗೆ ಗ್ರಂಥ ನೀಡಿದ್ದೇವೋ ಅವರು ಅದನ್ನು ಹೇಗೆ ಓದಬೇಕಾಗಿದೆಯೋ ಹಾಗೆಯೇ ಓದುತ್ತಾರೆ. ಹೇಗೆ ಅನುಸರಿಸಬೇಕಿಗಿದೆಯೋ ಹಾಗೆಯೇ ಅನುಸರಿಸುತ್ತಾರೆ.

ಅವರು(ಸ) ದೇವಾಜ್ಞೆಯಂತೆ ಮಧುರ ಸ್ವರದಲ್ಲ ಮತ್ತು ತರ್ಕಬದ್ಧವಾಗಿ ಖುರ್‌ಆನ್ ಪಠಣದ ಹಕ್ಕಿರುವಂತೆ ಪಠಣ ಮಾಡುತ್ತಿದ್ದರು. ಹಝ್‌ರತ್ ಅನಸ್ ಅವರಿಮದ ಕೇಳಲಾಯಿತು. ಪ್ರವಾದಿ (ಸ) ಅವರು ಹೇಗೆ ಪಠಣ ಮಾಡುತ್ತಿದ್ದರು? ಅವರು (ಸ) ಹೇಳಿದರು. ಅವರ ಪಠಣ ದೀರ್ಘವಾಗಿರುತ್ತಿತ್ತು. ಮತ್ತು ಅವರು ಬಿಸ್ಮಿಲ್ಲಾಹ್ ಪಠಿಸಿದರು. ಅದನ್ನು ದೀರ್ಘಕ್ಕೆ ಎಳೆದರು ಮತ್ತು ಅರ್‌ರಹ್ಮಾನ್‌ನ್ನು ದೀರ್ಘ ಎಳೆದು ಪಠಿಸಿದರು. ಮತ್ತು ಅರ್‌ಹೀಮ್ ಅನ್ನ.

ಹಝ್‌ರತ್ ಅಬುಹುರೈಕ (ರ) ವರದಿ ಮಾಡುತ್ತಾರೆ. ಪ್ರವಾದಿ (ಸ) ಹೇಳಿದರು. ಅಲ್ಲಾಹನು ಪ್ರವಾದಿ (ಸ) ರವರ ಪಠಣ ಕಿವಿಗೊಬ್ಬ ಕೇಳುವಷ್ಟು ಯಾರ ಪಠಣವು ಕೇಳುತ್ತಿರಲಿಲ್ಲ. ಅವರು (ಸ) ಆಗಾಗ ದಿನವಿಡೀ ಪಠಣ ಮಾಡಿಯೇ ಮಾಡುತ್ತಿದ್ದರು. ವಿಶೇಷವಾಗಿ ಹೊಸದಾಗಿ ಅವತರಿಸಿದ ವಚನಗಳನ್ನು ನವಾಝ್‌ಗಳಲ್ಲಿ ಪಠಿಸುತ್ತಿದ್ದರು. ಸಾಮಾನ್ಯವಾಗಿ ರಾತ್ರಿವೇಳೆಯು ಅವರ (ಸ) ನಾಲಿಗೆಯ ಮೇಲೆ ಖುರ್‌ಆನ್ ಪಠಣವೇ ಇರುತ್ತಿತ್ತು. ಹಝ್‌ರತ್ ಆಯಿಶಾ (ರ) ಹೇಳುತ್ತಾರೆ. ರಾತ್ರಿವೇಳೆ ಏನಾದರೂ ಎಚ್ಚರವಾದರೆ ನಾಲಿಗೆಯ ಮೇಲೆ ಅಲ್ಲಾಹನ ಪ್ರತಾಪಭರಿತ ಈ ವಚನಗಳನ್ನು ಪಠಿಸುತ್ತಿದ್ದರು. **ವಮಾ ಮಿನ್ ಇಲಾಹಿನ್ ಇಲ್ಲಲ್ಲಾಹಿಲ್ ವಾಹಿದುಲ್ ಖಹ್ಹಾರು-ರಬ್ಬುಸ್ಸಮಾವಾತಿ ವಲ್ ಅರ್ಝಿ ವಮಾ ಬೈನಹುಮಾಲ್ ಅಝೀಝುಲ್ ಗ್ಘಫ್ಫಾರ್** (ಸ್ವಾದ್: 66-67) ಅಲ್ಲಾಹನ ಹೊರತು ಯಾರು ಆರಾಧನೆಗೆ ಅರ್ಹರಲ್ಲ. ಅಲ್ಲಾಹನು ಏಕನು ಪರಮಾಧಿಕಾರಿಯೂ ಆಗಿದ್ದಾನೆ. ಅವನು ಆಕಾಶಗಳ ಭೂಮಿಯ ಮತ್ತು ಅವುಗಳ ಮಧ್ಯೆ ಇರುವ ಎಲ್ಲವುಗಳ ಪ್ರಭು. ಅವನು ಪ್ರತಾಪಶಾಲಿಯೂ ಕ್ಷಮಾಶೀಲನೂ ಆಗಿದ್ದಾನೆ.

**ಒಡಂಬಡಿಕೆಗಳ ಬಾಧ್ಯತೆ**

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ. **ಯಾ ಅಯ್ಯುಲ್ಲಝೀನ ಆಮನೂ ಅವ್‌ಫೂ ಬಿಲ್‌ಉಖೂದಿ** (ಅಲ್‌ಮಾಯಿದ-2) ಅನುವಾದ : ಎಲ್ಲೈ ವಿಶ್ವಾಸಿಗಳೇ, ನೀವು ಕರಾರುಗಳನ್ನು ಪಾಲಿಸಿರಿ. ಮತ್ತು ನುಡಿದನು. ವ ಅವ್‌ಫ್ ಬಿಲ್ ಅಹದಿ . . (ಬನೀ ಇಸ್ರೇಲ್-35) ಅನುವಾದ: ನೀವು ಕರಾರನ್ನು ಪಾಲಿಸಿರಿ. ಏಕೆಂದರೆ, ಕರಾರುಗಳ ಬಗ್ಗೆ ಪ್ರಶ್ನಿಸಲಾಗುವುದು.

ಬನ್ನಿ ನಾವು ದೃಷ್ಟಾಂತಗಳ ನೆಲೆಯಲ್ಲಿ ನೋಡೋಣ. ನಮ್ಮ ಪ್ರೀತಿಯ ಪ್ರವಾದಿ ನೇತಾರರು ಮುಹಮ್ಮದ್ (ಸ) ಕರಾರು, ಒಡಂಬಡಿಕೆ ಅಧ್ಯಾಯದಲ್ಲಿ ಯಾವ ಅದ್ವಿತೀಯ ಮಾದರಿಗಳನ್ನು ಪ್ರಸ್ತುತಪಡಿಸಿದ್ದಾರೆ.

ಹಝ್‌ರತ್ ರಸೂಲುಲ್ಲಾಹ್(ಸ) ಅವರ ಜೀವನದಲ್ಲಿ, ಒಡಂಬಡಿಕೆಗಳ ಅನುಸರಣೆಯ ಸುಂದರ ಚಿತ್ರವು ಸಮಯ ಮತ್ತು ಸ್ಥಳದ ಬಂಧನಕ್ಕಿಂತ ಮೀರಿದ್ದಾಗಿದೆ. ಅವರ (ಸ) ಜೀವನವು ನಮ್ಮ ಮುಂದೆ ತೆರೆದ ಪುಸ್ತಕದಂತಿದೆ. ಅದರ ಒಂದೊಂದು ಪುಟವು ನೈತಿಕತೆಯ ಹೊಳಪಿನಿಂದ ಹೊಳೆಯುತ್ತಿರುವಂತೆ ತೋರುತ್ತದೆ. ಒಡಂಬಡಿಕೆಯ ನಿಟ್ಟಿನಲ್ಲಿ ಅದರ ಆಕರ್ಷಕ ಮುಖ್ಯಾಂಶಗಳು ನಮಗೆ ಈ ಕಾಲಘಟ್ಟದಲ್ಲೂ ಕಂಡುಬರುತ್ತವೆ. ಅವರು (ಸ) ಯೌವ್ವನಾವಸ್ಥೆಯಲ್ಲಿ ಕಾಲಿಟ್ಟಾಗ ಅವರನ್ನು (ಸ) ಅಮೀನ್ ಮತ್ತು ಸಾದಿಖ್ (ಪ್ರಾಮಾಣಿಕರು ಮತ್ತು ಸತ್ಯವಂತರು) ಎಂದು ಕರೆಯಲ್ಪಟ್ಟರು. ಈ ಎರಡೂ ಬಿರದುಗಳ ಸಂಬಂಧ ಒಡಂಬಡಿಕೆ, ಕರಾರಿನ ಪಾಲನೆಯಿಂದ ಆಳವಾದ ಸಂಬಂಧ ಹೊಂದಿರುತ್ತದೆ. ಯಾರ ಜೀವನದಲ್ಲಿ ಯಾವ ಸುಳ್ಳಿನ ಅಂಶವೇ ಇರುವುದಿಲ್ಲ. ಅವರನ್ನು ಸಾದಿಖ್ ಎಂದು ಕರೆಯಲಾಗುತ್ತದೆ. ಯಾರ ಒಂದೊಂದು ಮಾತು ಸಹ ತಮ್ಮೊಳಗೆ ಪ್ರಾಮಾಣಿಕತೆ ಹೊಂದಿರುತ್ತದೆ. ಅವರನ್ನು **"ಅಮೀನ್"** ಎಂದು ಕರೆಯಲಾಗುತ್ತದೆ. ಈ ಎರಡೂ ಗುಣಗಳ ಸಂಬಂಧ ಒಡಂಬಡಿಕೆ ಮತ್ತು ಅನುಸರಣೆಯೊಂದಿಗೆ ಇರುತ್ತದೆ. ಆದ್ದರಿಂದ ಪ್ರವಾದಿತ್ವದ ಪ್ರತಿಪಾದನೆಗಿಂತ ಬಹಳ ಹಿಂದೆಯೇ ಮಕ್ಕಾದ ಜನರು ಈ ಮಾತುಗಳೊಂದಿಗೆ ನೆನಪಿಸಿಕೊಳ್ಳುವುದು ಸಾಬೀತುಪಡಿಸುತ್ತದೆ. ಅಲ್ಲಾಹನು ಒಡಂಬಡಿಕೆಯ ಗುಣಮಟ್ಟವು ಅವರ ಅಸ್ತಿತ್ವದ ಒಂದು ಭಾಗವಾಗಿ ಅವರ ಆತ್ಮದಲ್ಲಿ ಸೇರಿಸಿಬಿಟ್ಟಿದ್ದನು. ಅದರ ಸುಂದರ ದೃಶ್ಯಗಳು ಇಡೀ ಜೀವನದಲ್ಲಿ ಎಲ್ಲೆಡೆ ಕಂಡುಬರುತ್ತವೆ.

ಅವರ (ಸ) ಯೌವ್ವನ ಕಾಲದ ಒಂದು ಘಟನೆಯಿದೆ. ಮಕಾದ ಕೆಲವು ಸದ್ಗುಣವಂತ ಯುವಕರು ಒಂದು ಸಂಘವನ್ನು ಕಟ್ಟಿದರು. ಅದರಲ್ಲಿ ಭಾಗವಹಿಸುವವರೆಲ್ಲರೂ ದಬ್ಬಾಳಿಕೆಯನ್ನು ಯಾವಾಗಲೂ ನಿಲ್ಲಿಸುತ್ತೇವೆ ಮತ್ತು ದಯಾನಿತರಿಗೆ ಸಹಾಯ ಮಾಡುತ್ತೇವೆ ಎಂದು ಭರವಸೆ ನೀಡಿದರು. ಈ ಮಾತಿನ ಸುದ್ದಿ ಅಮೀನ್ ಮತ್ತು ಸಾದಿಖ್ ಗುಣಧಾರಿ ಯುವಕ ಮುಹಮ್ಮದ್ ಅರಬಿ (ಸ) ರವರಿಗೆ ತಲುಪಿಸಿದಾಗ ಅವರು (ಸ) ಬಹಳ ಉತ್ಸಾಹದಿಂದ ಆ ಸಭೆಗೆ ಸೇರಿದರು. ಈ ಒಪ್ಪಂದದಲ್ಲಿ ಭಾಗಿಯಾದವರಲ್ಲಿ ದೇವರೇ ಬಲ್ಲ. ಈ ಒಪ್ಪಂದವನ್ನು ಈಡೇರಿಸುವ ಭಾಗ್ಯ ದೊರೆತಿದೆಯೋ ಇಲ್ಲವೋ, ಆದರೆ ನಮ್ಮ ಸನ್ಮಾರ್ಗದರ್ಶಕರಾದ ಪ್ರವಾದಿ (ಸ) ರವರ ಇಡೀ ಜೀವನ ಸತ್ಯವಂತಿಕೆಯಿಂದ ಕೂಡಿತ್ತು. ಅವರು ಯಾವಾಗಲೂ ಒಡಂಬಡಿಕೆ ಕರಾರುಗಳ ಪಾಲನೆಯಲ್ಲಿ ಸದೃಢರಾಗಿದ್ದರು. ಅಲ್ಲಾಹನು ಅವರಿಗೆ (ಸ) ಈ ಕರಾರು ಸಹ ಪಾಲಿಸುವ ಭಾಗ್ಯ ದಯಪಾಲಿಸಿದನು. ಅವರು (ಸ) ಯೌವ್ವನಾವಸ್ಥೆಯಲ್ಲೂ ಕರಾರುಗಳಿಗೆ ಬದ್ಧರಾಗಿದ್ದರು. ಅಲ್ಲದೇ ಉಳಿದ ಎಲ್ಲರಿಗಿಂತಲೂ ಹೆಚ್ಚು ಬದ್ಧರಾಗಿದ್ದರು. ಕರಾರಿನ ಈ ಪವಿತ್ರ ಗುಣ ಜೀವನವಿಡಿ ನೆನಪಿಟ್ಟರು ಮತ್ತು ಯಾವಾಗಲೆಲ್ಲ ಇಂತಹ ಸಂದರ್ಭ ದೊರೆಯಿತು. ಅವರು (ಸ) ಬಹಳ ಧೀರತೆಯಿಂದ ದಮನಿತರ ಪರವಾಗಿ ಎದ್ದು ನಿಂತರು.

**ಸಹನಶೀಲನತೆ ಮತ್ತು ಹರ್ಷಚಿತ್ತತೆ:**

ಅಲ್ಲಾಹನು ತನ್ನ ಸತ್ಯವಿಶ್ವಾಸಿಗಳಿಗೆ ಹೇಳುತ್ತಾನೆ. ಅಲ್ಲಾಹನ ಔದಾರ್ಯಗಳನ್ನು ಮತ್ತು ಅನುಗ್ರಹಗಳನ್ನು ನೆನೆದು ಯಾವಾಗಲೂ ಸಂತೋಷವಾಗಿರಬೇಕು. ಹೇಳಿದನು. **ಖುಲ್ ಬಿಫಝ್ಲಿಲ್ಲಾಹಿ ವ ಬಿರಹ್ಮತಿಹೀ ಫಬಿಝಾಲಿಕ ಫಲ್ ಯಫ್ರಹೂ**. (ಯೂನುಸ್-59) ಅನುವಾದ: ಹೇಳೂ: ಇದು ಅಲ್ಲಾಹನ ಅನುಗ್ರಹ ಮತ್ತು ಕರುಣೆಯಿಂದ ಮಾತ್ರ ಆಗಿದೆ. ಆದ್ದರಿಂದ ಅವರು ಅದರಲ್ಲಿ ಸಂತೋಷಪಡಲಿ.

ನಮ್ಮ ಪ್ರವಾದಿ (ಸ) ಹೇಳುತ್ತಿದ್ದರು. ಸತ್ಯವಿಶ್ವಾಸಿಯ ಪರಿಸ್ಥಿತಿಯ ವಿಚಿತ್ರವಾಗಿದೆ. ಅವನು ಯಾವುದೇ ತೊಂದರೆಯನ್ನು ಎದುರಿಸಿದಾಗ ತಾಳ್ಮೆಯನ್ನು ತೋರಿ ದೇವರಿಂದ ಪ್ರತಿಫಲವನ್ನು ಪಡೆಯುತ್ತಾನೆ ಮತ್ತು ಅವನು ಬಹುಮಾನವನ್ನು ಪಡೆದಾಗ, ಅವನು ಧನ್ಯವಾದಗಳನ್ನು ಅರ್ಪಿಸುತ್ತಾನೆ. ಮತ್ತು ಅದರ ಪ್ರತಿಫಲವನ್ನೂ ಪಡೆಯುತ್ತಾನೆ ಎಂದರೆ ನಂಬಿಕೆಯುಳ್ಳವನು ಪ್ರತಿ ಸಂದರ್ಭದಲ್ಲೂ ಸಂತೋಷದಿಂದ ಮತ್ತು ತೃಪ್ತನಾಗಿರುತ್ತಾನೆ. ಆದ್ದರಿಂದ ನಿಜವಾದ ಸಂತೋಷ ಮತ್ತು ಉತ್ತಮ ಮನಃಸ್ಥಿತಿ ದೇಹ ಮತ್ತು ಮನಸ್ಸಿಗೆ ಮಾತ್ರ ಆರೋಗ್ಯಕರ ಲಕ್ಷಣವಲ್ಲ, ಬದಲು ಉತ್ತಮ ನಂಬಿಕೆಯ ಸಂಕೇತವು ಆಗಿದೆ. ಸತ್ಯವೇನೆಂದರೆ ಸಂತೋಷವಾಗಿರುವುದು ಒಬ್ಬ ವ್ಯಕ್ತಿಗೆ ಮಾತ್ರವಲ್ಲ, ಇಡೀ ಪರಿಸರಕ್ಕೆ ಆರೋಗ್ಯಕರ ಹೆಜ್ಜೆಯಾಗಿದೆ. ಮಾನಸಿಕ ವಿಶ್ಲೇಷಣೆಯ ಪ್ರಕಾರ ಒಬ್ಬ ಮುಗುಳುನಗೆಯು ತಾನು ಭೇಟಿಯಾಗುವ ಜನರಲ್ಲಿ ಸಂತೋಷದ ಅಲೆಯನ್ನು ಹರಡುತ್ತಾನೆ ಮತ್ತು ಇಡೀ ಸಮಾಜದಲ್ಲಿ ನಗುವನ್ನು ಹರಡುವ ಮೂಲಕ ಶಾಂತಿದೂತನಾಗಿ ಪರಿಣಮಿಸುತ್ತಾನೆ. ಇದು ಆರೋಗ್ಯಕರ ಸಮಾಜದ ಸಂಕೇತ.

ಆತ್ಮತೃಪ್ತಿ ಮತ್ತು ದೇವತೃಪ್ತಿ ಪಡೆದವರಲ್ಲಿ ನಮ್ಮ ಪ್ರವಾದಿ (ಸ) ಗಿಂತ ಉತ್ತಮರು ಯಾರು? ಅವರು (ಸ) ಅತ್ಯಂತ ಹರ್ಷಚಿತ್ತತೆ

ಹೊಂದಿದವರಾಗಿದ್ದರು. ಯಾವಾಗಲೂ ಮುಗುಳುನಗುವುದು ಅವರ (ಸ) ಅಭ್ಯಾಸವಾಗಿತ್ತು. ಅವರು (ಸ) ತಮ್ಮ ಶಿಷ್ಯಂದರಿಗೂ ಕೀಳಾಗಿ ನೋಡದಿರಲು ಸಲಹೆ ನೀಡುತ್ತಿದ್ದರು. (ಮುಸ್ಲಿಂ, ಕಿತಾಬುಲ್ ಅದಬ್, ಅಧ್ಯಾಯ–2)

**ಸೃಷ್ಟಿಗಳ ಹಕ್ಕುಗಳ ಈಡೇರಿಸುವಿಕೆ ಮತ್ತು ಸಮಾಜಸೇವೆ:**

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಸೃಷ್ಟಿಯ ಎಲ್ಲಾ ವರ್ಗಗಳಿಗೆ ಸೇವೆ ಸಲ್ಲಸಲು ಮತ್ತು ಅವರ ಅಗತ್ಯಗಳನ್ನು ಪೂರೈಸಲು ಹಾಗೂ ಅವರೊಡನೆ ಉತ್ತಮವಾಗಿ ವ್ಯವಹರಿಸುವ ಶಿಕ್ಷಣ ನೀಡುತ್ತಾ ಹೇಳುತ್ತಾನೆ. **ವಅ್‌ಬುದಲ್ಲಾಹ ವಲಾ ತುಶ್‌ರಿಕೂ ಬಿಹೀ ಶೈಅಂವ್ವಬಿಲ್ ವಾಲಿದೈನಿ ಇಹ್ಸಾನಂ ವ್ವಬಿಝಿಲ್ ಖುರ್ಬಾ ವಲ್ ಯತಾಮಾ ವಲ್ ಮಸಾಕೀನಿ ವಲ್‌ಜಾರಿಝಿಲ್ ಖುರ್ಬಾ ವಲ್ ಜಾರಿಲ್ ಜುನುಬಿ ವಸ್ಸಾಹಿಬಿ ಬಿಲ್ ಜಂಬಿ ವಬ್ನಿಸ್ಸಬೀಲಿ, ವಮಾ ಮಲಕತ್ ಐಮಾನುಕುಮ್, ಇನ್ನಲ್ಲಾಹ ಲಾ ಯುಹಿಬ್ಬು ಮನ್ ಕಾನ ಮುಖ್ತಾಲನ್ ಫಖೂರಾ** (ಅನ್ನಿಸಾಅ್–37) ಅನುವಾದ: ನೀವು ಅಲ್ಲಾಹವನ್ನು ಆರಾಧಿಸಿರಿ. ಬೇರೆನನ್ನೂ ಅವನ ಸಹಭಾಗಿಯನ್ನಾಗಿ ಮಾಡಬೇಡಿರಿ. ಮಾತಪಿತರಿಗೆ ನೀವು ಒಳಿತನ್ನು ಮಾಡಿರಿ. ನಿಕಟ ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ನಿಕಟ ಸಂಬಂಧಿಯಾದ ನೆರೆಹೊರೆಯವನಿಗೂ ಅನ್ಯ ನೆರೆಹೊರೆಯವನಿಗೂ ನಿಕಟ ಸಂಗಡಿಗನಿಗೂ ಯಾತ್ರಿಕನಿಗೂ ನಿಮ್ಮ ಅಧೀನದಲ್ಲಿರುವವರಿಗೂ, ಅಹಂಭಾವಿಗಳನ್ನು ಜಂಭಕೊಚ್ಚುವವರಿಗೂ ಅಲ್ಲಾಹನು ಎಂದಿಗೂ ಇಷ್ಟಪಡುವುದಿಲ್ಲ.

ಪವಿತ್ರ ಖುರ್‌ಆನ್‌ನ ಈ ಶಿಕ್ಷಣವನ್ನು ಪ್ರವಾದಿ (ಸ) ರವರು ಅಕ್ಷರಶಃ ಪಾಲಿಸಿ ತೋರಿಸಿದ್ದಾರೆ. ತಮ್ಮ ಅನುಯಾಯಿಗಳಿಗೂ ಅದೇ ಸಲಹೆಯನ್ನು ನೀಡಿದ್ದಾರೆ. ಹಝ್ರತ್ ಖುದೇಜ(ರ) ಅವರು ಪ್ರವಾದಿ(ಸ) ರವರ ಮೇಲೆ ಮೊದಲ ದೇವವಾಣಿ ಅವತರಿಸಿದಾಗ ಸಾಕ್ಷಿ ನೀಡಿದ್ದು ಇದೇ ನಿಕಟ ಸಂಬಂಧಿಯರೊಡನೆ ಉತ್ತಮ ವ್ಯವಹಾರ ಮತ್ತು ಸಮಾಜ ಸೇವೆಯ ಗುಣವೇ ಆಗಿತ್ತು. ಅವರು(ರ) ಪ್ರವಾದಿ (ಸ) ಅವರಿಗೆ ಸಮಾಧಾನ ನೀಡುತ್ತಾ ಅವರ ಸೇವೆಯಲ್ಲಿ ನಿವೇದಿಸಿದರು. ಅಲ್ಲಾಹನಾಣೆ! ಅಲ್ಲಾಹನು ಎಂದೂ ನಿಮ್ಮ ಕೈಬಿಡುವುದಿಲ್ಲ, ನೀವು(ಸ) ಸಮಾಜಮುಖಿಯಾಗಿದ್ದೀರಿ ಮತ್ತು ಸತ್ಯವಂತರಾಗಿದ್ದೀರಿ. ಜನರಿಗೆ ಸಹಾಯ ಮಾಡುವವರಾಗಿದ್ದೀರಿ. ಕಳೆದು ಹೋದ ರೀತಿಯನ್ನು ಮರುಸ್ಥಾಪಿಸುವವರಾಗಿದ್ದೀರಿ. ನೀವು (ಸ) ಅತಥಿ ಸತ್ಕಾರ ಮಾಡುವವರಾಗಿದ್ದೀರಿ ಮತ್ತು ಎಂತಹ ದುಘಟನೆಗಳಲ್ಲೂ ಸತ್ಯವನ್ನು ಬಿಡುವುದಿಲ್ಲ. (ಸಹೀಹ್ ಬುಖಾರಿ, ಕಿತಾಬ್ ಬದಅಲ್ ವಹೀ)

**ಸಹಚರರೊಂದಿಗೆ ಸ್ನೇಹ:**

ಸಹಚರರೊಡನೆ ಪ್ರವಾದಿ (ಸ) ರವರ ಪ್ರೀತಿ ಸ್ನೇಹವು ಚಿತ್ರ ವಿಚಿತ್ರ ರೀತಿಯಲ್ಲಿ ತೋರಿಸುತ್ತಿದ್ದರು. ದಯೆ ಮತ್ತು ಪ್ರೀತಿಯಿಂದ ವರ್ತಿಸುವುದು ಒಂದು ಬೇರೆ ವಿಷಯ. ತಮ್ಮ ಸ್ವಂತ ಅಗತ್ಯಗಳನ್ನು ನಿರ್ಲಕ್ಷಿಸಿ ತಮ್ಮ ಸಹಚರರ ಅಗತ್ಯಗಳಿಗೆ ಮತ್ತು ಸೌಕರ್ಯಗಳಿಗೆ ಆಧ್ಯತೆ ನೀಡುವುದು ಬೇರೆಯೇ ಮಾತಾಗಿದೆ. ಅಂತಹ ವಿಶ್ವಾಸವರ್ಧಕ ಸಂಗತಿ ಪ್ರವಾದಿ (ಸ) ರವರ ಚರಿತ್ರೆಯಲ್ಲಿ ಕಂಡುಬರುತ್ತದೆ. **"ವ ಯೂಸಿರೂನ ಅಲಾ ಅನ್‌ಫುಸಿಹಿಮ್ ವಲೌ ಕಾನ ಬಿಹಿಮ್ ಖಸಾಸತುನ್** (ಸೂರಃ ಅಲ್‌ಹಶರ್–10) ಅನುವಾದ: ಅವರು ತಮ್ಮ ಹೃದಯಗಳಲ್ಲಿ ಯಾವ ಆಶೆಯನ್ನು ಇಡುವುದಿಲ್ಲ. ಪ್ರವಾದಿ (ಸ) ರವರು ಈ ವಚನಕ್ಕೆ ಸಾಕ್ಷಾತ್‌ರೂಪವಾಗಿದ್ದರು.

ಒಂದು ಸಂದರ್ಭದಲ್ಲಿ ಅಲ್ಲಾಹನು ಹೀಗೆ ಸಾಕ್ಷಿಯನ್ನು ನಿಡಿದನು. **ಫಬಿಮಾ ರಹ್ಮತಿಮ್ಮಿನಲ್ಲಾಹಿ ಲಿನ್ತ ಲಹುಮ್, ವಲೌ ಕುಂತ ಫಝ್ಝನ್ ಗಲೀಝುಲ್ ಖಲ್ಬಿ ಲನ್‌ಫಝ್ಝೂ ಮಿನಲ್ ಹೌಲಿಕ** (ಆಲಿ ಇಮ್ರಾನ್–160) ಅನುವಾದ: ಅಲ್ಲಾಹನ ಮಹತ್ತಾದ ಕಾರುಣ್ಯದಿಂದಲೇ ನೀವು ಅವರೊಂದಿಗೆ ಸೌಮ್ಯವಾಗಿ ವರ್ತಿಸುತ್ತಿರುವೆ. ನೀನು ಕ್ರೂರ ಸ್ವಭಾವಿಯೂ, ಕಠಿಣ ಹೃದಯಿಯೂ ಆಗಿರುತ್ತಿದ್ದರೆ ಅವರು ನಿನ್ನ ಸುತ್ತಮುತ್ತಲಿನಿಂದ ಅಗಲಿಹೋಗುತ್ತಿದ್ದರು.

**ಕುಟುಂಬ ತರಬೇತಿಯ ಯೋಚನೆ:**

ಪವಿತ್ರ ಖುರ್‌ಆನ್ ನಲ್ಲಿ ಅಲ್ಲಾಹನು ಹೇಳಿದನು. **ಯಾ ಅಯ್ಯುಹಲ್ಲಝೀನ ಆಮನೂ ಖೂ ಅನ್‌ಫುಸಹುಮ್ ವ ಅಹ್ಲೀಕುಮ್ ನಾರವ್ವ ಖೂದುಹನ್ನಾಸು ವಲ್ ಹಿಜಾರ** (ಅತ್ತಹರೀಂ–7) ಅನುವಾದ: ಎಲೈ ವಿಶ್ವಾಸಿಗಳೇ, ನೀವು ನಿಮ್ಮನ್ನೂ ನಿಮ್ಮ ಕುಟುಂಬದವರನ್ನು ನರಕಾಗ್ನಿಯಿಂದ ರಕ್ಷಿಸಿರಿ. ಮನುಷ್ಯರೂ, ಕಲ್ಲುಗಳೂ, ಅದರ ಇಂಧನ.

ಈ ಹೊಣೆಗಾರಿಕೆಯನ್ನು ಅವರು (ಸ) ಅತ್ಯಂತ ಉತ್ತಮ ರೀತಿಯಲ್ಲಿ ಪಾಲಿಸಿದರು. ಹಝುರತ್ ಅನಸ್ ಬಿನ್ ಮಾಲಿಕ್ (ರ) ವರದಿ ಮಾಡುತ್ತಾರೆ. ಪ್ರವಾದಿ (ಸ) ಆರು ತಿಂಗಳವರೆಗೆ ಫಜರ್ ನಮಾಝ್‌ಗೋಸ್ಕರ ಹೋಗುವಾಗ ಹಝ್‌ರತ್ ಫಾತಿಮಾ (ರ) ಅವರ ಬಾಗಿಲ ಬಳಿಯಿಂದ–ಓ ಕುಟುಂಬದವರೇ ! ನಮಾಝ್ ಸಮಯವಾಗಿದೆ. ಏಳಿರಿ ಎಂದು ಹೇಳುತ್ತಲೇ ಮುನ್ನಡೆಯುತ್ತಿದ್ದರು. ಮತ್ತು ಈ ವಚನವನ್ನು ಪಠಿಸುತ್ತಿದ್ದರು. **ಇನ್ನಮಾ ಯುರೀದುಲ್ಲಾಹು ಲಿಯುಝ್‌ಹಬ ಅಂಕುಮುರ್‍ರಿಜ್ಸ ಅಹ್ಲಲ್ ಬೈತಿ ವ ಯುತಹ್ಹಿರುಕುಮ್ ತತ್‌ಹೀರಾ** (ಅಹಝಾಬ್–34) ಅನುವಾದ: ಎಲೈ ಪ್ರವಾದಿಯ ಮನೆಯವರೇ, ನಿಮ್ಮಿಂದ ಎಲ್ಲ ಮಾಲಿನ್ಯವನ್ನು ನೀಗಿಸಿ ನಿಮ್ಮನ್ನು ಪರಿಶುದ್ಧಗೊಳಿಸಲು ಅಲ್ಲಾಹನು ಬಯಸುತ್ತಾನೆ.

**ಅಲಾಹನ ಮೇಲೆ ಭರವಸೆ:**

ಅಲ್ಲಾಹನ ಮೇಲೆ ಪ್ರೀತಿ ವಾತ್ಸಲ್ಯದ ಅನೋನ್ಯವಾದ ಕಥೆಯನ್ನು ಮೊದಲೇ ಇತ್ತುಲ. ಆದರೆ ಅಲ್ಲಾಹನ ಮೇಲೆ ಭರವಸೆ ಪರಿಪೂರ್ಣ ಭರವಸೆಯ ಉನ್ನತವಾದ ಮೇಲ್ಮೈ ಸಹ ಹಝ್‌ರತ್ ರಸೂಲುಲ್ಲಾಹ್ (ಸ) ರವರೇ ಸ್ಥಾಪಿಸಿದ್ದಾರೆ. ಈ ನಿಮಿತ್ತ ಹಲವು ಉದಾಹರಣೆಗಳಿವೆ. ಆದರೆ ಅವುಗಳಲ್ಲಿ ಒಂದು ಘಟನೆ ಓದುಗರ ಮುಂದೆ ಪ್ರಸ್ತುತಪಡಿಸುವುದು ಉಚಿತ ಎಂದು ಭಾವಿಸುತ್ತೇನೆ. ಈ ಪೈಕಿ ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಹೇಳುತ್ತಾರೆ:

ಹಝ್‌ರತ್ ಅಬೂಬಕರ್(ರ) ವರದಿಯಂತೆ, ಅವರು (ರ) ಹಿಜರತ್ (ವಲಸೆ) ಹೋಗುತ್ತಿರುವಾಗ ಸರಾಖ ಎಂಬುವವನು ಅವರ ಬೆನ್ನತ್ತಿ ಬರುತ್ತಿದ್ದನು. ಒಮ್ಮೆಲೆ ಸಮೀಪಕ್ಕೆ ಬಂದಾಗ ನಾನು ಹೇಳದೆ, ಪ್ರವಾದಿ (ಸ) ರವರೇ, ಈಗಂತೂ ನಮಗೆ ಹಿಡಿಯಲಿಕ್ಕೆ ಬಂದವರು ತುಂಬ ಸಮೀಪಕ್ಕೆ ಬಂದು ಬಿಟ್ಟಿದ್ದಾರೆ. ಈ ಮಾತು ನಾನು ನನಗೋಸ್ಕರ ಹೇಳುತ್ತಿಲ್ಲ. ಬದಲು ನನಗೆ ನಿಮ್ಮ ಚಿಂತೆಯಿದೆ. ಆಗ ಪ್ರವಾದಿ (ಸ) ಅವರು ಹೇಳಿದರು. **"ಲಾ ತಹ್‌ಝುನ್ ಇನ್ನಲ್ಲಹ ಮಅನ"** ಎಂದರೆ ಅಲ್ಲಾಹನು ನಮ್ಮೊಂದಿಗಿದ್ದಾನೆ, ಹೆದರಬೇಡ. ಅಂದಹಾಗೆ ಅದೆ ಸಮಯಕ್ಕೆ ಸರಿಯಾಗಿ ಅವರ ಪ್ರಾರ್ಥನೆಯಿಂದಾಗಿ ಸರಾಖ ಕುದುರೆಯಿಂದ ಕೆಳಗೆ ಬಿದ್ದನು. ಅವನು ನಿಮ್ಮಲ್ಲಿಗೆ (ಸ) ಬಂದು ಶರಣು ಬಯಸಿದನು. ಆಗ ಪೈಗಂಬರ್ (ಸ) ಅವನ ಪರವಾಗಿ ಈ ಭವಿಷ್ಯವಾಣಿ ನುಡಿದರು. "ಸರಖಾ! ಆ ಸಮಯ ನಿನ್ನ ಅವಸ್ಥೆ ಏನಾಗಬಹುದು, ನಿನ್ನ ಕೈಗಳಲ್ಲಿ ಕಿಸ್ರಾ (ಇರಾನಿನ ಬಾದಶಾಹ್) ನ ಚಿನ್ನದ ಕಡಗಗಳು ನಿನ್ನ ಕೈಗಳಲ್ಲಿ ತೊಡಿಸಲಾಗುವುದು. ಈ ಭವಿಷ್ಯವಾಣಿಯು ಅತ್ಯಂತ ವೈಭವದಿಂದ ನಂತರ ಪೂರ್ಣಗೊಂಡಿತು.

ಆ ಪ್ರತಾಪವು ನೋಡಿ, ಶತ್ರುವು ಪೈಗಂಬರರ ಕೇವಲ ಒಂದು ಅಡಿ ದೂರದಲ್ಲಿರುತ್ತಾನೆ, ಅವರು (ಸ) ಬರೀ ಗೈಯಲ್ಲಿದ್ದರು, ಒಬ್ಬರೇ ಇದ್ದರು. ಶತ್ರುವು ಕೈಯಲ್ಲಿ ಖಡ್ಗ ಎತ್ತಿ ನಿಂತಿದ್ದನು. ಆದರೆ ಯಾವ ಭಯವು ಆವರಿಸಲಿಲ್ಲ. ಎಂತಹ ವಿಶ್ವಾಸವಿತ್ತು ! ಎಂತಹ ನಂಬಿಕೆ ಇತ್ತು ! ಮತ್ತು ಅಲ್ಲಾಹನ ಮೇಲೆ ಎಂತಹ ಭರವಸೆ ಇತ್ತು.
(ಖುತ್‌ಬ ಜುಮುಅ, 15 ಆಗಸ್ಟ್ 2003)

ಒಟ್ಟಿನಲ್ಲಿ ಹಝ್‌ರತ್ ಪೈಗಂಬರ್‌ರ (ಸ) ಚರಿತ್ರೆಯ ಪ್ರತಿಯೊಂದು ಅಂಶ ಪವಿತ್ರ ಖುರ್‌ಆನ್‌ಮ ಶಿಕ್ಷಣಗಳ ಕನ್ನಡಿಯಾಗಿದೆ. ಅವರ ಜೀವನ ಎಲ್ಲ ರೀತಿಯಿಂದಲೂ ಅದ್ವಿತೀಯ ಹಾಗೂ ಅನುಸುರಣೆಗೆ ಯೋಗ್ಯವಾಗಿದೆ. ಅವರ ವ್ಯಕ್ತಿತ್ವವೇ ಅಲ್ಲಾಹನ ಪ್ರೀತಿ ಗಳಿಸುವ ಮಾರ್ಗವಾಗಿದೆ. ಪ್ರವಾದಿ(ಸ) ಅವರ ಚರಿತ್ರೆಯ ಸೌಂದರ್ಯ, ಮಹಿಮೆ ಮತ್ತು ಉನ್ನತ ಸ್ಥಾನಮಾನದ ಕುರಿತು ಈ ಕೆಲವು ಪುಟಗಳಲ್ಲಿ ವರ್ಣಿಸುವುದು ಕಷ್ಟಸಾಧ್ಯ ಮಾತಾಗಿದೆ. ಆದ್ದರಿಂದ ಕೊನೆಯಲ್ಲಿ ಅಲ್ಲಾಹನ ಸ್ತುತಿ ಮತ್ತು ಅವರ (ಸ) ಮೇಲೆ ಆಶೀರ್ವಾದ ಬಯಸುತ್ತಾ ತನ್ನ ಈ ವಿಷಯವನ್ನು ಕೊನೆಗಾಣಿಸುತ್ತೇನೆ.

**ಅಲ್ಲಾಹುಮ್ಮ ಸಲ್ಲಿ ಅಲಾ ಸಯ್ಯಿದಿನಾ ಮುಹಮ್ಮದಿನ್ ವ ಅಲಾ ಆಲಿ ಸಯ್ಯಿದಿನಾ ಮುಹಮ್ಮದಿನ್ ಅಕ್‌ಸರ ಮಿಮ್ಮಾ ಸಲ್ಲೈತ ಅಲಾ ಅಹದಿಮ್ಮಿನ್ ಅಂಬಿಯಾಯಿಕ ವ ಬಾರಿಕ್ ವ ಸಲ್ಲಿಮ್**

...*...*...*...

# ಮುಸ್ಲಿಮೇತರರೊಂದಿಗೆ ಸಮಾನತೆಯ ಹಾಗೂ ಉತ್ತಮ ನಡವಳಿಕೆಯ ಕುರಿತು ಪವಿತ್ರ ಖುರ್‌ಆನ್‌ನ ಬೋಧನೆಗಳು.

**(ಸಲೀಖ್ ಅಹ್ಮದ್ ನಾಯೆಕ್, ಮುರಬ್ರಿ ಸಿಲ್ಸಿಲಾ, ನಝಾರತ್ ಉಲಿಯಾ ಖಾದಿಯಾನ್)**

ಅಲ್ಲಾಹನು ಅತ್ಯಂತ ಸ್ಪಷ್ಟ ಪದಗಳಲ್ಲಿ ಆತ್ಮಸಾಕ್ಷಿ ಹಾಗೂ ಧಾರ್ಮಿಕ ಸ್ವಾತಂತ್ರ್ಯವನ್ನು ಘೋಷಿಸಿದ್ದಾನೆ. ಈ ಘೋಷಣೆಯ ಮೂಲಕ ಜಗತ್ತು ಇರುವವರೆಗೆ ಒಂದು ಅದ್ವಿತೀಯ ಉದಾಹರಣೆ ನೀಡಿದ್ದಾನೆ. ಅದರಲ್ಲಿ ಯಾವ ಸಂಶಯವೂ ಇಲ್ಲ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ. **ಲಕುಂ ದೀನುಕುಂ ವಲಿಯದೀನ್** (ಅಲ್-ಕಾಫಿರೂನ್-7) ನಿಮಗೆ ನಿಮ್ಮ ದರ್ಮ ಮತ್ತು ನನಗೆ ನನ್ನ ಧರ್ಮ, ಮತ್ತು ಲಾ ಇಕ್ರಾಹ ಫಿದ್ದೀನ್, (ಅಲ್-ಬಖರ:-257) ಧರ್ಮದಲ್ಲಿ ಬಲವಂತವಿಲ್ಲ. ಇದು ಮನಸಾಕ್ಷಿಗೆ ಸೇರಿದ್ದಾಗಿದೆ.

ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ವಾಗ್ದಾತ್ತ ಮಸೀಹ್ ಮಹದಿ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಧಾರ್ಮಿಕ ವಿಷಯಗಳಲ್ಲಿ ಸ್ವಾತಂತ್ರ್ಯವಿರಬೇಕಾಗಿದೆ. ಅಲ್ಲಾಹನು ಹೇಳಿದನು. **ಲಾ ಇಕ್ರಾಹ ಫಿದ್ದೀನ್** ಅಂದರೆ ಧರ್ಮದಲ್ಲಿ ಯಾವುದೇ ರೀತಿಯ ಬಲವಂತ ಸಲ್ಲದು. ಈ ರೀತಿಯ ವಾಕ್ಯ ಇಂಜೀಲಿನಲ್ಲೂ ಇಲ್ಲ. ಯುದ್ಧಕ್ಕೆ ನಿಜವಾದ ಕಾರಣವೇನು? ಅದನ್ನು ಮನವರಿಕೆ ಮಾಡಿಕೊಳ್ಳುವುದರಲ್ಲಿ ಜನರಿಗೆ ಮೋಸವಾಗಿದೆ. ಯುದ್ಧದ ಆದೇಶವಿರುತ್ತಿದ್ದರೆ ಪ್ರವಾದಿ(ಸ) ಹದಿಮೂರು ವರ್ಷಗಳ ಕಾಲ ಏಕೆ ವ್ಯರ್ಥ ಕಳೆಯುತ್ತಿದ್ದರು? ಏಕೆ ಅವರು ಖಡ್ಗ ಎತ್ತಲಿಲ್ಲ? ಕೇವಲ ಯುದ್ಧಕ್ಕೆ ಬಂದವರೊಡನೆ ಮಾತ್ರ ಯುದ್ಧ ಮಾಡುವ ಆಜ್ಞೆ ಇದ್ದುದ್ದರಿಂದ, ಎಂದೂ ಇಸ್ಲಾಮ್ ಧರ್ಮ ಮೊದಲಾಗಿ ಯುದ್ಧ ಸಾರಲಿಲ್ಲ. ಇದು ಇಸ್ಲಾಂ ಧರ್ಮದ ತತ್ವವಾಗಿದೆ. ಯುದ್ಧಕ್ಕೆ ಏನು ಕಾರಣವಿತ್ತು. ಅದನ್ನು ಸ್ವಯಂ ಅಲ್ಲಾಹನು ತಿಳಿಸಿದ್ದಾನೆ. ಝುಅಮು-ಇ ಜನರನ್ನು ತುಳಿತಕ್ಕೊಳಗಾಗಿಸಲಾಗಿದೆ, ಹಿಂಸೆಗೆ ಒಳಪಡಿಸಲಾಗಿದೆ. ಆದ್ದರಿಂದ ನಿಮಗೆ ಯುದ್ಧ ಮಾಡಲು ಅನುಮತಿಸಲಾಗುತ್ತದೆ. ನೇರವಾಗಿ ಯುದ್ಧ ಮಾಡಲು ಅನುಮತಿ ನೀಡಲಿಲ್ಲ. ಬಲವಂತವಾಗಿ ಧರ್ಮ ಪರಿವರ್ತನೆ ಮಾಡುವ ಸಲುವಾಗಿ ಯುದ್ಧ ಮಾಡಲು ಅನುಮತಿ ನೀಡಲಾಗಿಲ್ಲ. ಬದಲು ನಿರಪರಾಧಿಗಳ ಮೇಲೆ ಯುದ್ಧ ಸಾರಿದಾಗ ಅವರ ರಕ್ಷಣೆಗೋಸ್ಕರ ಯುದ್ಧ ಮಾಡಲು ಅನುಮತಿ ನೀಡಲಾಗಿದೆ, ಜೀವ ರಕ್ಷಣೆಗೋಸ್ಕರ ಯುದ್ಧ ಮಾಡಲು ಎಲ್ಲಾ ಕಾನೂನುಗಳು ಅನುಮತಿಸುತ್ತದೆ. (ಅಲ್‌ಬದರ್, ಸಂಪುಟ-2, ದಿನಾಂಕ: 23-30 ಜನವರಿ 1903 ಪುಟ 3)

ಅಂದಹಾಗೆ ನಾವು ಇತಿಹಾಸದ ಅಧ್ಯಯನ ಮಾಡಿದರೆ ತಿಳಿದುಬರುವುದು ಇದು ಪವಿತ್ರ ಖುರ್‌ಆನ್‌ನ ಕೇವಲ ಘೋಷಣೆಯಾಗಿರಲಿಲ್ಲ ಮತ್ತು ಇಸ್ಲಾಂ ಧರ್ಮ ಕೇವಲ ಬೋಧನೆಗೆ ಸೀಮಿತಪಡಿಸಲಿಲ್ಲ. ಬದಲು ಕಾರ್ಯರೂಪವಾಗಿ ಅದನ್ನು ಸರಕಾರಗಳ ಸಂವಿಧಾನದಲ್ಲಿ ಸೇರಿಸಲಾಗಿದೆ. ಇಸ್ಲಾಮಿಕ್ ಸರಕಾರಗಳ ಅಡಿಯಲ್ಲಿ ಮುಸ್ಲಿಮೇತರ ಅಲ್ಪಸಂಖ್ಯಾತರು ಅಥವಾ ತುಳಿತಕ್ಕೊಳಗಾದ ಮುಸ್ಲಿಮೇತರರಲಿ, ಅವರ ಗೌರವ ಮತ್ತು ಘನತೆ, ಜೀವ ಮತ್ತು ಆಸ್ತಿಯ ರಕ್ಷಣೆ ಸರಕಾರದ ಪ್ರಾಥಮಿಕ ಜವಾಬ್ದಾರಿ ಎಂದು ಘೋಷಿಸಲಾಯಿತು.

ಇಸ್ಲಾಮಿಕ್ ರಾಜ್ಯದ ಎಲ್ಲಾ ನಿವಾಸಿಗಳು, ಅವರು ಯಾವ ಧರ್ಮದವರೇ ಆಗಲಿ ಅವರ ಧಾರ್ಮಿಕ ವ್ಯವಹಾರಗಳಲ್ಲಿ ಸಂಪೂರ್ಣವಾಗಿ ಮುಕ್ತರಾಗಿಸಿದ್ದಾರೆ. ಅವರ ಧಾರ್ಮಿಕ ವ್ಯವಹಾರಗಳಲ್ಲಿ ಯಾವುದೇ ಬಲವಂತವಿಲ್ಲ. ಧಾರ್ಮಿಕ ವ್ಯವಹಾರಗಳಲ್ಲಿ ಎಲ್ಲ ನಿವಾಸಿಗಳಿಗೆ ಜಾತಿ ಧರ್ಮಗಳ ತಾರತಮ್ಯವಿಲ್ಲದೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಒಂದೆಡೆ ಹೇಳುತ್ತಾನೆ. **"ವಖುಲಿಲ್ ಹಖ್ಖು ಮಿನ್ ರಬ್ಬಿಕುಮ್, ಫಮನ್ ಶಾಅ ಫಲ್ ಯುಮಿನ್ ವಮನ್ ಶಾಅ ಫಲ್ ಯಕ್‌ಫುರ್"** (ಅಲ್‌ಕಹಫ್ -30) ಅನುವಾದ: ಹೇಳು: ಇದು ನಿಮ್ಮ ಪ್ರಭುವಿನ ಕಡೆಯಿಂದಿರುವ ಸತ್ಯವಾಗಿದೆ. ಆದ್ದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ, ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ.

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ಹೇಳುತ್ತರೆ: ಧಾರ್ಮಿಕ ಸ್ವಾತಂತ್ರ್ಯ ಕುರಿತು ಈ ಸಮಯ ಕೇವಲ ಎರಡು ವಚನಗಳನ್ನು ಉಲ್ಲೇಖಿಸುತ್ತೇನೆ. ಮೊದಲನೆಯದು ಸೂರ ರಹಫ್‌ನ ವಚನವಿದೆ, ಅದರ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದ್ದೇನೆ. ಈಗ ನಾನು ಬೇರೆ ವಚನವನ್ನು ತೆಗೆದುಕೊಳ್ಳುತ್ತೇನೆ. ಅದು ಸೂರ: **ಖುಲ್ ಯಾ ಅಯ್ಯುಹನ್ನಾಸು ಖದ್ ಜಾಅಕುಮುಲ್ ಹಖ್ಖು ಮಿನ್ ರಬ್ಬಿಕುಮ್ ಫ ಮನಿಹ್‌ತದಾ ಫಇನ್ನಮಾ ಯಹ್‌ತದೀ ಲಿನಫ್ಸಿಹೀ ವಮ್ ಝಲ್ಲ ಫಇನ್ನಮಾ ಯಝಿಲ್ಲು ಅಲಯಹಾ ವಮಾ ಅನಾ ಅಲೈಕುಮ್ ಬಿವಕೀಲ್** (ಯೂನುಸ್-109)

ಅನುವಾದ: ಹೇಳು: ಎಲೈ ಜನರೇ ನಿಮ್ಮ ಪ್ರಭುವಿನ ಕಡೆಯಿಂದ ನಿಮಗೆ ಸತ್ಯ ಬಂದಿರುತ್ತದೆ. ಯಾರಾದರೂ ಸತ್ವಧರ್ಮವನ್ನು ಅನುಸರಿಸುವುದಾದರೆ ಅವನು ತನ್ನ ಒಳಿತಿಗಾಗಿಯೇ ಸತ್ಯವನ್ನು ಅನುಸರಿಸುತ್ತಾನೆ. ಯಾರಾದರೂ ದಾರಿತಪ್ಪಿ ಹೇಳುವವರಾದರೆ, ತನಗೆ ಹಾನಿಕಾರಕವಾಗಿಯೇ ಅವನು ದಾರಿ ತಪ್ಪುತ್ತಾನೆ. ನಾನು ನಿಮ್ಮ ಮೇಲ್ನೋಟಗಾರನಲ್ಲ.

ಇದು ಅಂತ್ಯ ತೀರ್ಮಾನದವರೆಗೆ ಇರುವ ಆಜ್ಞೆಯಾಗಿದೆ. ಇದು ಪೈಗಂಬರರ ಅನುಯಾಯಿಗೂ ಹಾಗೂ ಎಲ್ಲಾ ಮನುಷ್ಯರಿಗೂ ಮಾನದಂಡವಾಗಿದೆ.

ಹೇಳಿದನು: **ಖದ್ ಜಾಅಕುಮುಲ್ ಹಖ್ಖು ಮಿರ್‍ರಬ್ಬಿಕುಮ್**- ಎಂದರೆ ನಿಮ್ಮ ಪ್ರಭುವಿನ ಕಡೆಯಿಂದ ಸತ್ಯ ಬಂದಿರುತ್ತದೆ. ಫಮನಿಹ್‌ತದಾ ಈಗ ಇಚ್ಛೆಯುಳ್ಳವನು ಮಾರ್ಗದರ್ಶನ ಪಡೆಯಬಹುದು, ಫಿನ್ನಮ ಯಹ್‌ತದಿ ಅನಫ್‌ಸಿಹಿ-ಅದು ತನ್ನ ಒಳಿತಿಗಾಗಿಯೇ ಸತ್ಯವನ್ನು ಅನುಸರಿಸುತ್ತಾನೆ ಎಂದರೆ ಮನುಷ್ಯನಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಇಚ್ಛಿಸಿದರೆ ಮಾರ್ಗದರ್ಶನ ಪಡೆಯಲಿ, ಇಲ್ಲದಿದ್ದರೆ ಪ್ರಭುವಿನ ಕಡೆಯಿಂದಾಗಲಿ ಅವನ ಪ್ರವಾದಿಯ ಕಡೆಯಿಂದಾಗಲಿ ಯಾವ ಬಲವಂತವೂ ಇಲ್ಲ. ಆದರೆ ಏಮನ್‌ಝುಲ್ಲ ಫಿನ್ನಮ ಯಝಿಲ್ಲು ಅಲೈಹ-ಯಾರಾದರೂ ದಾರಿತಪ್ಪಿ ಹೋಗುವುದಾದರೆ, ತನಗೆ ಹಾನಿಕರವಾಗಿಯೇ ಅವನು ದಾರಿತಪ್ಪುತ್ತಾನೆ. ಆದ್ದರಿಂದ ಮನುಷ್ಯನ ಕರ್ತವ್ಯವಾಗಿದೆ. ಅವನು ಸರಿಯಾಗಿ ಯೋಚಿಸಿ ನಿರ್ಣಯ ಕೈಗೊಳ್ಳಬೇಕು. ಒಟ್ಟಿನಲ್ಲಿ ಅಲ್ಲಾಹನು ಮುಹಮ್ಮದ್ ಪ್ರವಾದಿ(ಸ) ರವರ ಮೂಲಕ ಘೋಷಿಸಲಾಯಿತು. ಓ ಜನರೇ ನಿಮಗೆ ಸಂಪೂರ್ಣ ರೀತಿಯಲ್ಲಿ ಧಾರ್ಮಿಕ ಸ್ವಾತಂತ್ರ್ಯ ನೀಡಲಾಗಿದೆ. ಈಗ ನಿರ್ಣಯಿಸಿಕೊಳ್ಳುವ ಜವಾಬ್ದಾರಿ ನಿಮ್ಮದಾಗಿದೆ. ಮಾರ್ಗದರ್ಶನ ಪಡೆಯಬೇಕೋ ಹಾಗೂ ದಾರಿ ತಪ್ಪಬೇಕು. ನಾನು ನಿಮ್ಮ ಹೊಣೆಗಾರನಲ್ಲ, ನಾನು ನಿಮ್ಮ ಮೇಲ್ನೋಟಗಾರನಲ್ಲ. ನನ್ನ ಮೇಲೆ ನಿಮ್ಮ ಯಾವ ಜವಾಬ್ದಾರಿಯೂ ಇರುವುದಿಲ್ಲ. (ತ ಫ್ಸೀರ್ ಹಝ್ರತ್ ಖಲಿಫತುಲ್ ಮಸೀಹ್ ಸಾಲಿಸ್, ಪುಟ-440)

ಮತ್ತು ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಪೈಗಂಬರರಿಗೆ(ಸ) ಸಂಬೋಧಿಸಿ ಎಲ್ಲಾ ಮುಸ್ಲಿಮರಿಗೆ ಎಚ್ಚರಿಸುತ್ತಾನೆ: **ವಲೌ ಶಾಅ ರಬ್ಬುಕ ಲಆಮನ ಮನ್ ಫಿಲ್ ಅರ್ಝಿ ಕುಲ್ಲುಹುಮ್ ಜಮೀಅ; ಅಫಅನ್‌ತ ತುಕ್ರಿಹುನ್ನಾಸ ಹತ್ತಾ ಯಕೂನು ಮುಮಿನೀನ** (ಯೂನುಸ್-100)

ಅನುವಾದ:- ನಿನ್ನ ಪ್ರಭು ಇಚ್ಛಿಸಿದರೆ ಭೂಲೋಕದಲ್ಲಿರುವ ಎಲ್ಲರೂ ವಿಶ್ವಾಸ ಹೊಂದಿರುತ್ತಿದ್ದರು. ಆದರೆ ಅವನು ನಿರ್ಬಂಧ ಪಡಿಸುವುದಿಲ್ಲ. ಹಾಗಿರುವಾಗ ಜನರು ವಿಶ್ವಾಸಿಗಳಾಗುವಂತೆ ನೀನು ಬಲವಂತಪಡಿಸುವಿಕೆಯೋ?

ಆದ್ದರಿಂದ ಪವಿತ್ರ ಖುರ್‌ಆನ್ ಬಲವಂತವಾಗಿ ಧರ್ಮ ಪರಿವರ್ತನೆ ಮಾಡುವುದನ್ನು ಸಾರಾಸಗಟಾಗಿ ತಳ್ಳಿಹಾಕಿದ್ದಾನೆ. ಮತ್ತು ಧಾರ್ಮಿಕ ಸ್ವಾತಂತ್ರ್ಯ, ಸಮಾನತೆ ಮತ್ತು ಮನಸಾಕ್ಷಿಯನ್ನು ಎತ್ತಿಹಿಡಿದಿದ್ದಾನೆ. ಮತ್ತು ಈ ಪ್ರವಾದಿ(ಸ) ತನ್ನ ಮಾದರಿಯಿಂದಾಗಿ

ಪ್ರತಿಯೊಬ್ಬ ವ್ಯಕ್ತಿ ತನ್ನ ಧರ್ಮ ವ್ಯವಹಾರದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಹೊಂದಿದ್ದಾರೆ ಎಂದು ಸಾಬೀತುಪಡಿಸಿದ್ದಾರೆ. ಅವರು ಇಸ್ಲಾಮಿ ವಿಧಿ ಅನುಸಾರ ಬಲಾತ್ಕಾರ ಹಿಂಸೆಯ ಬದಲು ಕ್ಷಮೆಯನ್ನು ಮತ್ತು ನ್ಯಾಯ ಸ್ಥಾಪನೆಯಲ್ಲಿ ಶತ್ರುಗಳನ್ನು ಸಹ ಕಡೆಗಾಣಿಸಬಾರದು ಎಂಬ ಶಿಕ್ಷಣವನ್ನು ನೀಡಿದ್ದಾರೆ.

ಪವಿತ್ರ ಖುರ್‌ಆನ್ ಧಾರ್ಮಿಕ ಸ್ವಾತಂತ್ರ್ಯ ಮತ್ತು ಮನ: ಸಾಕ್ಷಿಯನ್ನು ಸ್ಪಷ್ಟವಾಗಿ ದೃಢಪಡಿಸಿದರೆ, ಇನ್ನೊಂದೆಡೆ ಧಾರ್ಮಿಕ ಹಿಂಸೆ ಮತ್ತು ಬಲವಂತಿಕೆಯನ್ನು ತಳ್ಳಿ ಹಾಕಿದೆ. ಅದರ ಕೃತಿಕ ರೂಪ ನಮ್ಮ ನೇತಾರ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಸಾಬೀತುಗೊಳಿಸಿದ್ದಾರೆ. ಇಸ್ಲಾಮಿಕ್ ಕಾನೂನು ಶಿಕ್ಷಣಗಳ ಪ್ರಕಾರ ಎಲ್ಲ ಸಮಯಕ್ಕೂ ಹಿಂಸೆ ಬಲವಂತಿಕೆಯ ಉತ್ತರ ಕ್ಷಮೆ ಮತ್ತು ಕರುಣೆಯ ಮೂಲಕ ನೀಡುತ್ತಾ ಉದಾತ್ತ ಉದಾಹರಣೆಗಳನ್ನು ಸ್ಥಾಪಿಸಿದ್ದಾರೆ.

ಪವಿತ್ರ ಖುರ್‌ಆನ್ ಪದೇ ಪದೇ ಹಿಂಸೆ ಬಲವಂತವನ್ನು ಖಂಡಿಸುತ್ತದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ. **"ವಲಾ ಯಜ್ರಿ ಮನ್ನಕುಮ್ ಶನಾನು ಖೌಮಿನ್ ಅನ್ ಸದ್ದೂಕುಮ್ ಅನಿಲ್ ಮಸ್ಜಿದಿಲ್ ಹರಾಮಿ ಅನ್ ತಅ್‌ತದೂ, ವತಆವನೂ ಅಲಲ್ ಬರ್ರಿ ವತ್ತಖ್ವ. ವಲ ತಆವನೂ ಅಲಲ್ ಇಸ್ಮಿ ವಲ್ ಉದ್ವಾನಿ, ವತ್ತಖುಲ್ಲಾಹ, ಇನ್ನಲ್ಲಾಹ ಶದೀದುಲ್ ಇಖಾಬ್"** (ಅಲ್-ಮಾಇದಃ-3)

ಅನುವಾದ: ಒಂದು ಜನತೆ ನಿಮ್ಮನ್ನು ಪವಿತ್ರ ಮಸೀದಿಯಿಂದ ತಡೆಗಟ್ಟಿ ನಿಮ್ಮೊಡನೆ ತೋರಿಸಿದ ವಿರೋಧವು ಅವರೊಡನೆ ಅನ್ಯಾಯದಿಂದ ವರ್ತಿಸುವರೆ, ನಿಮ್ಮನ್ನು ಪ್ರೇರೇಪಿಸದಿರಲಿ. ಸತ್ಕರ್ಮಗಳಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಲ್ಲಿ ನೀವು ಪರಸ್ಪರ ಸಹಕರಿಸಿರಿ. ಆದರೆ ಪಾಪಕರ್ಮ ಮತ್ತು ಅನ್ಯಾಯವೆಸಗುವುದರಲ್ಲಿ ನೀವು ಅನ್ಯೋನ್ಯ ಸಹಕರಿಸಬಾರದು, ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ಖಂಡಿತವಾಗಿಯೂ ಅಲ್ಲಾಹನು ಕಠಿಣವಾಗಿ ಶಿಕ್ಷಿಸುವವನಾಗಿದ್ದಾನೆ.

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಹೇಳುತ್ತಾರೆ:

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಆಜ್ಞೆ ನೀಡುತ್ತಾನೆ. ಲೋಕದಲ್ಲಿ ಶಾಂತಿ ಸ್ಥಾಪನೆಗೆ ನ್ಯಾಯಪರತೆ ಅವಶ್ಯಕವಾಗಿದೆ, ನಿಮ್ಮ ನ್ಯಾಯದ ಮಾನದಂಡ ಎಷ್ಟು ಉದಾತ್ತವಾಗಿರಬೇಕು ಎಂಬ ಕುರಿತು ಹೇಳುತ್ತದೆ. **ಯಾ ಅಯ್ಯುಹಲ್ಲಝೀನ ಆಮನೂ ಕೂನೂ ಖವ್ವಾಮೀನ ಲಿಲ್ಲಾಹಿ ಶುಹದಾಅ ಬಿಲ್ ಖಿಸ್ತಿ ವಲಾ ಯಜ್ರಿ ಮನ್ನಕುಮ್ ಶನಾಅನು ಖೌಮಿನ್ ಅಲಾ ಅಲ್ಲಾ ತ್‌ದಿಲೂ, ಇಅ್‌ದಿಲೂ. ಹುವ ಅಖ್ರಬು ಲಿತ್ತಖ್ವಾ, ವತ್ತಖುಲ್ಲಾಹ, ಇನ್ನಲ್ಲಾಹ ಖಬೀರುಮ್ ಬಿಮಾ ತಅ್‌ಮಲೂನ್** (ಸೂರಃ ಅಲ್ ಮಾಇದಃ-9) ಅನುವಾದ: ಎಲೈ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ, ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ, ಸದಾ ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ.
(ಪೋಪ್ ಕೆ ಇಸ್ಲಾಂ ಪರ್ ಇತೆರಾಝಾತ್ ಕಾ ಜವಾಬ್, ಪುಟ-47, ಸಂಚಿಕೆ 2008)

ಪವಿತ್ರ ಖುರ್‌ಆನ್‌ನಲ್ಲಿ ಶಾಂತಿ ಸಮಾನತೆಯ ಬೋಧನೆಗಳಿಗೆ ಎಷ್ಟೊಂದು ಒತ್ತು ನೀಡಿದ್ದಾರೆಂದರೆ ಅಲ್ಲಾಹನು ಪೈಗಂಬರರಿಗೆ(ಸ) ಬಹುದೇವಾರಾಧಕರಿಗೂ ಸಹ ಶಾಂತಿಯಿಂದಿರಲು ಹಕ್ಕು ನೀಡಿದೆ. ಹೇಳಿದನು: **ವ ಇನ್ ಅಹದುಮ್ಮಿನಲ್ ಮುಶ್ರಿಕೀನಸ್ತಜಾರಕ ಫಜಿರ್‌ಹು ಹತ್ತಾ ಯಸ್‌ಮ ಕಲಾಮಲ್ಲಾಹಿ ಸುಮ್ಮ ಅಬ್ಲಿಗ್‌ಹು ಮಾ ಮನಹೂ; ಝಾಲಿಕ ಬಿಅನ್ನಹುಮ್ ಖೌಮನ್ ಲಾ ಯಾಅ್‌ಲಮೂನ್** (ಸೂರಃ ಅತ್ತೌಬ-6) ಅನುವಾದ: ಬಹುದೇವಾರಾಧಕರಲ್ಲಿ ಯಾರಾದರೂ ನಿನ್ನೊಡನೆ ಅಭಯ ಯಾಚಿಸಿದರೆ, ಅವನಿಗೆ ಆಶ್ರಯ ನೀಡು. ಹಾಗೆ ಅವನು ಅಲ್ಲಾಹನ ವಚನ ಆಲಿಸುವಂತಾಗಲಿ. ಆನಂತರ ಅವನನ್ನು ಅವನ ಸುರಕ್ಷಿತ ಸ್ಥಳಕ್ಕೆ ತಲುಪಿಸು. ಇದು (ಈ ರಿಯಾಯಿತಿ) ಅವರು ತಿಳುವಳಿಕೆಯಿಲ್ಲದ ಜನರಾದುದರಿಂದಾಗಿದೆ.

ಇದು ಧಾರ್ಮಿಕ ಸಮಾನತೆ ಕಾರಣದಿಂದಾಗಿಯೇ ಪವಿತ್ರ ಖುರ್‌ಆನ್ ಅನ್ಯಧರ್ಮಿಯರ ಒಳಿತುಗಳನ್ನು ಸ್ವೀಕರಿಸುತ್ತಾ ಹೇಳುತ್ತದೆ: **ವ ಮಿನ್ ಅಹ್ಲಿಲ್ ಇತಾಬಿ ಮನ್ ತಅ್‌ಮನ್‌ಹು ಬಿಖಿನ್ತಾರಿಂ ಯುವದ್ದಿಹೀ ಇಲೈಕ, ವಮಿನ್‌ಹುಮ್ ಮನ್ ಇನ್ ತಅ್‌ಮನ್‌ಹು ಬಿದೀನಾರಿಲ್ಲ ಯುವದ್ದಿಹೀ ಇಲೈಕ ಇಲ್ಲಾ ಮಾ ದುಮ್ತ ಅಲೈಹಿ ಖಾಯಿಮ; ಝಾಲಿಕ ಬಿಅನ್ನಹುಮ್ ಖಾಲೂ ಲೈಸ ಅಲೈನಾ ಫಿಲ್ ಉಮ್ಮೀಈನ ಸಬೀಲುನ್. ವಯಖೂಲೂನ ಅಲಲ್ಲಾಹಿಲ್ ಕಝಿಬ ವಹುಮ್ ಯಅ್‌ಮಲೂನ್** (ಸೂರಃ ಆಲಿ ಇಮ್ರಾನ್-76)

ಅನುವಾದ: ಧನದ ರಾಶಿಯೊಂದನ್ನೇ ನೀನು ನಂಬಿಕೆಯಿಂದ ಒಪ್ಪಿದರೆ ನಿನಗೆ ಅದನ್ನು ಹಾಗೆಯೇ ಹಿಂತಿರುಗಿಸುವ ಕೆಲವರು ಗ್ರಂಥದ ಪೈಕಿಯಲ್ಲಿದ್ದಾರೆ. ಅಂತೆಯೇ ಒಂದು ದೀನಾರನ್ನು ನೀನು ನಂಬಿಕೆಯಿಂದ ಒಪ್ಪಿದರೆ, ನೀನು ಅದನ್ನು ಪದೇ ಪದೇ ಕೇಳದಿದ್ದರೆ ಅದನ್ನು ಹಿಂತಿರುಗಿಸಿದ ಕೆಲವರು ಅವರ ಪೈಕಿಯಲ್ಲಿದ್ದಾರೆ. ಇದು, 'ಈ ಅನಕ್ಷರಸ್ಥರ ವಿಷಯದಲ್ಲಿ ನಮ್ಮ ಮೇಲೆ ಆಕ್ಷೇಪ ಉಂಟಾಗಲು ಯಾವುದೇ ದಾರಿಯಿಲ್ಲ ಎಂದು ಅವರು ಹೇಳುವ ಕಾರಣದಿಂದಾಗಿದೆ. ಅವರು ಅರಿತುಕೊಂಡೇ ಅಲ್ಲಾಹನ ಮೇಲೆ ಸುಳ್ಳು ಹೇಳುತ್ತಾರೆ."

ಆದ್ದರಿಂದ ಹಝರತ್ ಅಸ್ಮಾ ಬಿನ್ತ್ ಅಬೂಬಕರ್(ರ) ರ ಮುಶ್ರಿಕ್ ತಾಯಿ ಉದಾಸೀನಗೊಂಡು ಅವರನ್ನು ಭೇಟಿಯಾಗಲು ಮದೀನಕ್ಕೆ ಬಂದರು. ಅಸ್ಮಾ ಪ್ರವಾದಿ(ಸ) ರೊಡನೆ ಕೇಳಿದರು. ನನಗೆ ನನ್ನ ತಾಯಿಯ ಸೇವೆ ಮಾಡಲು ಹಾಗೂ ಅವರೊಡನೆ ಉತ್ತರವಾಗಿ ವ್ಯವಹರಿಸಲು ಅನುಮತಿ ಇದೆಯೇ? ಅವರು ಹೇಳಿದರು. ಹೌದು, ಅವರು ನಿಮ್ಮ ತಾಯಿಯಾಗಿದ್ದಾರೆ. ಇಬ್ನು ಈನಾ ಹೇಳುತ್ತಾರೆ. ಅದೇ ಪೈಕಿ ಈ ವಚನವಿದೆ. ಅಲ್ಲಾಹನು ನಿಮಗೆ ಯಾರು ಧಾರ್ಮಿಕ ವಿಷಯದಲ್ಲಿ ನಿಮ್ಮೊಡನೆ ಯುದ್ಧ ಸಾರಿಲ್ಲ. ಅವರೊಡನೆ ಉತ್ತಮವಾಗಿ ವ್ಯವಹರಿಸಲು ತಡೆಯಿರುವುದಿಲ್ಲ. (ಬುಖಾರಿ, ಕಿತಾಬುಲ್ ಅದಬ್, ಉಸ್ವಾ ಎ ಇನ್ಸಾನ್ ಕಾಮಿಲ್(ಸ), ಹಾಫಿಝ್ ಮುಝಫರ್ ಅಹ್ಮದ್, ಪುಟ-505)

ರಸೂಲುಲ್ಲಾಹ್(ಸ) ಉನ್ನತ ಮಟ್ಟದ ಧಾರ್ಮಿಕ ಸ್ವಾತಂತ್ರ್ಯವನ್ನು ಪ್ರದರ್ಶಿಸುತ್ತಾ ಮುಸ್ಲಿಂ, ಅಮುಸ್ಲಿಂ ಎಂಬ ತಾರತಮ್ಯವನ್ನು ಅಳಿಸಿ ಹಾಕಿದರು. ಅಷ್ಟೇ ಅಲ್ಲದೆ ಮುಸ್ಲಿಮರಿಗಿಂತ ಅಮುಸ್ಲಿಮರೊಡನೆ ಹೆಚ್ಚು ನಮ್ರತೆಯಿಂದ ವರ್ತಿಸುತ್ತಿದ್ದರು. ಆದ್ದರಿಂದ ಮುಸಲ್ಮಾನರಿಗಿರುವ ಝಕಾತ್ ಮತ್ತು ಅಶರ್ ಬದಲಾಗಿ ಮುಸ್ಲಿಮೇತರರಿಗೆ ಕೇವಲ ಜಿಝಿಯ ಎಂದರೆ ಸಾಧಾರಣ ರೀತಿಯ ತೆರಿಗೆಯಷ್ಟೇ ವಿಧಿಸಿದರು. ಅದೇ ರೀತಿಯಲ್ಲಿ ಗುಲಾಮರಿಗೆ ಸ್ವಾತಂತ್ರ್ಯ ನೀಡುವ ಶಿಕ್ಷಣ ನೀಡಿ ಅದರ ಕೃತ್ಯರೂಪವಾಗಿ ಹುನೈನ್ ಯುದ್ಧದ ಸಂದರ್ಭದಲ್ಲಿ ಸಾವಿರಾರು ಅಮುಸ್ಲಿಂ ಗುಲಾಮರನ್ನು ಬಿಡುಗಡೆಗೊಳಿಸಿದರು.

ಪವಿತ್ರ ಖುರ್‌ಆನ್ ಧರ್ಮಗ್ರಂಥದವರ ಒಂದು ವರ್ಗದ ಸದ್ಗುಣಗಳನ್ನು ವಿವರಿಸುತ್ತಾ ಹೇಗೆ ಧಾರ್ಮಿಕ ಸ್ವಾತಂತ್ರ್ಯದ ಬುನಾದಿಗಳನ್ನು ಸ್ಥಾಪಿಸಿದ್ದರೆಂದೆ-**ಲೈಸು ಸವಾಅನ್, ಮಿನ್ ಅಹ್ಲಿಲ್ ಕಿತಾಬಿ ಉಮ್ಮತುನ್ ಖಾಯಿಮತುಯ್ಯತ್‌ಲೂನ ಆಯಾತಿಲ್ಲಾಹಿ ಆನಾಅಲ್ಲೈಲಿ ವಹುಮ್ ಯಸ್ಜುದೂನ್** (ಆಲಿ ಇಮ್ರಾನ್-114)

ಅನುವಾದ: ಅವರು ಎಲ್ಲರೂ ಒಂದೇ ರೀತಿಯವರಲ್ಲ, ತಮ್ಮ ಒಡಂಬಡಿಕೆಯಲ್ಲಿ ಸ್ಥಿರತೆಯನ್ನು ತೋರಿಸುವ ಒಂದು ಗುಂಪು ಜನರು ಗ್ರಂಥದವರಲ್ಲಿದ್ದಾರೆ. ಅವರು ರಾತ್ರಿ ಸಮಯಗಳಲ್ಲಿ ಅಲ್ಲಾಹನ ವಚನಗಳನ್ನು ಓದುತ್ತಾರೆ ಮತ್ತು ಅವನ ಮುಂದೆ ಸಾಷ್ಟಾಂಗವೆಸಗುತ್ತಾರೆ.

ಹಝ್ರತ್ ಪೈಗಂಬರ್(ಸ) ರವರ ಇನ್ನೊಂದು ಧಾರ್ಮಿಕ ಸಮಾನತೆಯ ಒಂದು ದೊಡ್ಡ ಉದಾಹರಣೆ ನಮಗೆ **"ಮದೀನ ಒಡಂಬಡಿಕೆ"** ಯಿಂದ ತಿಳಿದುಬರುತ್ತದೆ. ಮದೀನ ಆಗಮಿಸಿದ ಮೇಲೆ ಪೈಗಂಬರರು(ಸ) ಮದೀನದ ಯಹೂದಿಯರೊಡನೆ ಒಂದು ಒಡಂಬಡಿಕೆ ಮಾಡಿಕೊಂಡರು. ಅದರ ಪ್ರಕಾರ ಮುಸಲ್ಮಾನರು ಮತ್ತು ಯಹೂದಿಯರೂ ಒಂದೇ ಸಮುದಾಯವಾದರು. ಹೀಗೆ ಯಹೂದಿಯರಿಗೆ ಮದೀನದಲ್ಲಿ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದರು. ಅವರ ಧಾರ್ಮಿಕ ಕಾನೂನುಗಳಂತೆಯೇ ಪೈಗಂಬರ್(ಸ) ನ್ಯಾಯ ತೀರ್ಮಾನ ಮಾಡುತ್ತಿದ್ದರು. ಪೈಗಂಬರ್(ಸ) ಯಹೂದಿಯರ

ಪಾಠಶಾಲೆಗೆ ಹೋಗಿ ಸಂಬೋಧಿಸಿದರು. ಅದೇ ರೀತಿಯಲ್ಲಿ ಯಹೂದಿಯರು ಪವಿತ್ರ ಮಸೀದಿಗೆ ಬಂದು ಪೈಗಂಬರ್(ಸ) ಬಳಿ ಬಂದು ತಮ್ಮ ಪ್ರಶ್ನೆಗಳಿಗೆ ಉತ್ತರ ಪಡೆಯುತ್ತಿದ್ದರು. ಅದೇ ರೀತಿ ಅವರು(ಸ) ಯಹೂದಿಯರ ಬಿನ್ನಹ ಸಹ ಸ್ವೀಕರಿಸುತ್ತಿದದರು. ಅದೇ ಪ್ರಕಾರ ಓರ್ವ ಸಾಮಾನ್ಯ ಯಹೂದಿಯ ಬಿನ್ನಹ ಸ್ವೀಕರಿಸಿ ಅವರ ರೊಟ್ಟಿ ಮತ್ತು ಪದಾರ್ಥ ಸ್ವೀಕರಿಸಿದರು. (ತಬಖಾತುಲ್ ಕುಬ್ರಾ ಲಿಇಬ್ನೆ ಸಾಅದ್, ಸಂಪುಟ-1, ಪುಟ 370-407)

ಅದೇ ರೀತಿಯಲ್ಲಿ ಪವಿತ್ರ ಖುರ್‌ಆನ್ ಅನ್ಯ ಧರ್ಮಿಯರ ಸ್ಥಾಪಕರನ್ನು ಮತ್ತು ಗುರುಗಳನ್ನು ಗೌರವಿಸಲು ಆದರಿಸಲು ಹಾಗೂ ಕೀಳಾದ ಶಬ್ಧಗಳನ್ನು ಬಳಸದಂತೆ ಉಪದೇಶ ನೀಡುತ್ತದೆ. ಅಂದಹಾಗೆ ಖುರ್‌ಆನ್ ಹೇಳುತ್ತದೆ.

**ವಲಾ ತಸುಬ್ಬುಲ್ಲಝೀನ ಯದ್‌ಊನ ಮಿನ್ ದೂನಿಲ್ಲಾಹಿ ಫಯಸುಬ್ಬುಲ್ಲಾಹ ಅದ್ವಮ್ ಬಿಗೈರಿ ಇಲ್‌ಮಿನ್, ಕಝಾಲಿಕ ಝೈಯನ್ನಾ ಲಿಕುಲ್ಲಿ ಉಮ್ಮತಿನ್ ಅಮಲಹುಮ್, ಸುಮ್ಮ ಇಲಾ ರಬ್ಬಿಹಿಮ್ ಮರ್‌ಜಿಉಹುಮ್ ಫಯುನಬ್ಬಿಉಹುಮ್ ಬಿಮಾ ಕಾನೂ ಯಾಅ್‌ಮಲೂನ್** (ಅಲ್-ಅನ್‌ಆಮ್-109) ಅನುವಾದ: ಅಲ್ಲಾಹನ ಹೊರತು ಅವರು ಕರೆದು ಪ್ರಾರ್ಥಿಸುವವರನ್ನು ನೀವು ಹೀಯಾಳಿಸಬೇಡಿರಿ. ಆಗ ವಿರೋಧದಿಂದ ಅವರು ಸಹ ತಿಳುವಳಿಕೆಯಿಲ್ಲದೆ ಅಲ್ಲಾಹನನ್ನು ನಿಂದಿಸುವರು. ಹೀಗೆ ನಾವು ಪ್ರತಿಯೊಂದು ಸಮುದಾಯದವರಿಗೂ ಅವರ ಕೃತ್ಯವನ್ನು ಚಲೋದಾಗಿ ತೋರಿಸಿಕೊಟ್ಟಿದ್ದೇವೆ. ಆ ಮೇಲೆ ಅವರ ಪ್ರಭುವಿನ ಬಳಿಗೆಯೇ ಅವರ ಮರಳಿಕೆಯಾಗಿದೆ. ಆಗ ಅವರ ಕೃತ್ಯಗಳ ಬಗ್ಗೆ ಅವರಿಗೆ ಅವನು ವಿವರಿಸಿಕೊಡುವನು.

ಹಝ್ರತ್ ಅಖದಸ್ ಮುಹಮ್ಮದ್ ಮುಸ್ತಫಾ(ಸ) ಅವರು ಧಾರ್ಮಿಕ ಸಹಿಷ್ಣುತೆಯ ಪ್ರಾಯೋಗಿಕ ಉದಾಹರಣೆಯಾಗಿದ್ದರು. ಮತ್ತು ಅವರು ಯಾವಾಗಲೂ ಧಾರ್ಮಿಕ ಸಹಿಷ್ಣುತೆಯನ್ನು ಸಮರ್ಥಿಸುತ್ತಿದ್ದು. ಆದ್ದರಿಂದ ಹಝ್ರತ್ ಅಬೂ ಹುರೈರ ವರದಿ ಮಾಡುತ್ತಾರೆ. ಇಬ್ಬರು ಪುರುಷರು ಪರಸ್ಪರ ನಿಂದಿಸಲು ಪ್ರಾರಂಭಿಸಿದರು, ಅವರಲ್ಲಿ ಒಬ್ಬ ಮುಸಲ್ಮಾನನಾಗಿದ್ದನು ಮತ್ತು ಒಬ್ಬ ಯಹೂದಿ ಮುಸ್ಲಿಮನು ಹೇಳಿದನು. ಮುಹಮ್ಮದ್(ಸ) ರವರನ್ನು ಎಲ್ಲ ಲೋಕಗಳಲ್ಲಿ ಸರ್ವಶ್ರೇಷ್ಠರಾಗಿ ಆಯ್ಕೆ ಮಾಡಿದವನು ಎಂದು ಅಲ್ಲಾಹನ ಆಣೆ ಮಾಡಿ ಹೇಳುತ್ತೇನೆ. ಆಗ ಯಹೂದಿಯನು ಹೇಳಿದನು. ಅಲ್ಲಾಹನಾಣೆ! ಅವನು ಮೂಸಾ(ಅ) ರವರನ್ನು ಎಲ್ಲಾ ಲೋಕಗಳಲ್ಲಿ ಶ್ರೇಷ್ಠರನ್ನಾಗಿ ಆಯ್ಕೆ ಮಾಡಿದನು. ಇದಾದ ಮೇಲೆ ಮುಸಲ್ಮಾನನು ಕೈ ಎತ್ತಿ ಯಹೂದಿಯನ್ನು ಕಪಾಳಮೋಕ್ಷ ಮಾಡಿದನು. ಯಹೂದಿ ಪ್ರವಾದಿ(ಸ) ರವರ ಬಳಿಗೆ ಬಂದು ದೂರನ್ನು ಸಲ್ಲಿಸಿದನು. ಆಗ ಪವಿತ್ರ ಪ್ರವಾದಿ(ಸ) ರವರು ಮುಸ್ಲಿಮನಿಗೆ ವಿವರಗಳನ್ನು ಕೇಳಿದರು. ಮತ್ತು ಆನಂತರ ಹೇಳಿದರು. **"ಲಾ ನುಖಯ್ಯಿರುನೀ ಅಲಾ ಮೂಸಾ"** ಎಂದರೆ ನನಗೆ ಮೂಸಾ(ಅ) ರವರಿಗಿಂತ ಆದ್ಯತೆ ನೀಡುವುದು ಬೇಡ.
(ಬುಖಾರಿ, ಕಿತಾಬುಲ್ ಖುಸೂಮಾತ್)

ನಮ್ಮ ಪ್ರೀತಿಯ ಇಮಾಮರು, ಸಯ್ಯದ್‌ನಾ ಹಝ್ರತ್ ಖಲಿಫತುಲ್ ಮಸೀಹ್(ಅಬಿಅ) ಮೇಲ್ಕಾಣಿಸಿದ ವರದಿ ಆಧರಿಸಿ ವಿವರ ನೀಡುತ್ತಾ ಹೇಳುತ್ತಾರೆ.:

ಹಝ್ರತ್ ಪೈಗಂಬರರು(ಸ) ತೋರಿದ ಆತ್ಮಸಾಕ್ಷಿ ಹಾಗೂ ಧಾರ್ಮಿಕ ಸ್ವಾತಂತ್ರ್ಯದ ಗುಣಮಟ್ಟ ಇದಾಗಿತ್ತು. ತನ್ನ ಸರಕಾರವಿದೆ. ಮದೀನಕ್ಕೆ ವಲಸೆ ಬಂದ ನತರ ಅವರು ಮದೀನದ ಬುಡಕಟ್ಟು ಜನರೊಡನೆ ಮತ್ತು ಯಹೂದಿಯರಲ್ಲಿ ಶಾಂತಿ ಸ್ಥಾಪಿಸಲು ಒಂದು ಒಡಂಬಡಿಕೆ ಮಾಡಿದ್ದರು. ಅದರ ಪ್ರಕಾರ ಮುಸಲ್ಮಾನರು ಬಹುಸಂಖ್ಯಾತರಿದ್ದರೂ ಅಥವಾ ಮುಸ್ಲಿಮರೊಂದಿಗೆ ಜನರು ಸೇರಿಕೊಂಡರು. ಕೆಲವರು ಮುಸಲ್ಮಾನರಾಗಿರಲಿಲ್ಲ, ಆದರೆ ಸರಕಾರ ಪೈಗಬರ್(ಸ) ಕೈವಶವಾಗಿತ್ತು. ಆದೆ ಸರಕಾರದ ಉದ್ದೇಶ ಬೇರೆ ಪ್ರಜೆಗಳಿಗೆ, ಬೇರೆ ಜನರ ಭಾವನೆಗಳಿಗೆ ಸ್ಪಂಧಿಸಬಾರದೆಂದಿರಲಿಲ್ಲ. ಪೈಗಂಬರರು(ಸ) ಎಲ್ಲಾ ಪ್ರವಾದಿಗಳಲ್ಲಿ ಸರ್ವಶ್ರೇಷ್ಠರು ಎಂಬ ಪವಿತ್ರ ಖುರ್‌ಆನ್‌ನ ಸಾಕ್ಷ್ಯವಿದ್ದಾಗಲೂ ಅವರು ಬೇರೆ ಪ್ರವಾದಿಗಳ ಸಲುವಾಗಿ ಶಾಂತಿಯನ್ನು ಕದಡಲು ಇಚ್ಛಿಸಲಿಲ್ಲ. ಅವರು (ಸ) ಆ ಯಹೂದಿಯ ಮಾತನ್ನು ಕೇಳಿ ಮುಸಲ್ಮಾನಿಗಿದೆಯೇ ಎಚ್ಚರಿಸಿದರು, ತಮ್ಮ ಜಗಳಗಳಲ್ಲಿ ನೀವು ಪ್ರವಾದಿಗಳನ್ನು ಎಳೆಯಬೇಡಿರಿ ಎಂದು. ನಿಮ್ಮ ದೃಷ್ಟಿಯಲ್ಲಿ ನಾನು ಎಲ್ಲಾ ಪ್ರವಾದಿಗಳಲ್ಲಿ ಶ್ರೇಷ್ಠನು ನಿಜ. ಅಲ್ಲಾಹನು ಅದಕ್ಕೆ ಸಾಕ್ಷಿ ನೀಡಿದ್ದಾನೆ. ಆದರೆ ನಮ್ಮ ಸರಕಾರದಲ್ಲಿ ಅವರ ಪ್ರವಾದಿಗೆ ಏನು ಹೇಳಿದರೆಂಬ ಕಾರಣಕ್ಕಾಗಿ ಮನನೋಯಿಸಬಾರದು ಎಂಬ ಕಾರಣಕ್ಕಾಗಿ ಹಾಗೆ ಹೇಳಲು ಸಾಧ್ಯವಿಲ್ಲ. ನಾನು ಅದಕ್ಕೆ ಅನುಮತಿ ಕೊಡುವುದಿಲ್ಲ. ನನ್ನನ್ನು ಗೌರವಿಸಬೇಕಾದರೆ ಇತರರ ಪೈಗಂಬರರನ್ನು ಸಹ ಗೌರವಿಸಬೇಕಾದೀತು.

ಇದಾಗಿತ್ತು ಪ್ರವಾದಿ ಮುಹಮ್ಮದ್(ಸ) ರವರ ನ್ಯಾಯ ಮತ್ತು ಸ್ವತಂತ್ರ್ಯದ ಗುಣಮಟ್ಟ, ತಮ್ಮವರ ಇತರರ ಎಲ್ಲರ ಗೌರವವನ್ನು ಸ್ಥಾಪಿಸಲು ಅವರು(ಸ) ಬದ್ಧರಾಗಿದ್ದರು. ಬದಲು ಕೆಲ ಸಂದರ್ಭಗಳಲ್ಲಿ ಇತರರ ಭಾವನೆಗಳನ್ನು ಹೆಚ್ಚು ಗೌರವಿಸುತ್ತಿದ್ದರು. (ಖುತ್ಬ ಜುಮುಅ, 10 ಮಾರ್ಚ್ 2006, ಅಲ್‌ಫಝಲ್ ಇಂಟರ್‌ನ್ಯಾಶ್ನಲ್ 31-03-2006, ಪುಟ-7)

ಸರ್ವಶಕ್ತನಾದ ಅಲ್ಲಾಹನು ನುಡಿಯುತ್ತಾನೆ: **"ಲಾ ಯನ್‌ಹಾಕುಮುಲ್ಲಾಹು ಅನಿಲ್ಲಝೀನ ಲಮ್ ಯುಖಾತಿಲೂ ಕುಮ್ ಫಿದ್ದೀನಿ ವಲಮ್ ಯುಖ್ರಿಜೂಕುಮ್ ಮಿನ್ ದಿಯಾರಿಕುಮ್ ಅನ್ ತಬರ್‌ರೂಹುಮ್ ವ ತುಖ್ಸಿತೂ ಇಲೈಹಿಮ್, ಇನ್ನಲ್ಲಾಹ ಯುಹಿಬ್ಬುಲ್ ಮುಖ್ಸಿತೀನ್"** (ಅಲ್-ಮುಮ್‌ತಹಿನ-9) ಅನುವಾದ: ಧರ್ಮದ ಕಾರಣದಿಂದ ನಿಮ್ಮೊಡನೆ ಯುದ್ಧ ಮಾಡದವರೊಡನೆ ಮತ್ತು ನಿಮ್ಮ ಮನೆಗಳಿಂದ ನಿಮ್ಮನ್ನು ಹೊರಗಟ್ಟದವರೊಡನೆ ನೀವು ಒಳಿತಿನಿಂದಲೂ ನ್ಯಾಯವಂತವಾಗಿಯೂ ವರ್ತಿಸುವುದನ್ನು ಅಲ್ಲಾಹನು ನಿಮಗೆ ವಿರೋಧಿಸುವುದಿಲ್ಲ. ಖಂಡಿತವಾಗಿಯೂ ನ್ಯಾಯಪಾಲಿಸುವವರನ್ನು ಅಲ್ಲಾಹನು ಪ್ರೀತಿಸುತ್ತಾನೆ.

ಇಸ್ಲಾಮ್ ಧರ್ಮವು ಶತ್ರು ಪಕ್ಷದಿಂದ ಹಿಂಸಿಸಲ್ಪಟ್ಟರೂ ಶಾಂತಿಸ್ಥಾಪನೆಗೋಸ್ಕರ ಅದರ ತಕ್ಕಷ್ಟೇ ಸೇಡು ತೀರಿಸಲು ಅನುಮತಿ ನೀಡಿದೆಯಾದರೂ ಹೇಳಿದೆ. ಕ್ಷಮೆಯನ್ನು ನೀಡಿದರೆ ಅಲ್ಲಾಹನಿಗೆ ಅದು ಹೆಚ್ಚು ಇಷ್ಟದ ಕಾರ್ಯವಾಗಿದೆ. ಅಲ್ಲಾಹನು ಹೇಳುತ್ತಾನೆ.

**ವಜಝಾಉ ಸೈಯಿಅತುನ್ ಸೈಯಿಅತುನ್ ಮಿಸ್ಲುಹಾ; ಓಮನ್ ಅಫಾ ವ ಅಸ್ಲಹ ಫಅಜ್ರುಹೂ ಅಲಲ್ಲಾಹ್, ಇನ್ನಹೂ ಲಾ ಯಿಹಿಬ್ಬು ಝ್ಝಾಲಿಮೀನ್** (ಅಶ್ಶೂರಾಅ-4) ಅನುವಾದ: ಕೆಡುಕಿರುವ ಪ್ರತಿಫಲ ಅದಕ್ಕೆ ಸಮಾನವಾದ ಕೆಡುಕಾಗಿದೆ. ಆದರೆ ಯಾರಾದರೂ ಕ್ಷಮೆ ನೀಡಿದರೆ ಮತ್ತು ಅದರ ಪರಿಣಾಮವಾಗಿ ಒಳಿತುಂಟಾದರೆ ಅದರ ಪ್ರತಿಫಲ ಅವನಿಗೆ ಅಲ್ಲಾಹನಿಂದ ಲಭಿಸುವುದು. ದಿಟವಾಗಿಯೂ ಅವನು ದುಷ್ಕರ್ಮಿಗಳನ್ನು ಪ್ರೀತಿಸುವುದಿಲ್ಲ.

ಅಲ್ಲಾಹನ ಪವಿತ್ರವಾದ ನುಡಿ ಹೀಗಿದೆ. **ಯಾ ಅಯ್ಯುಹನ್ನಾಸು ಇನ್ನಾ ಖಲಖ್ನಾಕುಮ್ ಮಿನ್ ಝುಕರಿಂ ವ ಉನ್ಸಾ ವ ಜಅಲ್‌ನಾಕುಮ್ ಶುಊಬಂ ವ್ವಖಬಾಎಲ ಲಿತಆರಫೂ; ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್, ಇನ್ನಲ್ಲಾಹ ಅಲೀಮುನ್ ಖಬೀರ್** (ಅಲ್-ಹುಜುರಾತ್-14)

ಅನುವಾದ: ಎಲೈ ಮನುಷ್ಯರೇ, ನಾವು ನಿಮ್ಮನ್ನು ಗಂಡು ಮತ್ತು ಹೆಣ್ಣಿನಿಂದ ಸೃಷ್ಟಿಸಿದೆವು. ನೀವು ಪರಸ್ಪರ ಗುರುತಿಸಲ್ಪಡಲಿಕ್ಕಾಗಿ ನಿಮ್ಮನ್ನು ಕುಲಗಳನ್ನಾಗಿಯೂ ಗೋತ್ರಗಳನ್ನಾಗಿಯೂ ಮಾಡಿರುವೆವು. ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರಹರ್ನು. ದಿಟವಾಗಿಯೂ ಅಲ್ಲಾಹನು ಸರ್ವಜ್ಞನೂ ಎಲ್ಲ ಅರಿತವನೂ ಆಗಿದ್ದಾನೆ.

ಹಝ್ರತ್ ರಸೂಲುಲ್ಲಾಹ್(ಸ) ಸಾರ್ವಜನಿಕವಾಗಿ ಹೀಗೆ ಘೋಷಿಸಿದರು. **ಯಾ ಅಯ್ಯುಹನ್ನಾಸು ಅಲಾ ಇನ್ನ ರಬ್ಬಕುಮ್ ವಾಹಿದುನ್ ವ ಇನ್ನ ಆಬಾಕುಮ್ ವಾಹಿದುನ್, ಅಲಾ ಲಾ ಫಝ್ಲ ಲಿಅರಬ್ಬಿ ಅಲ ಅಅ್‌ಜಮೀಯ್ಯ ವಲಾ ಲಿಅಅ್‌ಜಮೀಯ್ಯಿ ಅಲ ಅರಬ್ಬಿಯು ಲಿಅಹ್ಮರ ಅಲ ಅಸ್ವದ ವಲಾ ಅಸ್ವದ ಅಲಾ ಅಹ್ಮರ ಇಲ್ಲಾ ಬಿತ್ತಖ್ವಾ** (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-5, ಪುಟ-411, ದಾರುಲ್ ಫಿಕರ್ ಬೈರೂತ್ 23536)

ಓ ಜನರೇ! ನಿಮ್ಮ ಪ್ರಭು ಒಬ್ಬನೇ ಮತ್ತು ನಿಮ್ಮ ತಂದೆಯು ಒಬ್ಬನಾಗಿದ್ದಾನೆ. ಯಾವ ಅರಬಿಯೊಬ್ಬನಿಗೆ ಅರಬಿಯೇತರ ಮೇಲೆ

ಮತ್ತು ಯಾವ ಅರಬಿಯೆತರಿನ ಯಾವ ರೀತಿಯ ಶ್ರೇಷ್ಠತೆಯೂ ಇಲ್ಲ. ಕಪ್ಪು ವ್ಯಕ್ತಿಯೊಬ್ಬನ ಮೇಲೆ ಕೆಂಪು ವ್ಯಕ್ತಿಗೆ ಮತ್ತು ಒಬ್ಬ ಕೆಂಪಾದವನಿಗೆ ಕಪ್ಪು ವ್ಯಕ್ತಿಯ ಮೇಲೆ ಯಾವ ಶ್ರೇಷ್ಠತೆಯೂ ಇಲ್ಲ. ಸಾತ್ವಿಕತೆಗೆ ಮಾತ್ರ ಶ್ರೇಷ್ಠತೆ ಇದೆ.

ಈ ಪೈಕಿ ಹಝ್ರತ್ ಖಲೀಫ಼ತುಲ್ ಮಸೀಹ್ ಖಾಮಿಸ್(ಅಬಿಅ) ಹೇಳುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ತನ್ನ ಕೊನೆಯ ಧರ್ಮೋಪನೀಶತ್‌ನಲ್ಲಿ ಎಲ್ಲಾ ಮುಸಲ್ಮಾನರಿಗೆ ಆಜ್ಞಾಪಿಸಿದರು. ನೀವು ಸದಾ ನೆನಪಿಡಿರಿ, ಯಾವುದೇ ಅರೇಬಿಯನಿಗೆ ಅರೇಬಿಯೆತರ ಮೇಲೆ ಯಾವ ಶ್ರೇಷ್ಠತೆಯೂ ಇಲ್ಲ. ಅಲ್ಲದೇ ಯಾವ ಅರೇಬಿಯೇತರನಿಗೆ ಅರೇಬಿಯನ ಮೇಲೆ ಯಾವ ಶ್ರೇಷ್ಠತೆ ಇಲ್ಲ, ಅವರು ಬೋಧಿಸಿದರು: ಶ್ವೇತವರ್ಣೀಯನಿಗೆ ಕರಿಯನಿಗಿಂತ ಶ್ರೇಷ್ಠತೆ ಇಲ್ಲ, ಕಪ್ಪು ವ್ಯಕ್ತಿಗೆ ಬಿಳಿಯನಿಗಿಂತ ಶ್ರೇಷ್ಠತೆ ಇಲ್ಲ. ಆದ್ದರಿಂದ ಎಲ್ಲಾ ರಾಷ್ಟ್ರಗಳು ಮತ್ತು ಜನಾಂಗಗಳ ಜನರು ಸಮಾನರು ಎಂಬುದು ಇಸ್ಲಾಮಿನ ಸ್ಪಷ್ಟ ಬೋಧನೆಯಾಗಿದೆ. ತಾರತಮ್ಯ ಮತ್ತು ಪೂರ್ವಗ್ರಹವಿಲ್ಲದೆ ಎಲ್ಲಾ ಜನರು ಸಮಾನ ಹಕ್ಕುಗಳನ್ನು ಪಡೆಯಬೇಕು ಎಂದು ಅವರು ಸ್ಪಷ್ಟಪಡಿಸಿದರು. ಇದು ಅಂತರರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದತೆಗೆ ಆಧಾರವಾಗಿರುವ ಮೂಲಭೂತ ಮತ್ತು ಸುವರ್ಣ ತತ್ವವಾಗಿದೆ. (ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ, ಪುಟ-75)

ಹಝ್ರತ್ ಪೈಗಂಬರ್(ಸ) ಯಹೂದಿ ತಂಡದ ಕೂಟಗಳಿಗೆ ಹಾಜರಾಗುತ್ತಿದ್ದರೆ, ಅವರನ್ನು ಚೆನ್ನಾಗಿ ನಡೆಸಿಕೊಳ್ಳುತ್ತಿದ್ದರು. ಆದ್ದರಿಂದ ಒಬ್ಬ ಯಹೂದಿ ಪ್ರವಾದಿ(ಸ) ರ ಸಭೆಯಲ್ಲಿ ಸೀನಿದರೆ, ಅಲ್ಲಾಹನು ನಿಮಗೆ ಮಾರ್ಗದರ್ಶನ ನೀಡಲಿ ಮತ್ತು ನಿಮ್ಮ ಸ್ಥಿತಿಯನ್ನು ಸುಧಾರಿಸಲಿ ಎಂದು ಪ್ರಾರ್ಥಿಸುತ್ತಿದ್ದರು. (ಅಲ್ ಖಸಾಯಸ್ ಅಲ್‌ಕುಬ್ರ ಲಿಸ್ಸುಯೂತಿ, ಭಾಗ-2, ಪುಟ-167, ಬೂರೂತ್)

ಹಝ್ರತ್ ರಸೂಲುಲ್ಲಾಹ್(ಸ) ಯಹೂದಿಗಳಲ್ಲಿ ಒಬ್ಬರು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದು ತಿಳಿದುಬಂದರೆ. ಅವರನ್ನು ಉಪಚರಿಸಲು ಅವರ ಮನೆಗೆ ಹೋಗುತ್ತಿದ್ದರು. ಆದ್ದರಿಂದ ಅವರು ಮದೀನಾದಲ್ಲಿ ಒಬ್ಬ ಯಹೂದಿಯ ಮನೆಯಲ್ಲಿ, ಮನೆಯ ಸೇವಕನ ಅನಾರೋಗ್ಯ ಉಪಚರಿಸಲು ಸ್ವಯಂ ಅವರ ಮನೆಗೆ ತೆರಳಿದರು. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-3, ಪುಟ-175)

ಪವಿತ್ರ ಪ್ರವಾದಿ(ಸ) ಅವರು ಅನ್ಯಧರ್ಮದ ಜನರ ಶವವನ್ನು ಸಹ ಗೌರವಿಸುತ್ತಿದ್ದರು. ಅದೇ ರೀತಿಯಲ್ಲಿ ಅವರು ಮಾನವೀಯ ಮೌಲ್ಯಗಳನ್ನು ಮತ್ತು ಗೌರವವನ್ನು ಸ್ಥಾಪಿಸಿದರು. ಹಝ್ರತ್ ಅಬ್ದುರ್‌ರಹ್ಮಾನ್ ಬಿನ್ ಅಬೀ ಲೈಲ ಹೇಳುತ್ತಾರೆ, ಸಹಲ್ ಬಿನ್ ಹನೀಫ್ ಮತ್ತು ಖೈಸ್ ಬಿನ್ ಸಅದ್ ಖಾದ್ಸಿಯಾ ಅವರ ಸ್ಥಳದಲ್ಲಿ ಕುಳಿತಿದ್ದರು, ಅವರ ಬಳಿಯಿಂದ ಅಂತ್ಯಕ್ರಿಯೆಯ ಮೆರವಣಿಗೆಗೆ ಹಾದು ಹೋದಾಗ ಅವರಿಬ್ಬರೂ ಎದ್ದು ನಿಂತರು. ಅವರು ಧ್ಮಿಮ್ಮಿ (ಇಸ್ಲಮಿ ರಾಷ್ಟ್ರದ ಮುಸ್ಲಿಮೇತರ ಪ್ರಜೆ) ಗಳಿಂದ ಎಂದು ಹೇಳಿದಾಗ, ಅವರಿಬ್ಬರೂ ಹೇಳಿದರು. ಒಂದು ಸಂದರ್ಭದಲ್ಲಿ ಪ್ರವಾದಿ(ಸ) ರವರ ಬಳಿಯಿಂದ ಒಂದು ಅಂತ್ಯಕ್ರಿಯೆಯ ಮೆರವಣಿಗೆ ಹಾದು ಹೋದಾಗ ಪ್ರವಾದಿ(ಸ) ಗೌರವ ಸೂಚಿಸಲು ಎದ್ದು ನಿಂತರು, ಅದು ಯಹೂದಿಯ ಅಂತ್ಯಕ್ರಿಯೆಯ ಮೆರವಣಿಗೆಯಾಗಿದೆ ಎಂದು ತಿಳಿಸಲಾಯಿತು. ಆಗ ಪ್ರವಾದಿ(ಸ) ಹೇಳಿದರು. **"ಅಲೈಸತು ನಫ್‌ಸನ್** ಅವನು ಮನುಷ್ಯನಲ್ಲವೇ? (ಬುಖಾರಿ, ಕಿತಾಬುಲ್ ಜನಾಏಝ್)

ನಮ್ಮ ಪ್ರೀತಿಯ ಇಮಾಮರು ಸಯ್ಯದನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ತನ್ನ ಖುತ್‌ಬ ಜುಮುಅ 10 ಮಾರ್ಚ್ 2006 ರಲ್ಲಿ ಮೇಲೆ ವಿವರಿಸಿದ ಘಟನೆ ವಿವರಿಸಿದ ನಂತರ ಹೇಳಿದರು. **"**...ಆದ್ದರಿಂದ ಇದು ಇತರ ಧರ್ಮಗಳಿಗೆ ಮತ್ತು ಮಾನವೀಯತೆಗೆ ಗೌರವವಾಗಿದೆ. ಈ ಅಭಿವ್ಯಕ್ತಿಗಳು ಮತ್ತು ಮಾದರಿಗಳು ಧಾರ್ಮಿಕ ಸಹಿಷ್ಣುತೆಯ ವಾತಾವರಣವನ್ನು ಸೃಷ್ಟಿಸುತ್ತವೆ. ಇವುಗಳು ಪರಸ್ಪರ ಮೃದುವಾದ ಭಾವನೆಗಳನ್ನು ಉಂಟುಮಾಡುವ ಅಭಿವ್ಯಕ್ತಿಗಳು, ಇದರಿಂದ ಪ್ರೀತಿ, ಪ್ರೇಮ ಮತ್ತು ಶಾಂತಿಯ ವಾತಾವರಣ ಸೃಷ್ಟಿಯಾಗುತ್ತದೆ. ಇಂದಿನ ಲೌಕಿಕವಾದಿಗಳ ಕ್ರಿಯೆಗಳಿಗೆ ದ್ವೇಷದ ವಾತಾವರಣ ಸೃಷ್ಟಿಯಾಗದೇ ಬೇರೇನೂ ಇಲ್ಲ.**"**

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಆದ್ದರಿಂದ ಗ್ರಂಥದ ಜನರು (ಯಹೂದಿ) ಮತ್ತು ಬಹುದೇವತಾವಾದಿಗಳಿಂದ ಅವರಿಬ್ಬರು ತುಂಬಾ ಕೆಟ್ಟದಾಗಿ ಬಿಟ್ಟಿದ್ದರು. ದುಷ್ಕರ್ಮಗಳಿಗೂ ಸಹ ಸತ್ಕರ್ಮ ಮಾಡಿದ್ದೇವೆ ಎಂದು ಭಾವಿಸುತ್ತಿದ್ದರು. ಯಾವ ಅಪರಾಧವನ್ನು ಜರುಗಿಸುವುದಕ್ಕೆ ಹಿಂಜರಿಯುತ್ತಿರಲಿಲ್ಲ. ಶಾಂತಿಭಂಗ ತರುವುದು ಅವರ ಹವ್ಯಾಸವಾಗಿತ್ತು. ಅಂತಹ ಸಮಯದಲ್ಲಿ ಸರ್ವಶಕ್ತನಾದ ಅಲ್ಲಾಹನು ಪ್ರವಾದಿ(ಸ) ರವರ ಕೈಯಲ್ಲಿ ಅಧಿಕಾರವನ್ನು ನೀಡಿ ಬಡವರನ್ನು ರಕ್ಷಿಸಬಯುಸಿದನು. ಅರಬ್ ದೇಶವು ಅರಾಜಕತೆಯಿಂದ ತುಂಬಿ ಹೋಗಿತ್ತು. ಅವರು ಯಾವ ಆಡಳಿತಕ್ಕೂ ಒಳಗಾಗಿರಲಿಲ್ಲ. ಆದ್ದರಿಂದ ಪ್ರತಿಯೊಂದು ಪಂಗಡವು ಮುಕ್ತವಾಗಿ ಮನಬಂದಂತೆ ನಿರ್ಭಿತಿಯಿಂದ ಜೀವನ ಕಳೆಯುತ್ತಿದ್ದರು. ಅವರಿಗೆ ಶಿಕ್ಷೆ ನೀಡುವ ಯಾವ ಕಾನೂನು ಇರಲಿಲ್ಲ. ಆದ್ದರಿಂದ ದಿನೇ ದಿನೇ ಅಪರಾಧಗಳು ಹೆಚ್ಚಾಗುತ್ತಿತ್ತು. ಹಾಗೆ ಅಲ್ಲಾಹನು ಆ ದೇಶದ ಮೇಲೆ ಕೃಪೆದೋರಿ ಪ್ರವಾದಿ ಮುಹಮ್ಮದ್(ಸ) ಅವರನ್ನು ಕೇವಲ ಆ ದೇಶಕ್ಕೆ ಸಂದೇಶವಾಹಕರನ್ನಾಗಿ ಕಳುಹಿಸಲಿಲ್ಲ. ಬದಲು ಆ ದೇಶದ ರಾಜನಾಗಿಯೂ ಮಾಡಿದನು. ಮತ್ತು ಪವಿತ್ರ ಖುರ್‌ಆನ್‌ನ್ನು ಸಿವಿಲ್, ಕ್ರಿಮಿನಲ್ ಮತ್ತು ಆರ್ಥಿಕ ಸೂಚನೆಗಳನ್ನು ನೀಡುವ ಕಾನೂನಿನಂತೆ ಪೂರ್ಣಗೊಳಿಸಿದನು. ಆದ್ದರಿಂದ ಪ್ರವಾದಿ ಮುಹಮ್ಮದ್(ಸ) ರಾಜರಾಗಿ ಎಲ್ಲಾ ಪಂಡಗಳ ಆಡಳಿತಗಾರರಾದರು. ಕಾರಣ ಪ್ರತಿಯೊಂದು ಧರ್ಮದವರು ಅವರೊಂದಿಗೆ ತಮ್ಮ ಪ್ರಕರಣಗಳನ್ನು ನಿರ್ಧರಿಸುತ್ತಿದ್ದರು. ಒಮ್ಮೆ ಮುಸ್ಲಿಂ ಮತ್ತು ಯಹೂದಿಗಳ ನಡುವೆ ಪ್ರಕರಣ ಒಂದು ನಡೆಯಿತು. ತನಿಖೆಯ ನಂತರ ಯಹೂದಿಯ ಪರವಾಗಿ ನಿರ್ಣಯ ಕೊಟ್ಟರು. ಮತ್ತು ಮುಸ್ಲಿಮರನ್ನು ತಪ್ಪಿತಸ್ಥ ಎಂದು ನಿರ್ಣಯ ಕೊಟ್ಟರು. ಆದ್ದರಿಂದ ಪವಿತ್ರ ಖುರಆನ್ ಓದದ ಕೆಲವು ಅಜ್ಞನ ವಿರೋಧಿಗಳು ಎಲ್ಲಾ ವಿಷಯಗಳನ್ನು ಪ್ರವಾದಿ(ಸ) ರವರ ಪ್ರವಾದಿತ್ವದ ಸಂಬಂದ ಜೋಡಿಸುತ್ತಾರೆ. ಅದಾಗ್ಯೂ ಇಂತಹ ಶಿಕ್ಷೆಗಳು ಖಿರಾಫತ್ ಎಂದರೆ ರಾಜಪ್ರಭುತ್ವ ನೆಲೆಯಲ್ಲೇ ಕೊಡಲಾಗುತ್ತಿತ್ತು.

ಬನೀ ಇಸ್ರೇಲ್‌ನಲ್ಲಿ ಹಝ್ರತ್ ಮೂಸಾ(ಅ) ನಂತರ ಪ್ರವಾದಿಗಳು ಮತ್ತು ರಾಜರು ಪ್ರತ್ಯೇಕವಾಗುತ್ತಿದ್ದರು. ರಾಜರು ರಾಜಕೀಯ ವ್ಯವಹಾರಗಳ ಮೂಲಕ ಶಾಂತಿಯನ್ನು ಕಾಪಾಡುತ್ತಿದ್ದರು. ಆದರೆ ಪ್ರವಾದಿ ಮುಹಮ್ಮದ್(ಸ) ರವರ ಸಮಯದಲ್ಲಿ ಈ ಎರಡು ವ್ಯವಹಾರಗಳನ್ನು ಅವರೇ ನೋಡಿಕೊಳ್ಳುವಂತೆ ಅಧಿಕಾರ ನೀಡಿದ್ದನು. ಅಪರಾಧಿಗಳನ್ನು ಬೇರೆಯಾಗಿ ನೋಡಿಕೊಳ್ಳುತ್ತಿದ್ದರು. ಉಳಿದ ಜನರೊಂದಿಗೆ ಬೇರೆ ರೀತಿಯಾಗಿ ವರ್ತಿಸುತ್ತಿದ್ದರು. ಅದು ಈ ಕೆಳಗಿನ ವಚನದಿಂದ ಸ್ಪಷ್ಟವಾಗುತ್ತದೆ. **ವಖುಲ್ಲಿಲ್ಲಝೀನ ಊತುಲ್ ಕಿತಾಬ ವಲ್ ಉಮ್ಮೀಈನ ಅಅಸ್ಲಮ್‌ತುಮ್, ಫಇನ್ ಅಸ್ಲಮೂ ಫಖದಿಹ್‌ತದೌ; ವ ಇನ್ ತವಲ್ಲೌ ಫಇನ್ನಮಾ ಅಲೈಕಲ್ ಬಲಾಘ್** (ಆಲಿ-ಇಮ್ರಾನ್-21) ಅನುವಾದ: ಗ್ರಂಥ ನೀಡಲ್ಪಟ್ಟವರೊಡನೆ ಮತ್ತು ಅನಕ್ಷರಸ್ಥರೊಡನೆ ನೀವು ಸಹ ಅಲ್ಲಾಹನಿಗೆ ಸ್ವಯಂ ಅರ್ಪಿಸಿಕೊಂಡಿರುವಿರೋ? ಎಂದು ಕೇಳು. ಅವರು ಹಾಗೆ ಅರ್ಪಿಸಿದರೆ ಅವರು ಸತ್ಯಪಥವನ್ನು ಹೊಂದಿದರು ಎಂದು ತಿಳಿದುಕೋ. ಆದರೆ ಅವರು ಮುಖ ತಿರುಗಿಸಿದರೆ, ಸಂದೇಶವನ್ನು ತಲುಪಿಸುವುದು ಮಾತ್ರ ನಿನ್ನ ಕರ್ತವ್ಯವಾಗಿದೆ. ಅಲ್ಲಾಹನು ತನ್ನ ದಾಸರ ಸ್ಥಿತಿಗಳನ್ನು ಚೆನ್ನಾಗಿ ಕಾಣುತ್ತಿದ್ದಾನೆ. ಈ ವಚನದಲ್ಲಿ ಅವರೊಡನೆ ಯುದ್ಧ ಮಾಡುವುದು ಸಹ ನಿಮ್ಮ ಕೆಲಸವಾಗಿದೆ ಎಂದು ಹೇಳಲಾಗಿಲ್ಲ. ಯುದ್ಧವು ಮುಸ್ಲಿಮರನ್ನು ಕೊಲ್ಲುವ ಅಥವಾ ಸಾರ್ವಜನಿಕ ಶಾಂತಿಗೆ ಭಂಗ ತರುವ ಮತ್ತು ಕಳ್ಳತನ ಮತ್ತು ದರೋಡೆಯಲ್ಲಿ ತೊಡಗಿರುವ ಅಪರಾಧಿಗಳಿಗೆ ಈ ಯುದ್ಧ. ಈ ಯುದ್ಧವು ಸಂದೇಶವಾಹಕನ ನೆಲೆಯಲ್ಲಿ ಆಗದೆ ರಾಜನ ನೆಲೆಯಲ್ಲಿ ಆಗುತ್ತಿತ್ತು. ಉದಾಹರಣೆಗೆ ಅಲ್ಲಾಹನು ಹೇಳುತ್ತಾನೆ. **"ವಖಾತಿಲೂ ಫೀ ಸಬೀಲಿಲ್ಲಾಹಿಲ್ಲಝೀನ ಯುಖಾತಿಲೂನಕುಮ್ ವಲಾ ತಅ್‌ತದೂ, ಇನ್ನಲ್ಲಾಹ ಲಾ ಯುಹಿಬ್ಬುಲ್ ಮುಅ್‌ತದೀನ್"** (ಅಲ್-ಬಖರ-191) ಅನುವಾದ: ನಿಮ್ಮ ವಿರುದ್ಧ ಯುದ್ಧ ಮಾಡುವವರೊಡನೆ ಅಲ್ಲಾಹನ ಮಾರ್ಗದಲ್ಲಿ ನೀವು ಸಹ ಯುದ್ಧ ಮಾಡಿರಿ. ಆದರೆ ಅತಿಕ್ರಮಣ

***(ಪುಟ ಸಂಖೆ 22 ರಲ್ಲಿ ಮುಂದುವರಿಸಲಾಗಿದೆ)***

# ಪವಿತ್ರ ಖುರ್‌ಆನ್‌ನಲ್ಲಿ ಜಾಗತಿಕ ಶಾಂತಿಯ ಬೋಧನೆಗಳು

## (ವಿಶೇಷವಾಗಿ ನ್ಯಾಯಯುತ ಬೋಧನೆಗಳ ಬೆಳಕಿನಲ್ಲಿ)

(ಜಾವೇದ್ ಅಹ್ಮದ್ ಲೋನ್, ನಾಝಿರ್ ದೀವಾನ್ ಖಾದಿಯಾನ್)

ಆತ್ಮೀಯ ಓದುಗರೇ! ಯಾವುದೇ ಸಮಾಜದಲ್ಲಿ ಲೌಕಿಕ ಪ್ರಗತಿ ಮತ್ತು ನೈತಿಕ ಮೌಲ್ಯಗಳ ಬಲವರ್ಧನೆಯು ನಿಜವಾದ ಶಾಂತಿಯ ಸ್ಥಾಪನೆಯ ಮೇಲೆ ಅವಲಂಬಿತವಾಗಿರುತ್ತದೆ ಎಂದು ನಮಗೆ ತಿಳಿದಿದೆ. ಶಾಂತಿ ನೆಲೆಸಿದರೆ ಜನರಲ್ಲಿ ಭದ್ರತೆಯ ಭಾವನೆ ಉಳಿದು ಸಮಾನತೆಯಿಂದ ಎಲ್ಲ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಸಾಧ್ಯವಾಗುತ್ತದೆ. ಶಾಂತಿ ಸ್ಥಾಪನೆಯಾದರೆ ಆರ್ಥಿಕತೆ ಮತ್ತು ವ್ಯಾಪಾರದ ಚಕ್ರ ಸುಗಮವಾಗಿ ಸಾಗುತ್ತದೆ. ಸಂಶೋಧನೆಯ ಹೊಸ ಮಾರ್ಗಗಳು ಶಾಂತಿ ನಿರ್ಮಾಣಕ್ಕೂ ಸಂಬಂಧಿಸಿವೆ. ಶಾಂತಿಯುತ ಸಮಾಜವು ಹೊಸ ಪೀಳಿಗೆಯ ಜ್ಞಾನಾಭಿವೃದ್ಧಿಗೆ ಅಡಿಪಾಯವನ್ನು ಒದಗಿಸುತ್ತದೆ. ಅಶಾಂತಿ ಹೊಂದಿರುವ ಸಮಾಜಗಳು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ನೈತಿಕವಾಗಿ ಧ್ವಂಸಗೊಳ್ಳುವುದಲ್ಲದೆ, ಅದರ ಪರಿಣಾಮವಾಗಿ ಅವರು ಆಧ್ಯಾತ್ಮಿಕ ಅವನತಿಯಲ್ಲಿ ತಮ್ಮ ಉದಾಹರಣೆಯನ್ನು ಸಹ ಹೊಂದಿಸುತ್ತಾರೆ. ಆದ್ದರಿಂದ ಪ್ರತಿ ಹಂತದಲ್ಲೂ ಪಿತೂರಿತನವನ್ನು ನಿರ್ಮೂಲನೆ ಮಾಡಲು ಮತ್ತು ನಮ್ಮ ಪರಿಸರದಲ್ಲಿ ನಿಜವಾದ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುವುದು ಎಷ್ಟು ಮುಖ್ಯ.

ಇಂದು ಜಗತ್ತು ಹುಡುಕುತ್ತಿರುವ ನ್ಯಾಯವು ಹೇಗೆ ಅನುಗ್ರಹಿಸಲ್ಪಡುತ್ತದೆ? ಇದು ಒಂದು ಪ್ರಮುಖ ಮತ್ತು ಕಷ್ಟಕರವಾದ ಪ್ರಶ್ನೆಯಾಗಿದೆ, ಇದಕ್ಕೆ ಸರಳವಾದ ಉತ್ತರವೆಂದರೆ ಹಸಿವಿನಿಂದ ಬಳಲುತ್ತಿರುವ ವ್ಯಕ್ತಿಯ ಹಸಿವನ್ನು ಕೇವಲ ರೊಟ್ಟಿ ಅಥವಾ ಆಹಾರವನ್ನು ನೀಡುವುದು ಎಂದು ಬಾಯಿಮಾತಿನಿಂದ ಹೇಗೆ ತಣಿಸಲಾಗುವುದಿಲ್ಲವೋ ಹಾಗೆಯೇ ನ್ಯಾಯದ ಪೊಳ್ಳು ಘೋಷಣೆಗಳಿಂದ ಅಥವಾ ಅಂತರರಾಷ್ಟ್ರೀಯ ನ್ಯಾಯಾಲಯವನ್ನು ಸ್ಥಾಪಿಸುವುದರ ಮೂಲಕ ನ್ಯಾಯವನ್ನು ಸ್ಥಾಪಿಸಲಾಗುವುದಿಲ್ಲ. ಸಹಜವಾಗಿ, ತಾರತಮ್ಯವಿಲ್ಲದೆ ನ್ಯಾಯ ಮತ್ತು ನ್ಯಾಯಸಮ್ಮತತೆಯನ್ನು ಆಧರಿಸಿದ ಕಾನೂನುಗಳು ಮತ್ತು ಅವುಗಳ ಅನುಷ್ಠಾನದ ಖಚಿತವಾದ ನಿಯಮಗಳ ಪರಿಣಾಮವಾಗಿ ಅಂತರರಾಷ್ಟ್ರೀಯ ನ್ಯಾಯ ಸ್ಥಾಪನೆಯು ಸಾಧ್ಯವಗಬಹುದು, ಅದರ ಅದ್ಭುತ ಉದಾಹರಣೆಯನ್ನು ಇಂದಿನಿಂದ 1400 ವರ್ಷಗಳ ಮುಂಚೆ ಇಸ್ಲಾಮ್ ಧರ್ಮದ ಸಂಸ್ಥಾಪಕರು(ಸ) ಜಗತ್ತಿಗೆ ತೋರಿಸಿದ್ದಾರೆ.

ದೈವಿಕ ವಿಧಿಯ ಪ್ರಕಾರ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಆಗಮನವು ಅರೇಬಿಯಾದ ಭೂಮಿಯಲ್ಲಾಯಿತು. ಅಲ್ಲಿ ಎಲ್ಲಾ ರೀತಿಯ ಅಸಂಯಮ, ಹಿಂಸಾಚಾರ ಮತ್ತು ದೌರ್ಜನ್ಯಗಳು ನಡೆಯುತ್ತಲೇ ಇತ್ತು. ಹಝ್ರತ್ ಪೈಗಂಬರ್(ಸ) ಅವರು ಹಿಂಸಾಚಾರದಿಂದ ತುಂಬಿದ್ದ ಅರಬ್ ದ್ವೀಪವನ್ನು ನ್ಯಾಯದ ತೊಟ್ಟಿಲನ್ನಾಗಿ ಮಡಿ ಇಡೀ ಪ್ರಪಂಚದ ಮುಂದೆ ಇಸ್ಲಾಮಿ ಆಡಳಿತದ ಒಂದು ಸುಂದರ ಮಾದರಿಯನ್ನು ತೋರಿಸಿದರು. ಇದರಲ್ಲಿ ಒಂದೆಡೆ, ತುಳಿತಕ್ಕೊಳಗಾದ ಮಹಿಳೆಯರನ್ನು ಹಿಂಸಾಚಾರದಿಂದ ಮುಕ್ತಗೊಳಿಸಲಾಯಿತು. ಮತ್ತೊಂದೆಡೆ, ತುಳಿತಕ್ಕೊಳಗಾದ ಗುಲಾಮರಿಗೆ ಅವರ ಹಕ್ಕುಗಳನ್ನು ನೀಡಲಾಯಿತು, ಅವರು ಮನೆಯ ಆರಂಭಿಕ ಹಂತದಲ್ಲಿ ನ್ಯಾಯವನ್ನು ಪ್ರಾರಂಭಿಸಿದರು, ನಂತರ ಅವರು ನೆರೆಹೊರೆ, ನಗರ, ದೇಶ ಮತ್ತು ಜಾಗತಿಕ ಮಟ್ಟದಲ್ಲಿ ನ್ಯಾಯವನ್ನು ಸ್ಥಾಪಿಸಿದರು. ಮನೆಯ ಹಂತದಲ್ಲಿ, ಅವರು ಪೋಷಕರು, ಮಕ್ಕಳು, ಸಂಬಂಧಿಕರು, ಮಕ್ಕಳು, ಮಹಿಳೆಯರು, ವೃದ್ಧರು ಮತ್ತು ನೆರೆಹೊರೆಯವರ ಹಕ್ಕುಗಳನ್ನು ಸ್ಥಾಪಿಸಿದರು ಮತ್ತು ಸಮಾಜದಲ್ಲಿ ಬಣ್ಣ, ಜಾತಿ ಮತ್ತು ಧರ್ಮದ ಬೇಧಗಳನ್ನು ತೊಡೆದುಹಾಕಿ, ಸಾಮಾಜಿಕ, ಆರ್ಥಿಕ ಹಗೂ ಧಾರ್ಮಿಕ ವಿಷಯಗಳಲ್ಲಿ ನ್ಯಾಯವನ್ನು ಸ್ಥಾಪಿಸಿದರು. ನ್ಯಾಯದ ಈ ಪ್ರವರ್ತಕರು **ಉಮಿರ್ತು ಲಿಅಅ್‌ದಿಲ ಬೈನಕುಮ್** (ಅಶ್ಶೂರಾ: 16) ಎಂದು ಘೋಷಿಸಿದರು ಅಂದರೆ (ಓ ಲೋಕದ ಜನರೇ) ನಾನು ನಿಮ್ಮಲ್ಲಿ ನ್ಯಾಯವನ್ನು ಸ್ಥಾಪಿಸಲು ನೇಮಕಗೊಂಡಿದ್ದೇನೆ.

ವಿಶ್ವ ಶಾಂತಿಗಾಗಿ ಸರ್ವಶಕ್ತನಾದ ಅಲ್ಲಾಹನು ಬಹಳ ಪ್ರಮುಖವದ ಆಜ್ಞೆಯನ್ನು ನೀಡಿದ್ದಾನೆ ಅಂದರೆ **ಇನ್ನಲ್ಲಹ ಯಅ್‌ಮುರು ಬಿಲ್ ಅದ್ಲಿ ವಲ್ ಇಹ್ಸಾನಿ ವ ಈತಾಯಿಝಿಲ್‌ಖುರ್ಬಾ ವ ಯನ್‌ಹಾ ಅನಿಲ್ ಫಹ್‌ಶಾಇ ವಲ್‌ಮುನ್‌ಕರಿ ವಲ್ ಬಗ್‌ಯಿ, ಯಇಝುಕುಮ್ ಲಅಲ್ಲಕುಮ್ ತಝಕ್ಕರೂನ್** (ಅನ್ನಹಲ್: 91) ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. ಅಸಭ್ಯತೆಯನ್ನೂ ದುಷ್ಕೃತ್ಯವನ್ನೂ ನಿಯಮೋಲ್ಲಂಘನೆಯನ್ನೂ ಅವನು ನಿಷಿದ್ಧಗೊಳಿಸಿದ್ದಾನೆ. ಈ ಬಗ್ಗೆ ಲಕ್ಷ್ಯಗೊಡಲಿಕ್ಕೆ ಅವನು ನಿಮಗೆ ಉಪದೇಶ ನೀಡುತ್ತಾನೆ.

ಆದ್ದರಿಂದ ಇಸ್ಲಾಂ ಧರ್ಮವು ಭೂಮಿಯ ಮೇಲೆ ವಾಸಿಸುವ ಎಲ್ಲಾ ಜೀವಿಗಳೊಂದಿಗೆ ನ್ಯಾಯಕ್ಕಾಗಿ ಅಲ್ಲಾಹನು ಕಳುಹಿಸಿದ ಧರ್ಮವಾಗಿದೆ. ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಪ್ರತಿಯೊಂದು ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಅಂಶಗಳಲ್ಲಿ ಮತ್ತು ಪ್ರತಿಯೊಂದು ಹಂತದಲ್ಲೂ ನ್ಯಾಯದ ತತ್ವಗಳನ್ನು ಸ್ಥಾಪಿಸಿದ್ದಾನೆ.

ಮೊದಲ ತತ್ವವು ಮನುಷ್ಯನ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದೆ. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ:

**ಮಿನ್ ಅಜಲಿ ಝಾಲಿಕ, ಕತಬ್ನಾ ಅಲಾ ಬನೀ ಇಸ್ರಾಈಲ ಅನ್ನಹೂ ಮನ್ ಖತಲ ನಫ್ಸಮ್ ಬಿಗೈರಿ ನಫ್ಸಿನ್ ಔ ಫಸಾದಿನ್ ಫಿಲ್ ಅರ್ಝಿ ಫಕಅನ್ನಮಾ ಖತಲನ್ನಾಸ ಜಮೀಅ; ವಮನ್ ಅಹ್ಯಾಹಾ ಫಕ ಅನ್ನಮಾ ಅಹ್ಯಾನ್ನಾಸ ಜಮೀಅ, ವಲಖದ್ ಜಾಅತ್‌ಹುಮ್ ರುಸುಲುನಾ ಬಿಲ್ ಬೈಯಿನಾತಿ, ಸುಮ್ಮ ಇನ್ನಾ ಕಸೀರಮ್ಮಿನ್‌ಹುಮ್ ಬಅ್‌ದ ಝಾಲಿಕ ಫಿಲ್ ಅರ್ಝಿ ಲಮುಸ್ರಿಫೂನ್** (ಅಲ್‌ಮಾಇದಃ: 33) ಈ ಕಾರಣದಿಂದ ಇಸ್ರಾಈಲ್ ಸಂತತಿಗಳಿಗೆ ನಾವು ಹೀಗೆ ಆಜ್ಞೆ ನೀಡಿದೆವು: ಯಾರಾದರೂ ಒಬ್ಬ ವ್ಯಕ್ತಿಯನ್ನು ಕೊಲೆಗೈದುದಕ್ಕಾಗಿ ಅಥವಾ ರಾಜ್ಯದಲ್ಲಿ ಕಲಹವನ್ನುಂಟುಮಾಡಿದುದಕ್ಕಾಗಿ ಹೊರತು, (ನಿರಪರಾಧಿಯಾದ) ಒಬ್ಬನನ್ನು ಯಾರಾದರೂ ಕೊಂದರೆ ಅವನು ಮನುಷ್ಯರೆಲ್ಲರನ್ನೂ ಕೊಂದಂತಾಗುತ್ತದೆ. ಯಾರಾದರೂ ಒಬ್ಬನ ಜೀವವನ್ನು ರಕ್ಷಿಸಿದರೆ ಆತನು ಮನುಷ್ಯರೆಲ್ಲರನ್ನೂ ರಕ್ಷಿಸಿದಂತಾಗುತ್ತದೆ. ಖಂಡಿತವಾಗಿಯೂ ನಮ್ಮ ಸಂದೇಶವಾಹಕರು ಅವರ ಬಳಿಗೆ ಸುಸ್ಪಷ್ಟವಾದ ದೃಷ್ಟಾಂತಗಳ ಸಹಿತ ಆಗಮಿಸಿದ್ದಾರೆ.ಅದರ ಬಳಿಕ ಸಹ, ಅವರ ಪೈಕಿ ಹೆಚ್ಚಿನವರು ಭೂಮಿಯಲ್ಲಿ ಅತಿರೇಕವಾಗಿ ವರ್ತಿಸುತ್ತಾರೆ.

ಹಝ್ರತ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್(ಅತಬಿಅ) ರವರು ಈ ಆಯತ್ತಿನ ಬೆಳಕಿನಲ್ಲಿ ಹೇಳುತ್ತಾರೆ:

ಆದುದರಿಂದ ಲೋಕದಲ್ಲಿ ಶಾಂತಿ ಸ್ಥಾಪಿಸಲ್ಪಡಬೇಕಾದರೆ ಸರಿಯಾದ ರೀತಿಯ ನ್ಯಾಯಪಾಲನೆ ಎಲ್ಲ ಹಂತಗಳಲ್ಲೂ ಎಲ್ಲಾ ದೇಶಗಳಲ್ಲೂ ಜಾರಿಯಾಗಬೇಕು. ಒಬ್ಬ ಮನುಷ್ಯನನ್ನು ನಿಷ್ಕಾರಣವಾಗಿ ಕೊಲ್ಲುವುದು ಮಾನವ ಸಮೂಹವನ್ನೇ ಕೊಂದುದಕ್ಕೆ ಸಮವೆಂದು ಪವಿತ್ರ ಖುರ್‌ಆನ್ ಹೇಳಿದೆ. ಮುಸ್ಲಿಮನೆಂಬ ನೆಲೆಯಲ್ಲಿ ನಾನು ನಿಮಗೆ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ: ಇಸ್ಲಾಮ್ ಧರ್ಮವು ಯಾವುದೇ ರೀತಿ ಕ್ರೂರವರ್ತನೆಯನ್ನೂ ದೌರ್ಜನ್ಯವನ್ನೂ ಅನುಮತಿಸುವುದಿಲ್ಲ. ಇದು ಎಂತಹ ಆಜ್ಞೆ ಎಂದರೆ ಇದರ ಬಗ್ಗೆ ಯಾವ ರಿಯಾಯಿತಿಯೂ ಇರುವುದಿಲ್ಲ. ಪವಿತ್ರ ಖುರ್‌ಆನ್ ಹೀಗೆ ಸಹ ಹೇಳುತ್ತದೆ: ಯಾವುದೇ ದೇಶ ಅಥವಾ ಜನಾಂಗ ಮುಸ್ಲಿಮರ ವಿರುದ್ಧ ಹಗೆತನವನ್ನು ಹೊಂದಿದ್ದರೆ, ಅಂತಹ ದೇಶ ಅಥವಾ ಜನಾಂಗದೊಂದಿಗೆ ನ್ಯಾಯಯುತವಾಗಿ ನಡೆದುಕೊಳ್ಳುವುದನ್ನು ಇಸ್ಲಾಮ್ ಧರ್ಮ ತಡೆಗಟ್ಟುವುದಿಲ್ಲ. ಹಗೆತನ ಅಥವಾ ಸ್ಪರ್ಧೆಯ ಕಾರಣದಿಂದ ಸೇಡಿನ ರೂಪದಲ್ಲಿ ಅಥವಾ ಅತಿರೇಕದಿಂದ ವಿರೋಧಿಗಳೊಂದಿಗೆ ಕೂಡ ವರ್ತಿಸಬಾರದು. ಪವಿತ್ರ ಖುರ್‌ಆನ್ ನೀಡುವ ಇನ್ನೊಂದು ಉಪದೇಶವೇನೆಂದರೆ ಅನ್ಯರ ಸಂಪತ್ತನ್ನು ಅಸೂಯೆಯಿಂದಲೂ

ದುರಾಶೆಯಿಂದಲೂ ನೋಡಬಾರದು. ನಾನು ಪವಿತ್ರ ಖುರ್‌ಆನ್ ಹೇಳಿದ ಕೆಲವು ಅಂಶಗಳನ್ನು ಮಾತ್ರ ವಿವರಿಸಿರುವೆನು. ಆದರೆ ಇವುಗಳು ಅತ್ಯಂತ ಮುಖ್ಯವಾದವು ಮತ್ತು ಲೋಕದಲ್ಲಿ ಶಾಂತಿ ಮತ್ತು ನ್ಯಾಯ ಸ್ಥಾಪಿಸಲು ಅಸ್ತಿಭಾರವನ್ನು ಹಾಕುವಂತಹವುಗಳಾಗಿವೆ. ಲೋಕವು ಈ ಮುಖ್ಯ ವಿಷಯಗಳ ಕಡೆಗೆ ಗಮನಹರಿಸಿ ಅನ್ಯಾಯಗಾರರೂ ಅಸತ್ಯವಾದಿಗಳೂ ಆಗಿರುವವರು ಲೋಕವನ್ನು ನಾಶದ ಕಡೆಗೆ ಒಯ್ಯುವುದರಿಂದ ರಕ್ಷಿಸುವಂತಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ. (9ನೇ ವಾರ್ಷಿಕ ಶಾಂತಿ ವಿಚಾರಗೋಷ್ಠಿ ಲಂಡನ್, ಯುನೈಟೆಡ್ ಕಿಂಗ್‌ಡಮ್, 24-03-2012, ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ ಪುಟ-66)

ಅದೇ ರೀತಿಯಲ್ಲಿ, ಸರ್ವಶಕ್ತನಾದ ಅಲ್ಲಾಹನು ಪ್ರತಿಯೊಬ್ಬ ಮನುಷ್ಯನ ಮೂಲಭೂತ ಹಕ್ಕುಗಳನ್ನು ಅವನಿಗೆ ಒದಗಿಸಬೇಕು ಎಂದು ಹೇಳುತ್ತಾನೆ: ಆಹಾರ, ನೀರು, ಬಟ್ಟೆ ಮತ್ತು ವಸತಿ. ಹೀಗೆ ಅವನು ಹೇಳುತ್ತಾನೆ:

**ಇನ್ನ ಲಕ ಅಲ್ಲಾ ತಜೂಅ ಫೀಹಾ ವಲಾ ತಅ್‌ರಾ. ವ ಅನ್ನಕ ಲಾ ತರ್ಝ್‌ಮೂ ಫೀಹಾ ವಲಾ ತರ್ಝ್‌ಹಾ.** (ತಾಹಾ: 119-120)

ಅನುವಾದ: ಇಲ್ಲಿ ನಿನಗೆ ಹಸಿವೆ ಮತ್ತು ನಗ್ನತೆಯ ಬಾಧೆ ತಟ್ಟದು. ಬಾಯಾರಿಕೆ ಮತ್ತು ಬಿಸಿಲ ಬೇಗೆಗೆ ಕೂಡ ನೀನು ತುತ್ತಾಗಲಾರೆ.

ಸಾಮಾಜಿಕ ನ್ಯಾಯದ ಮೂಲಭೂತ ಅವಶ್ಯಕತೆ ಕುಟುಂಬ ಘಟಕದಲ್ಲಿ ನ್ಯಾಯದ ಸ್ಥಾಪನೆಯಾಗಿದೆ, ಪೋಷಕರ ಉಪಕಾರವನ್ನು ದೃಷ್ಟಿಯಲ್ಲಿಟ್ಟುಕೊಂಡು, ಮಕ್ಕಳಿಂದ ಸೌಮ್ಯತೆ, ಪ್ರೀತಿ ಮತ್ತು ದಯೆಯಿಂದ ಕರುಣೆಗಾಗಿ ಪ್ರಾರ್ಥಿಸಿ. ಸರ್ವಶಕ್ತನಾದ ಅಲ್ಲಾಹನು ಹೇಳಿದ್ದಾನೆ:

**ಖುಲ್ ತಆಲೌ ಅತ್ಲು ಮಾ ಹರ್ರಮ ರಬ್ಬುಕುಮ್ ಅಲೈಕುಮ್ ಇಲ್ಲಾ ತುಶ್ರಿಕೂ ಬಿಹೀ ಶೈಅಂವ್ವ ಬಿಲ್ ವಾಲಿದೈನಿ ಇಹ್ಸಾನ, ವಲಾ ತಖ್ತುಲೂ ಔಲಾದುಕುಮ್ ಮಿನ್ ಇಮ್‌ಲಾಕ್, ನಹ್‌ನು ನರ್ಝುಖುಕುಮ್ ವ ಇಯ್ಯಾಹುಮ್, ವಲಾ ತಖ್ರಬುಲ್ ಫವಾಹಿಶ ಮಾ ಝುಹರ ಮಿನ್‌ಹಾ ವಮಾ ಬತನ, ವಲಾ ತಖ್ತುಲುನ್ನಫ್ಸ ಅಲ್ಲತೀ ಹರ್ರಮಲ್ಲಾಹು ಇಲ್ಲಾ ಬಿಲ್ ಹಖ್ಖಿ, ಝಾಲಿಕುಮ್ ವಸ್ಸಾಕುಮ್ ಬಿಹೀ ಲಅಲ್ಲಕುಮ್ ತಅ್‌ಖಿಲೂನ್** (ಅಲ್‌ಅನ್‌ಆಮ್: 152)

ಅನುವಾದ: ಹೇಳು: 'ಬನ್ನಿರಿ, ನಿಮ್ಮ ಪ್ರಭು ನಿಮಗೆ ಅಲಂಘ್ಯಗೊಳಿಸಿದುದನ್ನು ನಾನು ನಿಮಗೆ ಹೇಳಿಕೊಡುವೆನು. (ಅವನು ಹೀಗೆ ಆದೇಶಿಸುತ್ತಾನೆ:) ಅವನೊಂದಿಗೆ ಏನನ್ನೂ ನೀವು ಸಹಭಾಗಿಯಾಗಿ ಕಲ್ಪಸಬಾರದು.ಮಾತಾಪಿತರಿಗೆ ನೀವು ಒಳಿತನ್ನು ಮಾಡಿರಿ. ಬಡತನಕ್ಕೆ ಹೆದರಿಕೊಂಡು ನೀವು ನಿಮ್ಮ ಸಂತಾನಗಳನ್ನು ಕೊಲ್ಲಬಾರದು - ನಿಮಗೂ ಅವರಿಗೂ ಆಹಾರ ಒದಗಿಸುವವರು ನಾವಾಗಿದ್ದೇವೆ. ಬಹಿರಂಗವಾಗಿರುವ ಅಥವಾ ಗುಪ್ತವಾಗಿರುವ ಅಶ್ಲೀಲ ಕೃತ್ಯಗಳನ್ನು ನೀವು ಸಮೀಪಿಸಬಾರದು. ವಧಿಸಲು ಅಲ್ಲಾಹನು ನಿಷಿದ್ಧಗೊಳಿಸಿದ ಜೀವವನ್ನು ನಿಯಮಬದ್ಧವಾಗಿ ಹೊರತು ನೀವು ವಧಿಸಬಾರದು. ಹೀಗೆ ನೀವು ಮನವರಿಕೆ ಮಾಡಲಿಕ್ಕಾಗಿ ಅಲ್ಲಾಹನು ಈ ಬಗ್ಗೆ ನಿಮಗೆ ತಾಕೀತು ನೀಡಿ ಆದೇಶಿಸುತ್ತಾನೆ.

ಕೌಟುಂಬಿಕ ಜೀವನದಲ್ಲಿ ನ್ಯಾಯದ ಅವಶ್ಯಕತೆಯೆಂದರೆ ಪತಿ ಮತ್ತು ಪತ್ನಿ ಇಬ್ಬರೂ ಅನೈತಿಕತೆ ಮತ್ತು ಅಸಭ್ಯತೆಯನ್ನು ತಪ್ಪಿಸಬೇಕು ಮತ್ತು ಅದರ ಹತ್ತಿರವೂ ಸುಳಿಯಬಾರದು. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ:

**ವಲಾ ತಖ್ತುಲೂ ಔಲಾದಕುಮ್ ಖಶ್ಯತ ಇಮ್ಲಾಖಿನ್, ನಹ್‌ನು ನರ್ಝುಖುಹುಮ್ ವ ಇಯ್ಯಾಕುಮ್, ಇನ್ನ ಖತ್ಲಹುಮ್ ಕಾನ ಖಿತ್‌ಅನ್ ಕಬೀರ, ವಲಾ ತಖ್ರಬುಝ್ಝಿನಾ ಇನ್ನಹೂ ಕಾನ ಫಾಹಿಶತನ್, ವಸಾಅ ಸಬೀಲ** (ಬನೀ ಇಸ್ರಾಈಲ್: 32-33)

ಅನುವಾದ: ಬಡತನಕ್ಕೆ ಹೆದರಿಕೊಂಡು ನೀವು ನಿಮ್ಮ ಮಕ್ಕಳನ್ನು ಕೊಲ್ಲಬೇಡಿರಿ. ಅವರಿಗೂ ನಿಮಗೂ ಆಹಾರ ನೀಡುವವರು ನಾವೇ ಆಗಿದ್ದೇವೆ. ಅವರನ್ನು ಕೊಲ್ಲುವುದು ಖಂಡಿತವಾಗಿಯೂ ಮಹಾ ಪಾಪವಾಗಿದೆ. ನೀವು ವ್ಯಭಿಚಾರದ ಸಮೀಪಕ್ಕೆ ಹೋಗಬೇಡಿರಿ. ನಿಶ್ಚಯವಾಗಿಯೂ ಅದು ಅಶ್ಲೀಲಕರವೂ ದುಷ್ಟ ಮಾರ್ಗವೂ ಆಗಿದೆ.

ಸಮಾಜದ ಎಲ್ಲ ಸದಸ್ಯರು ಬಂಧುಗಳು, ಅನಾಥರು, ಹತ್ತಿರದ ಮತ್ತು ದೂರದ ನಿವಾಸಿಗಳು, ನೆರೆಹೊರೆಯವರು, ಸ್ನೇಹಿತರು ಮತ್ತು ಪ್ರಯಾಣಿಕರನ್ನು ನ್ಯಾಯದಿಂದ ಮಾತ್ರವಲ್ಲದೆ ದಯೆಯಿಂದ ನಡೆಸಿಕೊಳ್ಳುವುದು ಅವಶ್ಯಕವಾಗಿದೆ.

**ವಅ್‌ಬುದುಲ್ಲಾಹ ವಲಾ ತುಶ್ರಿಕೂ ಬಿಹೀ ಶೈಅಂವ್ವ ಬಿಲ್ ವಾಲಿದೈನಿ ಇಹ್ಸಾನಂವ ಬಿಝಿಲ್‌ಖುರ್ಬಾ ವಲ್ ಯತಾಮಾ ವಲ್ ಮಸಾಕೀನಿ ವಲ್‌ಜಾರಿಝಿಲ್ ಖುರ್ಬಾ ವಲ್ ಜಾರಿಲ್ ಜುನುಬಿ ವಸ್ಸಾಹಿಬಿ ಬಿಲ್ ಜಂಬಿ ವಬ್ನಿಸ್ಸಬೀಲಿ; ವಮಾ ಮಲಕತ್ ಐಮಾನುಕುಮ್, ಇನ್ನಲ್ಲಾಹ ಲಾ ಯುಹಿಬ್ಬು ಮನ್ ಕಾನ ಮಿಖ್ತಾಲನ್ ಫಖೂರ** (ಅನ್ನಿಸಾ: 37)

ಅನುವಾದ: ನೀವು ಅಲ್ಲಾಹನನ್ನು ಆರಾಧಿಸಿರಿ; ಬೇರೇನನ್ನೂ ಅವನ ಸಹಭಾಗಿಯನ್ನಾಗಿ ಮಾಡಬೇಡಿರಿ. ಮಾತಾಪಿತರಿಗೆ ನೀವು ಒಳಿತನ್ನು ಮಾಡಿರಿ ನಿಕಟ ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ನಿಕಟ ಸಂಬಂಧಿಯಾದ ನೆರೆಹೊರೆಯವನಿಗೂ ಅನ್ಯ ನೆರೆಹೊರೆಯವನಿಗೂ ನಿಕಟ ಸಂಗಡಿಗನಿಗೂ ಯಾತ್ರಿಕನಿಗೂ ನಿಮ್ಮ ಅಧೀನದಲ್ಲಿರುವವರಿಗೂ. ಅಹಂಭಾವಿಗಳನ್ನೂ ಜಂಭ ಕೊಚ್ಚುವವರನ್ನೂ ಅಲ್ಲಾಹನು ಎಂದಿಗೂ ಇಷ್ಟಪಡುವುದಿಲ್ಲ.

ಹುಝೂರ್ ಅನ್ವರ್[ಅಬಾಅ] ಹೇಳುತ್ತಾರೆ:

ಇಸ್ಲಾಮ್ ನೆರೆಹೊರೆಯವರಿಗೂ ಕೆಲವು ಹಕ್ಕುಗಳನ್ನು ನೀಡುತ್ತದೆ. ನೆರೆಹೊರೆಯವರು ಯಾರು? ಅವರ ಹಕ್ಕುಗಳು ಏನು? ಎಂದು ಇಸ್ಲಾಮ್ ವಿಶದೀಕರಿಸುತ್ತದೆ. ನಿಮ್ಮ ಜೊತೆಗೆ ಕುಳಿತಿರುವವನು, ನಿಮ್ಮ ಮನೆಯ ಸಮೀಪದ ಮನೆಗಳು, ನಿಮಗೆ ಪರಿಚಯವಿದ್ದರೂ ಪರಿಚಯವಿಲ್ಲದಿದ್ದರೂ ನಿಮ್ಮ ಮನೆಯ ಸುತ್ತುಮುತ್ತಲಿನ ನಲ್ವತ್ತು ಮನೆಗಳ ಜನರು ನಿಮ್ಮ ನೆರೆಹೊರೆಯವರಾಗಿದ್ದಾರೆ. ನಿಮ್ಮ ಜೊತೆಗೆ ಪ್ರಯಾಣ ಮಾಡುವವರೂ ನಿಮ್ಮ ನೆರೆಹೊರೆಯವರಾಗಿದ್ದಾರೆ. ಅವರ ಬಗ್ಗೆ ಸಹ ಗಮನಕೊಡಲು ಇಸ್ಲಾಮ್ ಆಜ್ಞಾಪಿಸಿದೆ.

(ಮಸ್ಜಿದ್ ಬೈತುರ್ರಶೀದ್, ಹ್ಯಾಂಬರ್ಗ್ ಜರ್ಮನಿ 2012ರ ಭಾಷಣ, ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ, ಪುಟ-130)

ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ, ದುರ್ಬಲ ವರ್ಗಗಳ ಮತ್ತು ಅನಾಥರು ಮತ್ತು ವಿಧವೆಯರ ಆಸ್ತಿಯನ್ನು ರಕ್ಷಿಸುವುದು ಮತ್ತು ಬಡವರು ಮತ್ತು ಗುಲಾಮರ ಹಕ್ಕುಗಳನ್ನು ಈಡೇರಿಸುವುದು ಬಹಳ ಮುಖ್ಯ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ:

**ವ ಅನ್‌ಕಹುಲ್ ಅಯಾಮಾ ಮಿನ್‌ಕುಮ್ ವಸ್ಸಾಲಿಹೀನ ಮಿನ್ ಇಬಾದಿಕುಮ್ ವ ಇಮಾಇಕುಮ್. ಇಂಯಕೂನೂ ಫುಖರಾಅ ಯುಗ್‌ನಿಹಿಮುಲ್ಲಾಹು ಮಿನ್ ಫಝ್ಲಿಹೀ, ವಲ್ಲಾಹು ವಾಸಿಉನ್ ಅಲೀಮ್** (ಅನ್ನೂರ್: 33)

ಅನುವಾದ: ನಿಮ್ಮಲ್ಲಿರುವ ವಿಧವೆಯರಿಗೂ (ಮದುವೆಗೆ) ಯೋಗ್ಯರಾದ ಪುರುಷ ಮತ್ತು ಸ್ತ್ರೀ ಗುಲಾಮರಿಗೂ ವಿವಾಹ ಮಾಡಿಸಿರಿ. ಅವರು ದರಿದ್ರರಾಗಿದ್ದರೆ ಅಲ್ಲಾಹನು ತನ್ನ ಅನುಗ್ರಹದಿಂದ ಅವರಿಗೆ ಐಶ್ವರ್ಯವನ್ನು ದಯಪಾಲಿಸುವನು.ಅಲ್ಲಾಹನು ಅತಿ ಉದಾರಿಯೂ ಸರ್ವಜ್ಞನೂ ಆಗಿದ್ದಾನೆ.

**ವಅತುಲ್ ಯತಾಮಾ ಅಮ್ವಾಲಹುಮ್ ವಲಾ ತತಬದ್ದಲುಲ್ ಖಬೀಸ ಬಿತ್ತೈಯಿಬಿ, ವಲಾ ತಅ್‌ಕುಲೂ ಅಮ್ವಾಲಹುಮ್ ಇಲಾ ಅಮ್ವಾಲಿಕುಮ್, ಇನ್ನಹೂ ಕಾನ ಹೂಬನ್ ಕಬೀರ** (ಅನ್ನಿಸಾಅ: 03)

ಅನುವಾದ: ಅನಾಥರಿಗೆ ಅವರ ಸೊತ್ತನ್ನು ಬಿಟ್ಟು ಕೊಡಿರಿ. ನೀವು ಒಳ್ಳೆಯದಕ್ಕೆ ಕೆಟ್ಟದನ್ನು ಬದಲಾಯಿಸಬೇಡಿರಿ.ಅವರ ಧನವನ್ನು ನಿಮ್ಮ ಧನದೊಂದಿಗೆ ಬೆರಸಿ ತಿನ್ನಬೇಡಿರಿ. ನಿಶ್ಚಯವಾಗಿಯೂ ಅದೊಂದು ದೊಡ್ಡ ಪಾಪವಾಗಿದೆ.

ಹುಝೂರ್ ಅನ್ವರ್[ಅಬಾಅ] ಹೇಳುತ್ತಾರೆ:

ಇಸ್ಲಾಮ್ ಉಪದೇಶಿಸುವ ಇನ್ನೊಂದು ಮಹತ್ತಾದ ತತ್ವ, ಬಡವರ ಮತ್ತು ಶೋಷಣೆಗೆ ಗುರಿಯಾದವರ ಹಕ್ಕುಗಳನ್ನು ಈಡೇರಿಸಬೇಕೆಂದಾಗಿದೆ. ಬಡವರ ಸಾಮಾಜಿಕ ಸ್ಥಿತಿಯನ್ನು ಸುಧಾರಣೆ ಮಾಡಲು ಸಂದರ್ಭಗಳನ್ನು ಅನ್ವೇಷಿಸಬೇಕೆಂದು ಇಸ್ಲಾಮ್ ಉಪದೇಶಿಸುತ್ತದೆ. ಬಡವರಿಗೆ ನಿಸ್ವಾರ್ಥ ಸೇವೆ ಸಲ್ಲಿಸಬೇಕು. ಅವರನ್ನು ಯಾವುದೇ ರೀತಿಯಲ್ಲಿ ಶೋಷಿಸಬಾರದು. ದುರದೃಷ್ಟಕರವಾಗಿ ಇಂದಿನ

ಕಾಲದಲ್ಲಿ ಬಡವರಿಗೆ 'ಸಹಾಯ' ಮಾಡುವ ಯೋಜನೆಗಳು ವಾಸ್ತವಿಕವಾಗಿ ಸಾಲದ ರೂಪದಲ್ಲಿರುತ್ತವೆ ಮತ್ತು ಬಡ್ಡಿ ಜೊತೆ ಸಹಾಯಧನವನ್ನು ಮರಳಿಸಬೇಕಾಗುತ್ತದೆ. ಉದಾಹರಣೆಗೆ, ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲ ನೀಡಲಾಗುತ್ತಿದೆ ಮತ್ತು ಜನರಿಗೆ ವ್ಯಾಪಾರ ಪ್ರಾರಂಭಿಸಲು ಸಾಲ ನೀಡಲಾಗುತ್ತಿದೆ. ಇಂತಹ ಸಾಲ ಮರುಪಾವತಿ ಮಾಡಲು ಅನೇಕ ವರ್ಷಗಳು ಅಥವಾ ದಶಕಗಳು ಬೇಕಾಗುತ್ತವೆ. ಅನೇಕ ವರ್ಷ ಸಾಲ ಮರುಪಾವತಿಗೆ ಹೋರಾಟ ನಡೆಸಲಾಗುತ್ತದೆ. ಅದರ ಮಧ್ಯೆ ಆರ್ಥಿಕ ಮುಗ್ಗಟ್ಟು ಪ್ರಾರಂಭವಾದರೆ ಅವರು ಪಡಕೊಂಡ ಸಾಲ ಅದರ ಪ್ರಾರಂಭದ ಘಟ್ಟದಲ್ಲಿದ್ದಷ್ಟು ಅಥವಾ ಅದಕ್ಕಿಂತ ಬಹಳ ಹೆಚ್ಚಾಗಿರುತ್ತದೆ. ನಾವು ಇಂತಹ ಅಸಂಖ್ಯಾತ ಉದಾಹರಣೆಗಳನ್ನು ಲೋಕದ ಅನೇಕ ಪ್ರದೇಶಗಳು ಆರ್ಥಿಕ ಮುಗ್ಗಟ್ಟಿನ ಸಂಕಷ್ಟಕ್ಕೆ ತುತ್ತಾದಾಗ ಕಳೆದ ಕೆಲವು ವರ್ಷಗಳಲ್ಲಿ ಕಂಡಿದ್ದೇವೆ ಅಥವಾ ಅವುಗಳ ಬಗ್ಗೆ ಆಲಿಸಿದ್ದೇವೆ.

ಇಸ್ಲಾಮ್ ಧರ್ಮದ ವಿರುದ್ಧ ಸಾಮಾನ್ಯವಾಗಿ ಮಾಡಲಾಗುವ ಒಂದು ದೋಷಾರೋಪ ಅದು ಮಹಿಳೆಯರೊಡನೆ ಒಳ್ಳೆಯ ರೀತಿಯಲ್ಲಿ ವರ್ತಿಸುವುದಿಲ್ಲ ಮತ್ತು ಅವರಿಗೆ ಸಮಾನತೆ ಇಲ್ಲ ಎಂದಾಗಿದೆ. ಈ ದೋಷಾರೋಪಕ್ಕೆ ಯಾವ ಆಧಾರವೂ ಇಲ್ಲ. ಇಸ್ಲಾಮ್ ಮಹಿಳೆಗೆ ಗೌರವವನ್ನೂ ಘನತೆಯನ್ನೂ ನೀಡಿದೆ. ನಾನು ಒಂದೆರಡು ಉದಾಹರಣೆಗಳನ್ನು ನೀಡುತ್ತೇನೆ. ಮಹಿಳೆಯರನ್ನು ಜನರು ಚರಸ್ವತ್ತುಗಳ ಹಾಗೆ ಪರಿಗಣಿಸುತ್ತಿದ್ದ ಒಂದು ಕಾಲಘಟ್ಟದಲ್ಲಿ ಇಸ್ಲಾಮ್ ಅವರಿಗೆ, ತಮ್ಮ ಪತಿ ಕೆಟ್ಟದಾಗಿ ವರ್ತಿಸಿದರೆ ವಿವಾಹ ವಿಚ್ಛೇದನೆ ಪಡೆಯುವ ಹಕ್ಕನ್ನು ನೀಡಿತು. ಅಭಿವೃದ್ಧಿ ಹೊಂದಿದ ದೇಶಗಳ ಮಹಿಳೆಯರಿಗೆ ಈ ಹಕ್ಕು ದೊರೆತದ್ದು ಕಳೆದ ಶತಮಾನದಲ್ಲಾಗಿದೆ. ಮಹಿಳೆಯರಿಗೆ ಯಾವ ಸ್ಥಾನಮಾನವೂ ಇಲ್ಲದ ಕಾಲದಲ್ಲಿ ಇಸ್ಲಾಮ್ ಮಹಿಳೆಯರಿಗೆ ವಾರೀಸು ಹಕ್ಕು ನೀಡಿತು. ಯುರೋಪಿನ ಮಹಿಳೆಯರಿಗೆ ಈ ಹಕ್ಕು ದೊರೆತದ್ದು ಅದಕ್ಕಿಂತ ಎಷ್ಟೋ ಕಾಲ ಕಳೆದ ನಂತರವಾಗಿದೆ.

(ಮಸ್ಜಿದ್ ಬೈತುರ್ರಶೀದ್, ಹ್ಯಾಂಬರ್ಗ್ ಜರ್ಮನಿ 2012ರ ಭಾಷಣ, ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ, ಪುಟ-129, 130)

ಸಮಾಜದಲ್ಲಿ ನ್ಯಾಯವನ್ನು ಸ್ಥಾಪಿಸಲು, ಸಂಭಾಷಣೆಯಲ್ಲಿ ನ್ಯಾಯಯುತ ಮತ್ತು ಪ್ರಾಮಾಣಿಕವಾಗಿರಲು ಆಜ್ಞೆಯಿದೆ.

**ಯಾ ಅಯ್ಯುಹಲ್ಲಝೀನ ಆಮನುತ್ತಖುಲ್ಲಾಹ ವ ಖೂಲೂ ಖೌಲನ್ ಸದೀದ** (ಅಲ್‌ಅಹ್‌ಝಾಬ್: 71)

ಅನುವಾದ: ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನ ಭಯಭಕ್ತಿ ಇರಿಸಿಕೊಳ್ಳಿರಿ; ಋಜುವಾದ ಮಾತನ್ನಾಡಿರಿ.

ನ್ಯಾಯದ ಸ್ಥಾಪನೆಗೆ ಸತ್ಯವಾದ ಸಾಕ್ಷ್ಯದ ಸ್ಥಿತಿ ಮೂಲಭೂತವಾಗಿದೆ. ಆ ಸತ್ಯ ಸಾಕ್ಷ್ಯವು ತನ್ನ ಪೋಷಕರು ಮತ್ತು ನಿಕಟ ಸಂಬಂಧಗಳಿಗೆ ವಿರುದ್ಧವಾಗಿದ್ದರೂ ಸಹ ಹೇಳಬೇಕು. ಸರ್ವಶಕ್ತನಾದ ಅಲ್ಲಾಹನು ನುಡಿಯುತ್ತಾನೆ:

**ಯಾ ಅಯ್ಯುಹಲ್ಲಝೀನ ಆಮನೂ ಕೂನೂ ಖವ್ವಾಮೂನ ಬಿಲ್ ಖಿಸ್ತಿ ಶುಹದಾಅ ಲಿಲ್ಲಾಹಿ ವಲೌ ಅಲಾ ಅನ್‌ಫುಸಿಕುಮ್ ಅವಿಲ್ ವಲಿದೈನಿ ವಲ್ ಅಖ್ರಬೀನ, ಇಂಯಕುನ್ ಗ್ವನಿಯ್ಯನ್ ಔ ಫಖೀರನ್ ಫಇನ್ನಲ್ಲಾಹು ಔಲಾ ಬಿಹಿಮಾ. ಫಲಾ ತತ್ತಬಿಊಲ್ ಹವಾ ಅಬ್ ತಅ್‌ದಿಲೂ, ವ ಇನ್ ತಲ್‌ವಾ ಔ ತುಅ್‌ರಿಝೂ ಫಿನ್ನಲ್ಲಾಹ ಕಾನ ಬಿಮಾ ತಅ್‌ಮಲೂನ ಖಬೀರ** (ಅನ್ನಿಸಾಅ: 136)

ಅನುವಾದ: ಎಲೈ ವಿಶ್ವಾಸಿಗಳೇ, ನೀವು ಪರಿಪೂರ್ಣವಾದ ನ್ಯಾಯ ನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯವಹಿಸುವವರೂ ಆಗಿರಿ; ಅದು ನಿಮಗೆ ಅಥವಾ (ನಿಮ್ಮ) ಮಾತಾಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ. ಅವನು ಧನಿಕನಾಗಿರಲಿ ಯಾ ದರಿದ್ರನಾಗಿರಲಿ, ಅಲ್ಲಾಹನು ನಿಮಗಿಂತ ಹೆಚ್ಚಾಗಿ ಅವರೀರ್ವರ ಒಳಿತನ್ನು ಬಯಸುತ್ತಾನೆ. ಆದುದರಿಂದ ನೀವು ಯಾವುದೇ ನಿಕೃಷ್ಟ ಆಶೆಯನ್ನು ಹೊಂದದೆ ನ್ಯಾಯದಿಂದ ವರ್ತಿಸಿರಿ.ನೀವು (ಸತ್ಯವನ್ನು) ಮರೆಮಾಚಿದರೆ ಅಥವಾ (ಅದನ್ನು ಬಹಿರಂಗಪಡಿಸದೆ) ನುಣುಚಿಕೊಂಡರೆ (ತಿಳಿದು ಕೊಳ್ಳಿರಿ) ನಿಮ್ಮ ವರ್ತನೆಯ ಕುರಿತು ಅಲ್ಲಾಹನು ಚೆನ್ನಾಗಿ ತಿಳಿದವನಾಗಿದ್ದಾನೆ.

ಹುಝೂರ್ ಅನ್ವರ್(ಅಬಿಅ) ಹೇಳುತ್ತಾರೆ:

ಎಲೈ ವಿಶ್ವಾಸಿಗಳೇ, ನೀವು ಪರಿಪೂರ್ಣವಾದ ನ್ಯಾಯ ನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯವಹಿಸುವವರೂ ಆಗಿರಿ; ಅದು ನಿಮಗೆ ಅಥವಾ (ನಿಮ್ಮ) ಮಾತಾಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿನಾವು ಈ ತತ್ವವನ್ನು ಸಾಮೂಹಿಕ ಹಂತದಲ್ಲಿ ಬಳಸುವ ಬಗ್ಗೆ ಚಿಂತಿಸುವಾಗ ಸಂಪತ್ತು ಮತ್ತು ಪ್ರಭಾವ ಬಳಸಿ ಅನ್ಯಾಯಕರ ಪ್ರಭಾವ ಬೀರುವಿಕೆಯನ್ನು ನಾವು ಕೈಬಿಡಬೇಕೆಂದು ತಿಳಿಯುತ್ತದೆ. ಪ್ರತಿಯೊಂದು ದೇಶದ ಪ್ರತಿನಿಧಿಗಳು ಮತ್ತು ರಾಯಭಾರಿಗಳು ಪ್ರಾಮಾಣಿಕವಾಗಿ ನ್ಯಾಯಪಾಲನೆ ಮತ್ತು ಸಮತೆಗೋಸ್ಕರ ಕಾರ್ಯನಿರತರಾಗಬೇಕು. ಎಲ್ಲ ವಿಧಗಳ ಪಕ್ಷಪಾತ ಮತ್ತು ತಾರತಮತೆಯನ್ನು ನಿವಾರಿಸಬೇಕು. ಇದು ಶಾಂತಿ ಸ್ಥಾಪನೆಗಿರುವ ಏಕಮಾತ್ರ ಮಾರ್ಗವಾಗಿದೆ. ನಾವು ಸಂಯುಕ್ತ ರಾಷ್ಟ್ರ ಸಂಘದ ಜನರಲ್ ಅಸೆಂಬ್ಲಿ ಮತ್ತು ಸೆಕ್ಯುರಿಟಿ ಕೌನ್ಸಿಲ್‌ಗಳ ಕಡೆಗೆ ನೋಡುವುದಾದರೆ, ಅಲ್ಲಿ ನೀಡಲಾದ ಹೇಳಿಕೆಗಳು ಮತ್ತು ಭಾಷಣಗಳು ಬಹಳ ಪ್ರಶಂಸಿಸಲ್ಪಡುವುದನ್ನು ಕಾಣುತ್ತೇವೆ. ಆದರೆ ಅಂತಹ ಮೆಚ್ಚಿಕೆಯ ಹೇಳಿಕೆಗಳು ಅರ್ಥಶೂನ್ಯವಾಗಿವೆ. ಏಕೆಂದರೆ ವಾಸ್ತವಿಕ ತೀರ್ಮಾನಗಳನ್ನು ಮೊದಲೇ ನಿರ್ಧರಿಸಲಾಗಿರುತ್ತದೆ.

ನ್ಯಾಯಬದ್ಧವಾದ ನಿಜವಾದ ಪ್ರಜಾಪ್ರಭುತ್ವ ರೀತಿಯಲ್ಲಿ ನಿರ್ಧಾರಗಳನ್ನು ಮಾಡದೆ ಮಹಾಶಕ್ತಿ ರಾಷ್ಟ್ರಗಳ ಒತ್ತಡಗಳ ಪ್ರಭಾವಕ್ಕೊಳಗಾಗಿ ಅಲ್ಲಿ ತೀರ್ಮಾನಗಳನ್ನು ಕೈಗೊಳ್ಳಲಾಗುವುದರಿಂದ ಅಲ್ಲಿ ನಡೆಸಲಾಗುವ ಭಾಷಣಗಳು ಪೊಳ್ಳಾದುದೂ ಅರ್ಥ ಶೂನ್ಯವೂ ಹೊರ ಜಗತ್ತನ್ನು ವಂಚಿಸಲು ಮಾಡುವ ಅಭ್ಯಾಸಗಳೂ ಆಗಿರುತ್ತವೆ. ಹೀಗಿದ್ದರೂ ನಾವು ನಿರಾಶರಾಗಿ ಎಲ್ಲ ಪ್ರಯತ್ನಗಳನ್ನು ಬಿಟ್ಟುಬಿಡಬಾರದು. ಅದಕ್ಕೆ ಬದಲಾಗಿ ನಾವು ನಮ್ಮ ದೇಶಗಳ ನಿಯಮಗಳನ್ನು ಪಾಲಿಸಿಕೊಂಡು ನಮ್ಮ ಸರಕಾರಗಳ ಗಮನಕ್ಕೆ ಈ ಕಾಲದ ಆವಶ್ಯಕತೆಗಳ ಕಡೆಗೆ ಗಮನ ಸೆಳೆಯುವುದು ನಮ್ಮ ಜೀವಿತೋದ್ದೇಶವಾಗಬೇಕು. ಸ್ವಂತ ಹಿತಾಸಕ್ತಿಗಳುಳ್ಳ ಗುಂಪುಗಳಿಗೆ ನಾವು ಸಲಹೆಗಳನ್ನು ಸರಿಯಾಗಿ ನೀಡಿ ಜಾಗತಿಕ ಮಟ್ಟದಲ್ಲಿ ನ್ಯಾಯವು ಮೇಲುಗೈಯನ್ನು ಪಡೆಯುವಂತೆ ಮಾಡಬೇಕು. ಹಾಗೆ ಮಾಡಿದರೆ ಮಾತ್ರ ನಾವೆಲ್ಲರೂ ಆಶಿಸುವಂತಹ ಒಂದು ಶಾಂತಿಧಾಮವಾಗಿ ಲೋಕವು ಪರಿವರ್ತನಗೊಳ್ಳುವುದು.

(9ನೇ ವಾರ್ಷಿಕ ಶಾಂತಿ ವಿಚಾರಗೋಷ್ಠಿ ಲಂಡನ್, ಯುನೈಟೆಡ್ ಕಿಂಗ್‌ಡಮ್, 24-03-2012, ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ ಪುಟ-58)

ಆರ್ಥಿಕ ನ್ಯಾಯದ ಸ್ಥಾಪನೆಗೆ, ಅಳತೆ ಹಾಗೂ ತೂಕವನ್ನು ನ್ಯಾಯಬದ್ಧವಗಿ ಪೂರೈಸುವುದು ಅವಶ್ಯಕ ಮತ್ತು ಅದರಲ್ಲಿ ನ್ಯಾಯವನ್ನು ಮಾಡಬೇಕು. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ:

**ವಲಾ ತಖ್ರಬೂ ಮಾಲಲ್ ಯತೀಮಿ ಇಲ್ಲಾ ಬಿಲ್ಲತೀ ಹಿಯಾ ಅಹ್ಸನು ಹತ್ತಾ ಯಬ್ಲುಗ್ನ ಅಶುದ್ದರೂ, ವ ಔಫೂಲ್ ಕೀಲ ವಲ್ ಮೀಝಾನ ಬಿಲ್‌ಖಿಸ್ತಿ, ಲಾ ನುಕಲ್ಲಿಫು ನಫ್ಸನ್ ಇಲ್ಲಾ ವುಸ್‌ಅಹಾ, ವ ಇಝಾ ಖುಲ್ತುಮ್ ಫಅ್‌ದಿಲೂ ವಲೌ ಕನ ಝುಖುರ್ಬಾ, ವ ಬಿಅಹ್ದಿಲ್ಲಾಹಿ ಔಫೂ, ಝಾಲಿಕುಮ್ ವಸ್ಸಾಕುಮ್ ಬಿಹೀ ಲಅಲ್ಲಕುಮ್ ತಝುಕ್ಕರೂನ್** (ಅಲ್‌ಅನ್‌ಆಮ್: 153)

ಅನುವಾದ: . '(ಅಲ್ಲಾಹನು ಹೀಗೂ ಆದೇಶಿಸುತ್ತಾನೆ:) ಅನಾಥನು ಪ್ರಾಪ್ತವಯಸ್ಕನಾಗುವ ತನಕ ಉತ್ತಮ ರೀತಿಯಲ್ಲಿ ಹೊರತು (ಅಪ್ರಾಮಾಣಿಕ ಉದ್ದೇಶದಿಂದ) ಅವನ ಸಂಪತ್ತನ್ನು ನೀವು ಸಮೀಪಿಸಬಾರದು. ಅಳತೆ ಮತ್ತು ತೂಕವನ್ನು ನ್ಯಾಯಬದ್ಧವಾಗಿ ಮಾಡಿರಿ. ಯಾವುದೇ ಆತ್ಮಕ್ಕೂ ಅದರ ಸಾಮರ್ಥ್ಯಕ್ಕೆ ಮೀರಿದ ಹೊಣೆಗಾರಿಕೆಯನ್ನು ನಾವು ಹೇರುವುದಿಲ್ಲ. ನೀವು ಮಾತನಾಡುವಾಗ (ಆ ಮಾತಿಗೆ ಸಂಬಂಧಿಸಿದವರು) ನಿಮ್ಮ ನಿಕಟ ಬಂಧುಗಳಾದರೆ ಕೂಡ ನ್ಯಾಯವನ್ನು ಪಾಲಿಸಿರಿ. ಅಲ್ಲಾಹನ ಕರಾರನ್ನು ಈಡೇರಿಸಿರಿ. ನೀವು ನೆನಪಿಟ್ಟುಕೊಳ್ಳಲಿಕ್ಕಾಗಿ ಅವನು ಹೀಗೆ ನಿಮಗೆ ತಾಕೀತು ನೀಡುತ್ತಾನೆ.'

ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು ಶತ್ರುಗಳೊಂದಿಗೆ ಸಹ ನ್ಯಾಯದಿಂದ ವರ್ತಿಸಬೇಕು ಎಂದು ಆದೇಶಿಸುತ್ತಾನೆ, ಇದು ನ್ಯಾಯದ ಅತ್ಯುನ್ನತ ಉದಾಹರಣೆಯಾಗಿದೆ,

ಬೇರೆ ಯಾವುದೇ ಪುಸ್ತಕವು ಅಂತಹ ಉದಾಹರಣೆಯನ್ನು ಪ್ರಸ್ತುತಪಡಿಸುವುದಿಲ್ಲ. ಅಲ್ಲಾಹನು ಹೇಳುತ್ತಾನೆ:

**ಯಾ ಅಯ್ಯುಹಲ್ಲಝೀನ ಆಮನೂ ಕೂನೂ ಖವ್ವಮೂನ ಲಿಲ್ಲಾಹಿ ಶುಹದಾಅ ಬಿಲ್ ಖಿಸ್ತಿ, ವಲಾ ಯಜ್ರಿಮನ್ನಕುಮ್ ಶನಾಆನು ಖೌಮಿನ್ ಅಲಾ ಅಲ್ಲಾ ತಅ್‌ದಿಲೂ, ಇಅ್‌ದಿಲೂ. ಹುವ ಅಖ್ರಬು ಲಿತ್ತಖ್ವಾ, ವತ್ತಖುಲ್ಲಾಹ ಇನ್ನಲ್ಲಾಹ ಖಬೀರುವ್ ಬಿಮಾ ತಅ್‌ಮಲೂನ** (ಅಲ್‌ಮಾಇದಃ: 09)

ಅನುವಾದ: ಎಲ್ಯೆ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರ ಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ.

ಹುಝೂರ್ ಅನ್ವರ್(ಅಬಾ) ಹೇಳುತ್ತಾರೆ:

"ಇದು ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಸಹಾಯಕವಾದ ಉಪದೇಶವಾಗಿದೆ. ಇಲ್ಲಿ ನಿಮ್ಮ ಶತ್ರುಗಳೊಂದಿಗೆ ವರ್ತಿಸುವಾಗ ಕೂಡ ನ್ಯಾಯಬದ್ಧತೆಯನ್ನು ಕೈಬಿಡಬಾರದೆಂದು ಉಪದೇಶಿಸಲಾಗಿದೆ. ಇಸ್ಲಾಮಿನ ಈ ಉಪದೇಶವನ್ನು ಮುಸ್ಲಿಮರು ಅನುಸರಿಸುತ್ತಿದ್ದರೆಂದೂ ನ್ಯಾಯಬದ್ಧವಾಗಿ ವರ್ತಿಸುತ್ತಿದ್ದರೆಂದೂ ಇಸ್ಲಾಮಿನ ಆರಂಭಕಾಲದ ಚರಿತ್ರೆಯು ಸಾಕ್ಷ್ಯ ನೀಡುತ್ತದೆ. ಹಝ್ರತ್ ಪೈಗಂಬರ್(ಸ) ಮಕ್ಕವನ್ನು ಜಯಿಸಿದ ನಂತರ ಹಝ್ರತ್ ಪೈಗಂಬರರು ತನ್ನನ್ನೂ ತನ್ನ ಅನುಯಾಯಿಗಳನ್ನೂ ದೌರ್ಜನ್ಯಗಳಿಗೀಡುಮಾಡಿದವರ ವಿರುದ್ಧ ಯಾವುದೇ ಸೇಡು ತೀರಿಸಲಿಲ್ಲ. ಅವರನ್ನೆಲ್ಲ ಕ್ಷಮಿಸಿ ಅವರು ತಮ್ಮ ಧರ್ಮದಲ್ಲಿ ಮುಂದುವರಿಯಲು ಹಝ್ರತ್ ಪೈಗಂಬರರು(ಸ) ಅನುಮತಿ ನೀಡಿದರೆಂದು ಚರಿತ್ರೆ ಸಾಕ್ಷ್ಯ ನೀಡಿದೆ. ಈಗ ಸಹ ಧಾರ್ಮಿಕ ಉಗ್ರಗಾಮಿಗಳ ವಿರುದ್ಧ ಮಾಡುವ ಯುದ್ಧಗಳಲ್ಲೂ ಇತರ ಯುದ್ಧಗಳಲ್ಲೂ ಶತ್ರುಗಳ ವಿರುದ್ಧ ನ್ಯಾಯಬದ್ಧವಾಗಿ ವರ್ತಿಸಿದರೆ ಮಾತ್ರ ಶಾಂತಿ ಸ್ಥಾಪಿಸಲ್ಪಡಲು ಸಾಧ್ಯವಾಗುವುದು. ಅಂತಹ ಶಾಂತಿಯು ದೀರ್ಘಕಾಲ ಬಾಳುವುದು. (ಅಕ್ಟೋಬರ್ 22, 2008 ರಂದು ಬ್ರಿಟಿಷ್ ಸಂಸತ್ತಿನ ಹೌಸ್ ಆಫ್ ಕಾಮನ್ಸ್‌ನಲ್ಲಿ ಐತಿಹಾಸಿಕ ಭಾಷಣ, ಜಾಗತಿಕ ಬಿಕ್ಕಟ್ಟು ಮತು ಶಾಂತಿ ಮಾರ್ಗ (ಉರ್ದು), ಪುಟ ಸಂಖ್ಯೆ 14)

ಇಸ್ಲಾಂನಲ್ಲಿ, ಆಡಳಿತಗಾರರಿಗೆ ಪ್ರಜೆಗಳಿಗೆ ನ್ಯಾಯ ಸಲ್ಲಿಸಲು ಆದೇಶಿಸಲಾಗಿದೆ ಮತ್ತು ಪ್ರಜೆಗಳು ಸರ್ಕಾರದ ಅಮಾನತ್ ಅನ್ನು ಅದರ ಜನರಿಗೆ ಮಾತ್ರ ವಹಿಸಿಕೊಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ ಮತ್ತು ನಂತರ ಅವರು ತಮ್ಮ ಆಡಳಿತಗಾರರಿಗೆ ವಿಧೇಯರಾಗಲು ಬದ್ಧರಾಗಿರುತ್ತಾರೆ. ಸೂರತುನ್ನಿಸಾಅ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು ನುಡಿಯುತ್ತಾನೆ:

**ಇನ್ನಲ್ಲಾಹ ಯಅ್‌ಮುರುಕುಮ್ ಅನ್ ತುಅದ್ದುಲ್ ಅಮಾನಾತಿ ಇಲಾ ಅಹ್ಲಿಹಾ, ವ ಇಝಾ ಹಕಮ್‌ತುಮ್ ಬೈನನ್ನಾಸಿ ಅನ್ ತಹ್‌ಕುಮು ಬಿಲ್ ಅದ್ಲಿ, ಇನ್ನಲ್ಲಾಹ ನಿಇಮ್ಮ ಯಾಇಝುಕುಮ್ ಬಿಹೀ, ಇನ್ನಲ್ಲಾಹ ಕಾನ ಸಮೀಅಂ ಬಸೀರ** (ಅನ್ನಿಸಾಅ್: 59)

ಅನುವಾದ: ಖಂಡಿತವಾಗಿಯೂ ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಿಕೊಡಬೇಕೆಂದೂ145 ಜನರಡೆಯಲ್ಲಿ ನೀವು ತೀರ್ಪು ನೀಡುವಾಗ ನ್ಯಾಯಯುತವಾಗಿ ತೀರ್ಪು ನೀಡಬೇಕೆಂದೂ1450 ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸುತ್ತಾನೆ. ಅಲ್ಲಾಹನು ನಿಮಗೆ ಉಪದೇಶಿಸುವಂಥದ್ದು ಅತ್ಯುತ್ತಮವಾದುದು.ನಿಸ್ಸಂದೇಹವಾಗಿಯೂ ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಕಾಣುವವನೂ ಆಗಿದ್ದಾನೆ.

**ಯಾ ಅಯ್ಯುಹಲ್ಲಝೀನ ಆಮನೂ ಅತೀಉಲ್ಲಾಹ ವ ಅತೀಉರ್ರಸೂಲ ವ ಊಲಿಲ್ ಅಮ್ರಿ ಮಿನ್‌ಕುಮ್, ಫಇನ್ ತನಾಝಅ್‌ತುಮ್ ಫೀ ಶೈಯಿನ್ ಫರುದ್ದುಹು ಇಲಲ್ಲಾಹಿ ವರ್‍ರಸೂಲಿ ಇನ್ ಕುಸ್ತುಮ್ ತುಮಿನೂನ ಬಿಲ್ಲಾಹಿ ವಲ್‌ಯೌಮಿಲ್ ಆಖಿರಿ, ಝಾಲಿಕ ಖೈರುವ್ವ ಅಹ್ಸನು ತಅ್‌ವೀಲ** (ಅನ್ನಿಸಾಅ್: 60)

ಅನುವಾದ: ಎಲ್ಯೆ ವಿಶ್ವಾಸಿಗಳೇ, ಅಲ್ಲಾಹನಿಗೆ ನೀವು ವಿಧೇಯರಾಗಿರಿ. (ಅವನ) ಸಂದೇಶವಾಹಕನಿಗೂ ನಿಮ್ಮ ಅಧಿಕಾರಿಗಳಿಗೂ ವಿಧೇಯರಾಗಿರಿ.ಯಾವುದಾದರೂ ವಿಚಾರದಲ್ಲಿ ನಿಮ್ಮೊಳಗೆ ಭಿನ್ನಾಭಿಪ್ರಾಯವಿದ್ದರೆ, ನೀವು ಅಲ್ಲಾಹನಲ್ಲಿ ಮತ್ತು ಅಂತ್ಯದಿನದಲ್ಲಿ ವಿಶ್ವಾಸವುಳ್ಳವರಾದರೆ, (ಇತ್ಯರ್ಥಕ್ಕಾಗಿ) ಅದನ್ನು ಅಲ್ಲಾಹನಿಗೂ (ಅವನ) ಸಂದೇಶವಾಹಕನಿಗೂ ಒಪ್ಪಿಸಿರಿ.ಅದು ಅತ್ಯುತ್ತಮ ಮಾರ್ಗವಾಗಿದೆ.ಅದರ ಅಂತ್ಯಫಲ ಅತಿ ಹೆಚ್ಚು ಗುಣಕರವಾದುದು.

ಸರ್ವಶಕ್ತನಾದ ಅಲ್ಲಾಹನು ಹೇಳುವಂತೆ ಧರ್ಮದಲ್ಲಿ ಯಾವುದೇ ಬಲವಂತವಿಲ್ಲ ಎಂಬುದು ಅಂತರ-ನಂಬಿಕೆಯ ನ್ಯಾಯದ ಸ್ಥಾಪನೆಯ ಮೂಲ ತತ್ವವಾಗಿದೆ:

**ಲಾ ಇಕ್ರಾಹ ಫಿದ್ದೀನಿ, ಖದ್‌ತಬೈಯನ ಮಿನರ್‍ರುಶುದು ಮಿನಲ್ ಘೈ, ಫಮ್ಮೆಂ ಯಕ್‌ಫುರ್ ಬಿತ್ತಾಘೂತಿ ಯುಮಿವ್ ಬಿಲ್ಲಾಹಿ ಫಖದಿಸ್ತಮ್‌ಸಕ ಬಿಲ್ ಉರ್ವತಿಲ್ ವುಸ್‌ಖಾ, ಲನ್ಫಿಸಾಮಲಹಾ, ವಲ್ಲಾಹು ಸಮೀಉನ್ ಅಲೀಮ್** (ಅಲ್-ಬಖರಾ: 257)

ಅನುವಾದ: ಧರ್ಮದಲ್ಲಿ ಯಾವುದೇ ರೀತಿಯ ಬಲವಂತವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ. ಯಾವಾತನು ದುಷ್ಟ ಶಕ್ತಿಗಳನ್ನು ತಿರಸ್ಕರಿಸಿ ಅಲ್ಲಾಹನನ್ನು ನಂಬುತ್ತಾನೋ ಖಂಡಿತವಾಗಿಯೂ ಆತನು ಸುದೃಢವಾದೊಂದು ಕೈಯಾಸರೆಯನ್ನು ಹಿಡಿದಿರುವನು (ಎಂದು ತಿಳಿದುಕೊಳ್ಳಲಿ). ಅದು ಎಂದಿಗೂ ಮುರಿದು ಹೋಗುವಂಥದ್ದಲ್ಲ. ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಬಲ್ಲವನೂ ಆಗಿದ್ದಾನೆ.

ಹುಝೂರ್ ಅನ್ವರ್(ಅಬಾ) ಈ ಆಯತ್‌ನ ಕುರಿತು ಹೇಳುತ್ತಾರೆ:

ಈ ಆಜ್ಞೆಯು ಇಸ್ಲಾಮನ್ನು ಖಡ್ಗಬಲದಿಂದ ಹಬ್ಬಿಸಲಾಯಿತೆಂಬ ಆರೋಪವನ್ನು ನಿರಾಕರಿಸುತ್ತದೆ. ಮಾತ್ರವಲ್ಲ, ವಿಶ್ವಾಸವೆಂಬುದು ಮನುಷ್ಯ ಮತ್ತು ದೇವನ ಮಧ್ಯೆ ಇರುವ ಒಂದು ವಿಷಯವಾಗಿದೆ, ಆದ್ದರಿಂದ ಅದರಲ್ಲಿ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಬಾರದೆಂದು ಮುಸ್ಲಿಮರಿಗೆ ಉಪದೇಶಿಸುತ್ತದೆ.

ಪ್ರತಿಯೊಬ್ಬನು ತನ್ನ ನಂಬಿಕೆಗನುಸಾರವಾಗಿ ಜೀವಿಸಲು ಮತ್ತು ತನ್ನ ಧಾರ್ಮಿಕ ಅನುಷ್ಠಾನ ಕ್ರಿಯೆಗಳನ್ನು ಮಾಡಲು ಇಸ್ಲಾಮ್ ಅನುಮತಿಸುತ್ತದೆ. ಆದರೆ ಧರ್ಮದ ಹೆಸರಿನಲ್ಲಿ ಮಾಡುವ ಯಾವುದಾದರೂ ಅನುಷ್ಠಾನವು ಅನ್ಯರಿಗೆ ಹಾನಿಯನ್ನುಂಟುಮಾಡುವುದೂ ದೇಶದ ಕಾನೂನುಕಾಯಿದೆಗಳಿಗೆ ವಿರುದ್ಧವೂ ಆಗಿದ್ದರೆ ಸರಕಾರದ ನಿಯಮ ಪಾಲನೆಯ ಅಧಿಕಾರಿಗಳು ಅದರಲ್ಲಿ ಹಸ್ತಕ್ಷೇಪಮಾಡಿ ತಡೆಯಬೇಕು. ಒಂದು ಕ್ರೂರ ಕೃತ್ಯವು ಯಾವುದಾದರೂ ಧರ್ಮದವರಲ್ಲಿ ಆಚರಿಸಲ್ಪಡುತ್ತಿದ್ದರೆ ಅದು ಯಾವುದೇ ದೈವಿಕ ಪ್ರವಾದಿಯ ಉಪದೇಶದ ಭಾಗವಾಗಿರಲಾರದು. ಇದು ದೇಶೀಯವಾಗಿಯೂ ಜಾಗತಿಕವಾಗಿಯೂ ಶಾಂತಿಯನ್ನು

ಸ್ಥಾಪಿಸಬಹುದಾದ ಮೂಲಭೂತ ಸಿದ್ಧಾಂತವಾಗಿದೆ. ಇಸ್ಲಾಂ ಹೀಗೆಯೂ ಉಪದೇಶಿಸುತ್ತದೆ: ನೀವು ನಿಮ್ಮ ಧರ್ಮವನ್ನು ಬದಲಾಯಿಸಿದಾಗ ನೀವಿದ್ದ ಸಮಾಜ ಅಥವಾ ಅದರ ಗುಂಪುಗಳು ಅಥವಾ ಸರಕಾರ ಹಸ್ತಕ್ಷೇಪ ನಡೆಸಿ ನಿಮ್ಮ ಧಾರ್ಮಿಕ ಆಚರಣೆಗಳಿಗೆ ಭಂಗವನ್ನುಂಟುಮಾಡುವುದಾದರೆ ಮತ್ತು ಅನಂತರ ಪರಿಸ್ಥಿತಿಗಳು ಬದಲಾವಣೆಹೊಂದಿ ನಿಮಗೆ ಅನುಕೂಲವಾದ ಸ್ಥಿತಿ ಉಂಟಾದರೆ ನೀವು ನಿಮ್ಮನ್ನು ಹಿಂಸಿಸಿದವರ ವಿರುದ್ಧ ಯಾವುದೇ ದ್ವೇಷವನ್ನು ಹೊಂದಬಾರದು. ನೀವು ಸೇಡು ತೀರಿಸಿಕೊಳ್ಳುವ ಬಗ್ಗೆ ಯೋಚಿಸಬಾರದು. ನೀವು ನ್ಯಾಯ ಮತ್ತು ಸಮಾನತೆಯನ್ನು ಸ್ಥಾಪಿಸಬೇಕು. (ಅಕ್ಟೋಬರ್ 22, 2008 ರಂದು ಬ್ರಿಟಿಷ್ ಸಂಸತ್ತಿನ ಹೌಸ್ ಆಫ್ ಕಾಮನ್ಸ್‌ನಲ್ಲಿ ಐತಿಹಾಸಿಕ ಭಾಷಣ, ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ, ಪುಟ-28)

ಅಂತರಾಷ್ಟ್ರೀಯ ಶಾಂತಿ ಸ್ಥಾಪನೆಗೆ ಅಂತಾರಾಷ್ಟ್ರೀಯ ನ್ಯಾಯದ ಈ ತತ್ವವನ್ನು ಪವಿತ್ರ ಖುರ್‌ಆನ್ ಹೇಳಿದೆ:

**ವಇನ್ ತಾಯಿಫತಾನಿ ಮಿನಲ್ ಮುಮಿನೀನಕ್‌ತತಲೂ ಫಅಸ್‌ಲಿಹೂ ಬೈನಹುಮಾ, ಫಇವ್ ಬಗ್ಗತ್ ಅಹ್ದಾಹುಮಾ ಅಲಲ್‌ಉಖ್ರಾ ಫಖಾತಿಲೂ ಅಲ್ಲತಿ ತಬ್‌ಘೀ ಹತ್ತಾ ತಫೀಅ ಇಲಾ**

**ಅಮ್ರಿಲ್ಲಾಹಿ, ಫಇನ್ ಫಾಅತ್ ಫಅಸ್ಲಿಹೂ ಬೈನಹುಮಾ ಬಿಲ್ ಅದ್ಲಿ ವ ಅಖ್ಸಿತೂ, ಇನ್ನಲ್ಲಾಹ ಯುಹಿಬ್ಬುಲ್ ಮುಖ್ಸಿತೀನ** (ಅಲ್-ಹುಜರಾತ: 10)

ಅನುವಾದ: ಸತ್ಯವಿಶ್ವಾಸಿಗಳ ಪೈಕಿ ಎರಡು ಗುಂಪುಗಳು ಪರಸ್ಪರ ಹೋರಾಟಕ್ಕಿಳಿದರೆ, ನೀವು ಅವರ ಮಧ್ಯೆ ಸಂಧಾನವೇರ್ಪಡಿಸಿರಿ. ಆ ಬಳಿಕ ಅವರಲ್ಲಿ ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಆಕ್ರಮಣವೆಸಗಿದರೆ, ಅಲ್ಲಾಹನ ಆಜ್ಞೆಯ ಕಡೆಗೆ ಅವರು ಮರಳುವ ತನಕ ಅವರ ವಿರುದ್ಧ ಹೋರಾಡಿರಿ.ಅನಂತರ, ಆ ಗುಂಪು ಮರಳಿದರೆ ಅವರ ಮಧ್ಯೆ ನ್ಯಾಯಯುತವಾಗಿ ಸಂಧಾನ ಮಾಡಿಸಿರಿ ಹಾಗೂ ನ್ಯಾಯೋಚಿತವಾಗಿ ವರ್ತಿಸಿರಿ. ನಿಶ್ಚಯವಾಗಿಯೂ ಅಲ್ಲಾಹನು ನ್ಯಾಯವಂತರನ್ನು ಪ್ರೀತಿಸುತ್ತಾನೆ.

ಹಝ್ರತ್ ಖಲೀಫತುಲ್ ಮಸೀಹ್ ಅಲ್ಖಾಮಿಸ್(ಅತಬಅ) ಈ ಆಯತ್ ಬಗ್ಗೆ ಹೇಳುತ್ತಾರೆ:

ಇದು ಮುಸ್ಲಿಮರಿಗೆ ನೀಡಲಾದ ಉಪದೇಶವಾಗಿದ್ದರೂ ಇದರ ತತ್ವವನ್ನು ಪಾಲಿಸುವುದಾದರೆ ಜಾಗತಿಕ ಶಾಂತಿಗೆ ಅಸ್ತಿಭಾರ ಹಾಕಬಹುದಾಗಿದೆ. ಶಾಂತಿಸ್ಥಾಪನೆಗೆ ಅತ್ಯಾವಶ್ಯಕವಾದುದು ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸುವುದಾಗಿದೆ ಎಂದು ನಾನು ನನ್ನ ಭಾಷಣದ ಪ್ರಾರಂಭದಲ್ಲಿಯೇ ವಿವರಿಸಿದ್ದೇನೆ. ನ್ಯಾಯಬದ್ಧವಾಗಿ ಶಾಂತಿಗೆ ಮಾಡಿದ ಪ್ರಯತ್ನಗಳು ನಿಷ್ಫಲವಾದರೆ ಎಲ್ಲರೂ ಒಗ್ಗೂಡಿ ಅತಿಕ್ರಮಣಗಾರನ ವಿರುದ್ಧ ಹೋರಾಡಬೇಕು ಮತ್ತು ಅವನು ಶಾಂತಿ ಸಂಧಾನಕ್ಕೆ ಸಿದ್ಧನಾಗುವ ತನಕ ಹೋರಾಟವನ್ನು ಮುಂದುವರಿಸಬೇಕು. ಅತಿಕ್ರಮಣಗಾರನು ಶಾಂತಿ ಸಂಧಾನ ನಡೆಸಲು ಸಿದ್ಧನಾದರೆ ಅವನ ವಿರುದ್ಧ ಸೇಡು ತೀರಿಸಬಾರದು. ಅವನ ಮೇಲೆ ಪ್ರತಿಬಂಧಗಳನ್ನು ಹೊರಿಸಬಾರದು. ಅತಿಕ್ರಮಣಗಾರನ ಮೇಲೆ ದೃಷ್ಟಿಯಿರಿಸಬೇಕು. ಆದರೆ ಅದರೊಂದಿಗೆ, ಅವನ ಜೊತೆ ಸಂಬಂಧ ಸುಧಾರಣೆಗೆ ಪ್ರಯತ್ನಿಸುತ್ತಾ ಇರಬೇಕು. ಇಂದು ವಿಶ್ವದ ಕೆಲವು ದೇಶಗಳಲ್ಲಿರುವ ಅಶಾಂತಿಯನ್ನು ಕೊನೆಗೊಳಿಸಲು -ಕೆಲವು ಮುಸ್ಲಿಮ್ ದೇಶಗಳು ದುರದೃಷ್ಟಕರವಾಗಿ ಈ ಬಗೆಯ ಅಶಾಂತಿಯನ್ನು ಹೊಂದಿದ ಮುಖ್ಯ ದೇಶಗಳಾಗಿವೆ – ಈ ತತ್ವವನ್ನು ವೀಟೋ ಅಧಿಕಾರವನ್ನು ಹೊಂದಿದ ಪ್ರಮುಖ ದೇಶಗಳು ವಿಶ್ಲೇಷಿಸಬೇಕು ಮತ್ತು ನ್ಯಾಯೋಚಿತವಾಗಿ ದೇಶಗಳು ವರ್ತಿಸಿವೆಯೋ ಎಂಬುದನ್ನು ಪರಿಶೀಲಿಸಬೇಕು. ಸಹಾಯವು ಆವಶ್ಯಕವಾದಾಗ ಶಕ್ತಿಯುತ ದೇಶಗಳ ಕಡೆಗೆ ಸಹಾಯಕ್ಕಾಗಿ ಕೈಗಳನ್ನು ಚಾಚಲಾಗುತ್ತದೆ. (ಅಕ್ಟೋಬರ್ 22, 2008 ರಂದು ಬ್ರಿಟಿಷ್ ಸಂಸತ್ತಿನ ಹೌಸ್ ಆಫ್ ಕಾಮನ್ಸ್‌ನಲ್ಲಿ ಐತಿಹಾಸಿಕ ಭಾಷಣ, ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ, ಪುಟ ಸಂಖ್ಯೆ. 30)

**ಅಂತರರಾಷ್ಟ್ರೀಯ ಶಾಂತಿ ಮತ್ತು ನ್ಯಾಯ**

ಸೈಯದುನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ಈ ಪ್ರಮುಖ ತತ್ವವನ್ನು ವಿವರಿಸುತ್ತಾ ಹೇಳುತ್ತಾರೆ:

"ಈ ಆಯತ್ತಿನಲ್ಲಿ, ಅಂತರರಾಷ್ಟ್ರೀಯ ಶಾಂತಿ ಸ್ಥಾಪನೆಗೆ ಕೆಳಗಿನಂತೆ ಸೂಕ್ಷ್ಮ ಮಾರ್ಗಸೂಚಿಗಳನ್ನು ನೀಡಲಾಗಿದೆ. ಮೊದಲನೆಯದಾಗಿ, ಎರಡು ದೇಶಗಳ ಮಧ್ಯೆ ಯುದ್ಧ ಪ್ರಾರಂಭವಾಗುವ ಚಿಹ್ನೆಗಳು ಕಾಣಿಸಿದರೆ ಅನ್ಯ ದೇಶಗಳು ಒಂದೊಂದು ದೇಶದ ಪರವಾಗಿ ಯುದ್ಧದಲ್ಲಿ ಭಾಗವಹಿಸುವುದಕ್ಕೆ ಪ್ರತಿಯಾಗಿ ಎರಡು ದೇಶಗಳಿಗೂ ಮುನ್ನೆಚ್ಚರಿಕೆ ನೀಡಿ ತಮ್ಮ ಜಗಳವನ್ನು ಪಂಚಾಯತಿ ಮೂಲಕ ತೀರಿಸಲು ಹೇಳಬೇಕು ಅವರು ಅಂಗೀಕರಿಸಿದರೆ ಜಗಳ ಪರಿಹರಿಸಲ್ಪಡುವುದು. ಆದರೆ ಎರಡು ದೇಶಗಳಲ್ಲಿ ಒಂದು ರಾಜಿ ಸಂಧಾನಕ್ಕೆ ಒಪ್ಪದೆ ಯುದ್ಧಕ್ಕೆ ಸಿದ್ಧವಾದರೆ ಉಳಿದ ದೇಶಗಳು ಆ ದೇಶದ ವಿರುದ್ಧ ಒಗ್ಗೂಡಿ ಹೋರಾಡಬೇಕು ಹಲವು ದೇಶಗಳನ್ನು ಒಂದು ದೇಶ ಎದುರಿಸಲಾಗದ ಕಾರಣ ಹೋರಾಟಕ್ಕೆ ಸಿದ್ಧವಾದ ದೇಶಕ್ಕೆ ಬೇಗನೆ ಬುದ್ಧಿ ಬಂದು ರಾಜಿ ಸಂಧಾನಕ್ಕೆ ಸಿದ್ಧವಾಗುವುದು. ರಾಜಿಗೆ ಸಿದ್ಧವಾದರೆ ಮೂರನೆಯ ಕ್ರಮವೇನೆಂದರೆ ಜಗಳವನ್ನು ಪರಿಹರಿಸಿ ರಾಜಿಯನ್ನು ಮಾಡಿಸಬೇಕು. ಆ ಸಂಧರ್ಭದಲ್ಲಿ ಮಿತ್ರ ದೇಶಗಳು ಯುದ್ಧ ಮಾಡಿದ ದೇಶದೊಂದಿಗೆ ಹೊಸ ಒಪ್ಪಂದ ಮಾಡಲು ಪ್ರಯತ್ನಿಸಬಾರದು. ಹಳೆಯ ಒಪ್ಪಂದಗಳೇ ಜಾರಿಯಲ್ಲಿರುವುವು ಕೇವಲ ಯುದ್ಧಕ್ಕೆ ಕಾರಣವಾದ ಜಗಳವನ್ನು ತೀರ್ಮಾನಿಸಬೇಕು. ಹೊಸ ಬೇಡಿಕೆಗಳನ್ನು ಮುಂದಿರಿಸಿ ಶಾಶ್ವತ ಜಗಳಕ್ಕೆ ಮಿತ್ರ ದೇಶಗಳು ಅಸ್ತಿಭಾರ ಹಾಕಬಾರದು. ಶಾಂತಿಯ ಒಪ್ಪಂದ ನ್ಯಾಯ ಬದ್ಧವಾಗಿರಬೇಕು. ಒಂದು ದೇಶ ಯುದ್ಧಕ್ಕೆ ಹೊರಟಕಾರಣ ಅದರ ವಿರುದ್ಧ ತೀರ್ಪು ನೀಡಬಾರದು. ಮಿತ್ರ ದೇಶಗಳು ಯುದ್ಧ ಮಾಡಿದರೂ ತಮ್ಮನ್ನು ಮಧ್ಯಸ್ಥಗಾರರನ್ನಾಗಿಯೇ ಇರಿಸಬೇಕು ವಿರೋಧ ಪಕ್ಷದವರಾಗಿ ಮಾರ್ಪಡಬಾರದು." (ಅಹ್ಮದಿಯತ್ ಹಖೀಖಿ ಇಸ್ಲಾಂ, ಅನ್ವರುಲ್ ಉಲೂಮ್, ಸಂಪುಟ-8, ಪುಟ-314)

...*...*...*...

*(ಪುಟ ಸಂಖ್ಯೆ* **17ರ** *ಉಳಿದ ಭಾಗ)*

ಮಾಡಬೇಡಿರಿ. ಅತಿಕ್ರಮಣ ಮಾಡುವವರನ್ನು ಅಲ್ಲಾಹನು ಪ್ರೀತಿಸುವುದಿಲ್ಲ. (ಚಶ್ಮ-ಮಅ್‌ರಿಫತ್, ರೂಹಾನಿ ಖಝಾಈನ್, ಸಂಪುಟ-2, ಪುಟ-242-243)

ಸಂಕ್ಷಿಪ್ತವಾಗಿ ಪವಿತ್ರ ಖುರ್‌ಆನ್ ಧಾರ್ಮಿಕ ಸಹಿಷ್ಣುತೆಯ ಬೋಧನೆಗಳು ಮತ್ತು ತತ್ವಗಳನ್ನು ವಿವರಿಸಿದೆ. ಇದು ಜಗತ್ತಿನಲ್ಲಿ ಶಾಂತಿ ಸ್ಥಾಪನೆಗೆ ಸಾಕಷ್ಟು ಪ್ರಯಾಸವಾಗಿವೆ. ಇದಲ್ಲದೆ ಸಯ್ಯದ್‌ನಾ ಮೌಲಾನಾ ಹಝ್ರತ್ ಅಖದಸ್ ಮುಹಮ್ಮದ್ ಮುಸ್ತಫಾ(ಸ) ಅವರು ಪ್ರಾಯೋಗಿಕವಾಗಿ ಜಾರಿಗೆ ತಂದ ಖುರಆನ್ ಬೋಧನೆಗಳು ಮತ್ತು ಅವರು ಸ್ಥಾಪಿಸಿದ ಸಹಿಷ್ಣುತೆ ಮತ್ತು ಉತ್ತಮ ನಡವಳಿಕೆಯ ವಿಶಿಷ್ಟ ಮತ್ತು ಉನ್ನತ ಉದಾಹರಣೆಗಳೂ ಸಹ ವಿಶ್ವದ ಇತಿಹಾಸದ ಅಮೂಲ್ಯವಾದ ನಿಧಿಯಾಗಿದೆ. ಅದು ಜಗತ್ತಿನ ಅಸ್ತಿತ್ವ ಇರುವವರೆಗೆ ಶಾಂತಿಯ ತೊಟ್ಟಿಲು ಆಗಿರುವುದು.

ಅಲ್ಲಾಹನು ನಮಗೆ ಪವಿತ್ರ ಖುರ್‌ಆನ್ ಈ ಬೋಧನೆಗಳನ್ನು ಉತ್ತಮ ರೀತಿಯಲ್ಲಿ ಕೃತಿಗೆ ತರುವ ಮೂಲಕ ಈ ಭೂಲೋಕವನ್ನು ಸ್ವರ್ಗಮಯವನ್ನಾಗಿ ಮಾಡುವ ಸೌಭಾಗ್ಯ ಕರುಣಿಸಲಿ. ಆಮೀನ್.

...*...*...*...

*(ಪುಟ ಸಂಖ್ಯೆ* **04ರ** *ಉಳಿದ ಭಾಗ)*

ಅತ್ಯುನ್ನತ ಮಾನದಂಡಗಳನ್ನು ಕಲಿಸುತ್ತದೆ. ಇದು ಸಾಧಾರಣ ಬುದ್ಧಿಶಕ್ತಿ ಮತ್ತು ಉನ್ನತ ತಿಳುವಳಿಕೆಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಗೂ ವಿವರಣೆಯನ್ನು ಹೊಂದಿದೆ. ಆದ್ದರಿಂದ ಇದರಲ್ಲಿ ಯವುದೇ ವಿಷಯ ಅರ್ಥವಾಗದಿದ್ದರೆ ಆಕ್ಷೇಪಿಸುವ ಬದಲು, ನಿಮ್ಮ ಬುದ್ಧಿಶಕ್ತಿಯನ್ನು ವಿರೋಧಿಸಿ ಹೊರತು ಪವಿತ್ರ ಖುರ್‌ಆನ್ ಅನ್ನು ಅಲ್ಲ. ಖುರ್‌ಆನ್‌ನ ಬೋಧನೆಯು ಮಾನವ ಸ್ವಭಾವಕ್ಕೆ ಅನುಗುಣವಾಗಿದೆ, ಆದರೆ ಅದನ್ನು ಅರ್ಥಮಾಡಿಕೊಳ್ಳಲು ಶುದ್ಧ ಮನಸ್ಸಿನ ಅವಶ್ಯಕತೆ ಅನಿವಾರ್ಯವಾಗಿದೆ. ಓರ್ವ ಉಧರಕನ (ಮುಝುಕ್ಕಿ) ಅವಶ್ಯಕತೆ ಇದೆ. ಇಂದು ಅಹ್ಮದಿಯಾ ಜಮಾಅತ್, ಈ ಉಧಾರಕನ (ಮಿಝುಕ್ಕಿಯ) ಮೂಲಕ ತನ್ನ ಈ ಸಂದೇಶವನ್ನು ಸಾಗುತ್ತಿದೆ. ಬನ್ನಿ ಅವನಿಂದ ಈ ತಿಳುವಳಿಕೆಯನ್ನು ಪಡೆದುಕೊಳ್ಳಿ. ಅಲ್ಲಾಹನು ಈ ಜನರಿಗೆ ಬುದ್ಧಿವಾದವನ್ನು ನೀಡಲಿ ಮತ್ತು ಅಲ್ಲಾಹನು ಅವರಿಗೆ ಎಚ್ಚರಿಸಿದ ಮಾತುಗಳಿಂದ ಅವರನ್ನು ರಕ್ಷಿಸಲಿ. (ಖುತ್ಬಾತೆ ಮಸ್ರೂರ್, ಸಂಪುಟ-6, ಪುಟ-96)

ಪ್ರತಿಯೊಂದು ಹೊಸ ಆವಿಷ್ಕಾರವು ಈಗಾಗಲೇ ಪವಿತ್ರ ಖುಆನ್‌ನಲ್ಲಿದೆ

ಇದು ಈ ಪುಸ್ತಕದ ಸೌಂದರ್ಯವೆಂದರೆ ಇಂದಿನ ವಿದ್ವಾವಂತ ವ್ಯಕ್ತಿಯು ಮಾಡಿದ ಪ್ರತಿಯೊಂದು ಹೊಸ ಆವಿಷ್ಕಾರವನ್ನು ಸರ್ವಶಕ್ತನಾದ ಅಲ್ಲಹನು ಈ ಕೊನೆಯ ಪುಸ್ತಕದಲ್ಲಿ ಈಗಾಗಲೇ ಕಲ್ಪಿಸಲಾಗಿದೆ, ಅದಲ್ಲದೆ ವಿವರಗಳೂ ಇವೆ. ಈಗ ಈ ಮಾನವ ನಿರ್ಮಿತ ಪುಸ್ತಕಗಳು ಅದರೊಂದಿಗೆ ಹೇಗೆ ಸ್ಪರ್ಧಿಸಬಹುದು. ಆದ್ದರಿಂದ ಅಲ್ಲಾಹನ ಅಂಥಾಹ್ವಾನವಿದೆ: ನೀವು ಇಂತಹ ಒಂದು ಪುಸ್ತಕವನ್ನು ತರಲು ಸಾಧ್ಯವಿಲ್ಲ, ಇಂತಹ ವಚನವನ್ನು ರಚಿಸಲೂ ಸಾಧ್ಯವಿಲ್ಲ. ಆದ್ದರಿಂದ ಇದು ತೀರ್ಪಿನ ದಿನದವರೆಗೆ ಇರುವ ಮಹಾನ್ ಪ್ರವಾದಿ ಹಝ್ರತ್ ಪೈಗಂಬರ್ ಮುಹಮ್ಮದ್ ಸಲ್ಲಲ್ಲಾಹು ಅಲೈಹವ ಸಲ್ಲಮ್ ಅವರಿಗೆ ಅವತರಿಸಿದ ಕೊನೆಯ ಪುಸ್ತಕವಾಗಿದೆ.

(ಖುತ್ಬಾತೆ ಮಸ್ರೂರ್, ಸಂಪುಟ-6, ಪುಟ-35)

...*...*...*...

# ಪವಿತ್ರ ಖುರ್‌ಆನ್ ಮತ್ತು ಮಹಿಳೆಯರ ಹಖ್ಖುಗಳು

**(ಮುಹಮ್ಮದ್ ಶರೀಫ್ ಕೌಸರ್, ಅಧ್ಯಾಪಕರು ಜಾಮಿಯಾ ಅಹ್ಮದಿಯಾ ಖಾದಿಯಾನ್)**

ಸರ್ವಶಕ್ತನಾದ ಅಲಾಹನು ತನ್ನ ಪ್ರವಾದಿಗಳನ್ನು ಈ ಜಗತ್ತಿನಲ್ಲಿ ಮಾನವಕುಲಕ್ಕೆ ಮಾರ್ಗದರ್ಶನ ಮಾಡಲು ಕಳುಹಿಸುತ್ತಾನೆ. ಅವರ ಕೆಲಸವು ಮಾನವ ಕುಲವು ಅಲ್ಲಾಹನ ಆದೇಶವನ್ನು ಪಾಲಿಸುವಂತೆ ಮಾಡುವಂತಾಗಿದೆ. ಅಲ್ಲಾಹನು ಪ್ರವಾದಿ ಮುಹಮ್ಮದ್(ಸ) ರವರ ಮೇಲೆ ಪವಿತ್ರ ಖುರ್‌ಆನ್ ಇಳಿಸಿದ್ದನು. ಅದು ಎಲ್ಲಾ ಮಾನವರಿಗೆ ಮಾರ್ಗದರ್ಶಕವಾಗಿದೆ. ಇದು ಎಲ್ಲಾ ಮಾನವಕುಲದ ಮೇಲೆ ಬಹು ದೊಡ್ಡ ಉಪಕಾರವಿದೆ. ಅಲ್ಲಾಹನು ತನ್ನ ಪ್ರೀತಿಯ ಪ್ರವಾದಿಯರಿಗೆ(ಸ) ಪವಿತ್ರ ಖುರ್‌ಆನ್‌ನಂತಹ ಭವ್ಯ ಗ್ರಂಥ ನೀಡಿದೆ. ಅದರ ಮೂಲಕ ಎಲ್ಲಾ ಮಾನವಕುಲಕ್ಕೆ ಮಾರ್ಗದರ್ಶನ ಪಡೆಯುವಂತಾಗಿದೆ. ಪವಿತ್ರ ಖುರ್‌ಆನ್ ಅನುಗ್ರಹವು ಪುರುಷರು ಮತ್ತು ಮಹಿಳೆಯರಿಗೆ ಸಮಾನವಾಗಿದೆ. ಇನ್ನೊಂದು ದೃಷ್ಟಿಯಿಂದ ನೋಡಿದರೆ ಮಹಿಳೆಯರಿಗೆ ಸಾಕಷ್ಟು ದಯೆ ತೋರಲಾಗಿದೆ. ಇಸ್ಲಾಂ ಆಕೆಯನ್ನು ವಿನಾಕಾರಣ ಕೂಪಕ್ಕೆ ಸಿಲುಕಿದ ಜಾಲದಿಂದ ಹೊರ ತಂದಿದೆ.

ಪವಿತ್ರ ಖುರ್‌ಆನ್‌ನಲ್ಲಿ ಮಹಿಳೆಯರ ಪ್ರಾಮುಖ್ಯತೆ ಮತ್ತು ಸ್ಥಾನಮಾನದ ಬಗ್ಗೆ ಅನೇಕ ಶ್ಲೋಕಗಳಿವೆ. ಮಹಿಳೆಯು ತಾಯಿಯಾಗಿರಲಿ, ಅಥವಾ ಸಹೋದರಿಯಾಗಿರಲಿ, ಹೆಂಡತಿಯಾಗಿರಲಿ, ಅಥವಾ ಮಗಳಾಗಿರಲಿ, ಪ್ರತಿಯೊಬ್ಬರ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಇಸ್ಲಾಂ ವಿವರವಾಗಿ ವಿವರಿಸಿದೆ. ತಾಯಿಯನ್ನು ದಯೆಯಿಂದ ನಡೆಸಿಕೊಳ್ಳುವುದು, ಅವಳನ್ನು ಚೆನ್ನಾಗಿ ನೋಡಿಕೊಳ್ಳುವುದು ಮತ್ತು ಅವಳ ಸೇವೆ ಮಾಡುವುದು ಅತ್ಯಂತ ಮುಖ್ಯವಾದ ಹಕ್ಕುಗಳಲ್ಲಿ ಒಂದಾಗಿದೆ. ದ'ಂ೨'ಂ ಮತ್ತು ಉತ್ತಮ ನಡವಳಿಕೆಯಿಂದ ವರ್ತಿಸುವ ಹಕ್ಕು ತಂದೆಗಿಂತ ದೊಡ್ಡದಾಗಿದೆ. ಏಕೆಂದರೆ ಹುಟ್ಟು ಮತ್ತು ಪಾಲನೆ ಈ ವಿಷಯದಲ್ಲಿ ಮಗುವಿನ ತಾಯಿ ಹೆಚ್ಚು ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಇಸ್ಲಾಂ ಈ ಎಲ್ಲಾ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ತಾಯಿಯನ್ನು ಹೆಚ್ಚು ದಯೆಯಿಂದ ನಡೆಸಿಕೊಂಡಿತು. ಇದು ಮಹಿಳೆಯರಿಗೆ ಇಸ್ಲಾಂ ಧರ್ಮ ನೀಡಿದ ದೊಡ್ಡ ಉಪಕಾರವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ:

**ವವಸ್ಸೈನಲ್ ಇನ್‌ಸಾನ ಬಿವಾಲಿದೈಹಿ ಇಹ್ಸಾನಾ, ಹಮಲತ್‌ಹು ಉಮ್ಮುಹೂ ಕುರ್‌ಹ ವ್ವವಝಅತ್‌ಹು ಕುರ್‌ಹಾ, ವಹಮಲುಹೂ ವ ಫಿಸಾಲುಹೂ ಸಲಾಸೂನ ಶಹ್‌ರಾ.** (ಅಲ್-ಅಹ್‌ಕಾಫ್: 16)

ಅನುವಾದ : ಮತ್ತು ನಾವು ಮನುಷ್ಯನನ್ನು ತನ್ನ ಹೆತ್ತವರೊಂದಿಗೆ ದಯೆ ತೋರುವಂತೆ ಉತ್ತೇಜಿಸಿದೆವು. ತಾಯಿ ನೋವಿನಿಂದ ಹೊತ್ತೊಯ್ದರು ಮತ್ತು ನೋವಿನಿಂದ ಅವನಿಗೆ ಜನ್ಮ ನೀಡಿದರು. ಆಕೆಯ ಗರ್ಭಾವಸ್ಥೆಯ ಮತ್ತು ಹಾಲನ್ನು ಬಿಡುವ ಅವಧಿಯ ಮೂವತ್ತು ತಿಂಗಳು ಇದೆ.

ಪವಿತ್ರ ಖುರ್‌ಆನ್‌ನ ಅವತರಣಿಕೆಯ ಜೊತೆಯಲ್ಲಿ ಮಹಿಳೆಯ ಜೀವನದ ಒಂದು ಹೊಸ ಅಧ್ಯಾಯದಲ್ಲಿ ಪ್ರವೇಶಿಸಿತು. ಅದು ಇದರ ಅವತರಣಿಕೆಯ ಮುಂಚೆಯ ಕಾಲದಿಂದ ತೀರ ವಿಭಿನ್ನವಾಗಿತ್ತು. ಇತಿಹಾಸದ ಸಾಕ್ಷಿಯಿದೆ. ಒಂದು ದೀರ್ಘ ಕಾಲದಿಂದ ಮಹಿಳೆಯು ತುಳಿತಕ್ಕೊಳಗಾಗಿದ್ದಳು. ಪವಿತ್ರ ಖುರ್‌ಅನ್ ಅವತರಣಿಕೆಯ ಮೊದಲು, ಅರಬ್ ಬುಡಕಟ್ಟು ಜನಾಂಗದವರಲ್ಲಿ ಮಹಿಳೆಯರನ್ನು ಮನುಷ್ಯರಲ್ಲಿ ಅಥವಾ ಪ್ರಾಣಿಗಳಲ್ಲಿ ಎಣಿಸಬೇಕು ಎಂದು ಚರ್ಚಿಸಲಾಗುತ್ತಿತ್ತು. ಅವಳ ಒಳಗೆ ಮನುಷ್ಯನ ಆತ್ಮವಿದೆ ಅಥವಾ ಅಸುರನ, ಒಟ್ಟಿನಲ್ಲಿ ಯೂನಾನ್, ಈಜಿಪ್ಟ್, ಇರಾಖ್, ಹಿಂದ್, ಚೀನಾ, ಎಲ್ಲಾ ಸಮುದಾಯಗಳಲ್ಲೂ ಮಹಿಳೆಯರ ಮೇಲೆ ಅತ್ಯಾಚಾರ ಆಗದಂತಹ ಯಾವ ಸ್ಥಳವು ಬಾಕಿ ಉಳಿದಿರಲಿಲ್ಲ. ಜನರು ತಮ್ಮ ಸುಖಕ್ಕಾಗಿ ಮಹಿಳೆಯರನ್ನು ವ್ಯಾಪಾರ ಮಾಡುತ್ತಿದ್ದರು. ಮತ್ತು ಹೆಣ್ಣು ಮಕ್ಕಳನ್ನು ಜೀವಂತ ಸುಡುತ್ತಿದ್ದರು. ಅವರ ಮೇಲೆ ಪಶುಗಿಂತಲೂ ಹೀನ ವರ್ತನೆ ಮಾಡಲಾಗುತ್ತಿತ್ತು. ಅರಬ್ ಜನಾಂಗದವರು ಹೆಣ್ಣುಗಳನ್ನು ನಾಚಿಕೆಯ ವಸ್ತು ಎಂದು ಭಾವಿಸುತ್ತಿದ್ದರು. ಅಲ್ಲಾಹನು ಹೇಳುತ್ತಾನೆ:

**ನಬುಶ್ಶಿರ ಅಹದುಹುಮ್ ಬಿಲ್ ಉನ್ಸಾ ಝಲ್ಲ ವಜ್‌ಹುಹೂ ಮುಸ್ವದ್ದ ವಹುವ ಕಝೀಮ್. ಯತವಾರಾ ಮಿನಲ್ ಖೌಮಿ ಮಿನ್ ಸೂಇ ಮಾ ಬುಶ್ಶಿರ ಬಿಹೀ, ಅಯುಮ್ಸಿಕುಹೂ ಅಲಾ ಹೂನಿನ್ ಅಮ್ ಯದುಸ್ಸುಹೂ ಫಿತ್ತುರಾಬ್, ಅಲಾ ಸಾಅ ಮಾ ಯಹ್‌ಕುಮೂನ್.** (ಅನ್ನಹಲ್: 59-60)

ಅನುವಾದ: ಅವರಲ್ಲಿ ಯಾವನಿಗಾದರೂ ಒಂದು ಹೆಣ್ಣು ಮಗು ಹುಟ್ಟಿತೆಂಬ ವಾರ್ತೆಯನ್ನು ತಿಳಿಸಿದರೆ, ಅವನು ತನ್ನ ಕೋಪವನ್ನು ಒಳಗೆಯೇ ಅದುಮಿಡುವುದರಿಂದಾಗಿ ಅವನ ಮುಖ ಕಪ್ಪಿಡುತ್ತದೆ. ತನಗೆ ಲಭಿಸಿದ ಕೆಟ್ಟ ವಾರ್ತೆ ನಿಮಿತ್ತ ಅವನು ಜನರಿಂದ ಅಡಗುತ್ತಾನೆ. ಅಪಮಾನವನ್ನು ಸಹಿಸಿಕೊಂಡು ಅವನು ಅದನ್ನು ಪರಿಪೋಷಿಸುವನೇ? ಅಥವಾ ಅದನ್ನು ಸಜೀವವಾಗಿ ಮಣ್ಣಿನಲ್ಲಿ ಹೂಳುವನೇ? ದಿಟವಾಗಿಯೂ ಅವರ ತೀರ್ಮಾನ ಬಹಳ ನಿಕೃಷ್ಟವೇ ಆಗಿದೆ.

ಪವಿತ್ರ ಖುರ್‌ಆನ್‌ನ ಬೋಧನೆಗಳ ಅನ್ವಯ ಮಹಿಳೆಯೂ ಮಗಳು, ಸಹೋದರಿ, ಹೆಂಡತಿ, ತಾಯಿ ಎಲ್ಲ ರೂಪಗಳಲ್ಲೂ ಆದರಣೀಯವಾಗಿದೆ. ಹೆಣ್ಣು ಮಕ್ಕಳಿಗೆ ಪ್ರವಾದಿ(ಸ) ಅಲ್ಲಾಹನ ಅನುಗ್ರಹ ಎಂದಿದ್ದಾರೆ. ತಾಯಿಯ ಪಾದದಡಿಯಲ್ಲಿ ಸ್ವರ್ಗವಿದೆ. ಮತ್ತು ಪತ್ನಿಯೊಂದಿಗೆ ಸದ್ವರ್ತನೆ ಮಾಡುವವರಿಗೆ ಉತ್ತಮ ಮನುಷ್ಯನ ಸುವಾರ್ತೆ ನೀಡಿದ್ದಾನೆ. ಪ್ರವಾದಿ(ಸ) ರವರು ಮಹಿಳೆಯರಿಗೆ ಉನ್ನತವಾದ ಸ್ಥಾನ ನೀಡಿದ್ದಾರೆ. ಮಹಿಳೆಯರಿಗೆ ಪ್ರೀತಿಯ ಸ್ಥಾನಮಾನ ನೀಡಿದ್ದಾರೆ. ಹಜರತ್ ರಸೂಲುಲ್ಲಾಹ್(ಸ) ನುಡಿದರು.

**ಇನ್ನಲ್ಲಾಹ ಯೂಸೀಕುಮ್ ಬಿನ್ನಿಸಾಇ ಖೈರನ್, ಇನ್ನಲ್ಲಾಹ ಯುಸೀಕುಮ್ ಬಿನ್ನಿಸಾಇ ಖೈರನ್, ಫಇನ್ನಹುನ್ನ ಉಮ್ಮಹಾತುಕುಮ್ ವ ಬನಾತುಕುಮ್ ವ ಖಾಲಾತುಕುಮ್.** (ರವಾಹುಲ್ ಅಲ್‌ಬಾನಿ, ಫಿ ಅಸ್ಸಿಲ್‌ಸಿಲತುಸ್ಸಹೀಹ, ಪುಟ-2871)

ಅನುವಾದ: ಅಲ್ಲಾಹನು ನಿಮಗೆ ಮಹಿಳೆಯರೊಂದಿಗೆ ಉತ್ತಮವಾಗಿ ವರ್ತಿಸಲು ತಾಕೀತು ಮಾಡಿದ್ದಾನೆ. ಮತ್ತು ಮಹಿಳೆಯರೊಂದಿಗೆ ಉತ್ತಮವಾಗಿ ವರ್ತಿಸಲು ಆದೇಶ ನೀಡಿದ್ದಾನೆ. ದಿಟವಾಗಿಯೂ ಅವರು ನಿಮ್ಮ ತಾಯಂದಿರು ನಿಮ್ಮ ಮಗಳು, ತಾಯಿಯ ಸಹೋದರಿಯರಾಗಿದ್ದಾರೆ.

ಇನ್ನೊಂದು ಹದೀಸಿನಲ್ಲಿ ಹೀಗಿದೆ: ಅನುವಾದ: ನನಗೆ ನಿಮ್ಮ ಲೋಕದಲ್ಲಿ ಅತೀ ಹೆಚ್ಚು ಪ್ರೀತಿಯಾದವರಲ್ಲಿ ಮೊದಲ ಸ್ಥಾನ ಮಲಹಿಳೆಯರಿಗಿದೆ ಮತ್ತು ಒಳ್ಳೆಯ ಪರಿಮಳ ನನಗೆ ಇಷ್ಟವಾಗಿದೆ. ಆದರೆ ಸಮಾಜ ಮತ್ತು ದೇವ ಪ್ರೇಮ ನನ್ನ ಕಣ್ಣುಗಳಿಗೆ ತಂಪನ್ನು ನೀಡುತ್ತದೆ. (ಸುನನ್ ಅನ್ನಿಸಾಯಿ, ಕಿತಾಬ್ ಅಶ್ರುನ್ನಿಸಾ, ಬಾಬ್ ಹುಬ್ಬುನ್ನಿಸಾಇ)

ಹಝ್ರತ್ ಪೈಗಂಬರ್(ಸ) ನುಡಿದರು: **ಅದ್ದುನ್‌ಯಾ ಕುಲ್ಲುಹಾ ಮತಾಉನ್, ವ ಖೈರು ಮತಾಯಿದ್ದುನಿಯಾ ಅಲ್‌ಮರ್‌ಅತುಸ್ಸಾಲಿಹತು** (ಮುಸ್ಲಿಮ್, ಹದೀಸ್-1467) ಅಂದರೆ: ಲೋಕವು ಐಷಾರಾಮಿ ಸಾಮಾನುಗಳಿಂದ ತುಂಬಿ ಹೋಗಿದೆ. ಆದರೆ ಅದರಲ್ಲಿ ಅತ್ಯುತ್ತಮ ವಸ್ತು ಸಜ್ಜನ ಮಹಿಳೆಯಾಗಿದೆ.

**ಮಾನವೀಯ, ನೈತಿಕ ಮತ್ತು ಧಾರ್ಮಿಕ ನೆಲೆಯಲ್ಲಿ ಪುರುಷ ಹಾಗೂ ಮಹಿಳೆಯರ ಹಕ್ಕುಗಳು ಸಮಾನವಾಗಿದೆ.**

ಪುರುಷ ಮತ್ತು ಮಹಿಳೆಯನ್ನು ಒಂದೇ ಆತ್ಮ (ನಫ್ಸ್) ದಿಂದ ಜನ್ಮ ನೀಡಲಾಗಿದೆ.

ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ: **ವಮಿನ್ ಆಯಾತಿಹೀ ಅನ್ ಖಲ್ಖಖ ಲಕುಮ್ ಮ್ಮಿನ್ ಅನ್‌ಫುಸಿಕುಮ್ ಅಝ್ವಾಜಲ್ಲಿತಸ್‌ಕುನೂ ಇಲೈಹಾ ವ ಜಅಲ ಬೈನಕುಮ್ ಮವದ್ದ ವ್ವರಹ್ಮತನ್, ಇನ್ನ ಫೀ ಝಾಲಿಕ ಲಆಯಾತಿಲ್ಲಿಖೌಮಿಂಯತಫಕ್ಕರೂನ್** (ಅರ್ರೂಮ್: 22)

ಅನುವಾದ: ನೀವು ಮನಶಾಂತಿ ಪಡೆಯಲಿಕ್ಕೋಸ್ಕರ ನಿಮ್ಮ ವರ್ಗದಿಂದಲೇ ಅವನು ನಿಮಗಾಗಿ ಬಾಳಸಂಗಾತಿಗಳನ್ನು ಸೃಷ್ಟಿಸಿದ್ದಾನೆ. ಇದು ಅವನ ದೃಷ್ಟಾಂತಗಳಲ್ಲೊಂದು ನಿಮ್ಮ ಮಧ್ಯೆ ಅವನು ಪ್ರೀತಿಯನ್ನು ಕರುಣೆಯನ್ನು ಉಂಟು ಮಾಡಿದನು. ಚಿಂತನಾಶೀಲರಿಗೆ ಅದರಲ್ಲಿ ನಿಜವಾಗಿಯೂ ದೃಷ್ಟಾಂತಗಳಿವೆ.

ಅದೇ ರೀತಿ ನೂರ ಅನ್ನಹಲ್‌ನಲ್ಲಿ ಅಲ್ಲಾಹನು ನುಡಿಯುತ್ತಾನೆ: **ವಲ್ಲಾಹು ಜಅಲಲಕುಮ್ ಮಿನ್ ಅನ್‌ಫುಸಿಕುಮ್ ಅಝ್ವಾಜಂವ್ವ ಜಅಲ ಲಕುಮ್ ಮ್ಮಿನ್ ಅಝ್ವಾಜಿಕುಮ್ ಬನೀನ ವ ಹಫದತನ ವ್ವರಝಖಕುಮ್ ಮ್ಮಿನತ್ತೈಯಿಬಾತಿ ಅಫಬಿಲ್ ಬಾತಿಲಿ ಯುಮಿನೂನ ವ ಬಿನಿಅ್‌ಮತಿಲ್ಲಾಹಿ**

**ಹುಮ್ ಯಕ್‌ಫುರೂನ್** (ಅನ್ನಹ್ಲ್-73) ಅನುವಾದ: ನಿಮ್ಮ ಬಾಳ ಸಂಗಾತಿಗಳಿಂದ ಪುತ್ರರನ್ನು, ಪೌತ್ರರನ್ನು ಅವನು ನಿಮಗೆ ನೀಡುವವನು ಮತ್ತು ಉತ್ತಮವಾದ ಆಹಾರವನ್ನು ನಿಮಗೆ ಒದಗಿಸಿರುವನು. ಹಾಗೆ ಇರುವಾಗ ನಿರರ್ಥಕವಾದ ವಿಚಾರಗಳನ್ನು ಅವರು ನಂಬಿ ಅಲ್ಲಾಹನ ಅನುಗ್ರಹ ನಿರಾಕರಿಸುತ್ತಾರೆಯೇ?

ಈ ವಚನಗಳಲ್ಲಿ ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದೇನೆಂದರೆ ಪುರುಷ ಮತ್ತು ಮಹಿಳೆಗೆ ಸಮಾಜದಲ್ಲಿ ಸಮಾನವಾದ ಹಕ್ಕುಗಳಿವೆ. ಪರಸ್ಪರ ಒಟ್ಟುಗೂಡಿವೆ. ಮಾನವ ಜನಾಂಗವನ್ನು ವೃದ್ಧಿಸಿಗೊಳಿಸಬಹುದು. ಇದು ಅಲ್ಲಾಹನ ಬಹುದೊಡ್ಡ ಅನುಗ್ರಹವಾಗಿದೆ ಮತ್ತು ಉಪಕಾರವಾಗಿದೆ. ಪುರುಷ ಮತ್ತು ಮಹಿಳೆ ಒಬ್ಬರು ಮತ್ತೊಬ್ಬರಿಂದ ಶಾಂತಿಯನ್ನು ಪಡೆಯುತ್ತಾರೆ. ಈ ನಿಟ್ಟಿನಲ್ಲಿ ಇಸ್ಲಾಂ ಧರ್ಮವು ಮಹಿಳೆಗೆ ಒಂದು ವಿಶಿಷ್ಠವಾದ ಸ್ಥಾನವನ್ನು ಮತ್ತು ಹಕ್ಕುಗಳನ್ನು ನೀಡಿದೆ.

**ಸರ್ವಶಕ್ತನಾದ ಅಲ್ಲಾಹನ ಸಾಮಿಪ್ಯವನ್ನು ಪಡೆಯಲು ಇಬ್ಬರಿಗೂ ಸಮಮಾನವಾಗಿದೆ.**

ಈ ಜಗತ್ತಿನಲ್ಲಿ ಮನುಷ್ಯನ ಜನ್ಮದ ಉದ್ದೇಶವು ಅಲ್ಲಾಹನನ್ನು ಆರಾಧಿಸುವುದು ಮತ್ತು ಅಲ್ಲಾಹನೊಂದಿಗೆ ಅವನ ಸಂಬಂಧವನ್ನು ಸ್ಥಾಪಿಸುವುದಾಗಿದೆ. ಪುರುಷನಾಗಿರುವುದು ದೊಡ್ಡಸ್ತಿಕೆಯೇನಲ್ಲ. ಅಲ್ಲಾಹನ ಸಾಮಿಪ್ಯ ಪಡೆಯಲು ಮಾನವ ಗುರಿಯು ಪುರುಷರು ಮತ್ತು ಮಹಿಳೆಯರಿಗೆ ಸಮಾನವಾಗಿವೆ. ಅಲ್ಲಾಹನ ದೃಷ್ಟಿಯಲ್ಲಿ ಗೌರವವನ್ನು ಪಡೆಯುವ ಮಾನದಂಡವೆಂದರೆ ಧರ್ಮನಿಷ್ಠೆಯಾಗಿದೆ.

**ಲಿತಆರಫೂ, ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್, ಇನ್ನಲ್ಲಾಹ ಅಲೀಮುನ್ ಖಬೀರ್** (ಅಲ್-ಹುಜರಾತು: 14)

ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾನ್ವಿತ, ದಿಟವಾಗಿಯೂ ಅಲ್ಲಾಹನು ಸರ್ವಜ್ಞನೂ ಎಲ್ಲ ಅರಿತವನೂ ಆಗಿದ್ದಾನೆ.

ಧರ್ಮನಿಷ್ಠೆ ಪಡೆಯುವ ಮಾರ್ಗಗಳು ಎರಡು ವರ್ಗಗಳಿಗೆ ಸಮಾನವಾಗಿ ತೆರೆದಿಡುತ್ತದೆ. ಅಲ್ಲಾಹನು ಹೇಳುತ್ತಾನೆ. **ಅನ್ನಿ ಲಾ ಉಝೀಉ ಅಮಲ ಆಮಿಲಿಮ್ಮಿನ್‌ಕುಮ್ ಮಿನ್ ಝಕರಿನ್ ಔ ಉನ್‌ಸಾ** (ಆಲಿ ಇಮ್ರಾನ್: 196) ಖಂಡಿತವಾಗಿಯೂ ನಿಮ್ಮ ಪೈಕಿ ಪುರುಷನಾಗಲಿ, ಸ್ತ್ರೀಯಾಗಲಿ ಯರ ಕರ್ಮವನ್ನು ನಾನು ನಿಷ್ಪಲಗೊಳಿಸಲಾರೆ.

ಮತ್ತು ಹೇಳಿದನು: **ಇನ್ನಲ್ ಮುಸ್ಲಿಮೀನ ವಲ್ ಮುಸ್ಲಿಮಾತಿ ವಲ್ ಮುಮಿನೀನ ವಲ್ ಮುಮಿನಾತಿ ವಲ್ ಖಾನಿತೀನ ವಲ್ ಖಾನಿತಾತಿ ವಸ್ಸಾದಿಖೀನ ವಸ್ಸಾದಿಖಾತಿ ವಸ್ಸಾಬಿರೀನ ವಸ್ಸಾಬಿರಾತಿ ವಲ್ ಖಾಶಿಈನ ವಲ್ ಖಾಶಿಆತಿ ವಲ್ ಮುತಸದ್ದಿಖೀನ ವಲ್ ಮುತಸದ್ದಿಖಾತಿ ವಸ್ಸಾಯಿಮೀನ ವಸ್ಸಾಯಿಮಾತಿ ವಲ್ ಹಾಫಿಝೀನ ಫುರೂಜಹುಮ್ ವಲ್ ಹಾಫಿಝಾತಿ ವಝ್ಝಾಕಿರೀನಲ್ಲಾಹ ಕಸೀರ ವ್ವಝ್ಝಾಕಿರಾತಿ, ಅಅದ್ದಲ್ಲಾಹು ಲಹುಮ್ ಮಘ್‌ಫಿರತವ್ವ ಅಜ್ರನ್ ಅಝೀಮಾ** (ಅಲ್-ಅಹ್‌ಝಾಬ್: 36)

ಅನುವಾದ: ನಿಶ್ಚಯವಾಗಿಯೂ ಅಲ್ಲಾಹನಿಗೆ ಶರಣಾಗುವ ಪುರುಷರು, ಶರಣಾಗುವ ಸ್ತ್ರೀಯರು, ಸತ್ಯವಿಶ್ವಾಸಿಗಳು, ಸತ್ಯವಿಶ್ವಾಸೀಯರು ಅಲ್ಲಾಹನಿಗೆ ವಿಧೇಯರಾಗುವ ಪುರುಷರು ವಿಧೇಯರಾಗುವ ಸ್ತ್ರೀಯರು ಸತ್ಯವಂತರು, ಸತ್ಯವತೀಯರು, ತಾಳ್ಮೆ ವಹಿಸುವ ಪುರುಷರು, ತಾಳ್ಮೆ ವಹಿಸುವ ಸ್ತ್ರೀಯರು, ವಿನಯವಂತರಾದ ಪುರುಷರು ವಿನಯವಂತರಾದ ಸ್ತ್ರೀಯರು, ದಾನ ಧರ್ಮ ಮಾಡುವ ಪುರುಷರು ದಾನ ಧರ್ಮ ಮಾಡುವ ಸ್ತ್ರೀಯರು, ವೃತಾನುಷ್ಠಾನ ಮಾಡುವ ಪುರುಷರು ವ್ರತಾನುಷ್ಠಾನ ಮಾಡುವ ಸ್ತ್ರೀಯರು, ತಮ್ಮ ಚಾರಿತ್ರ್ಯವನ್ನು ರಕ್ಷಿಸುವ ಪುರುಷರು, ತಮ್ಮ ಚಾರಿತ್ರ್ಯವನ್ನು ರಕ್ಷಿಸುವ ಸ್ತ್ರೀಯರು ಅಲ್ಲಾಹನನ್ನು ಅಧಿಕವಾಗಿ ಸ್ಮರಿಸುವ ಪುರುಷರು, ಅಧಿಕವಾಗಿ ಸ್ಮರಿಸುವ ಸ್ತ್ರೀಯರು, ಇವರೆಲ್ಲರಿಗೂ ಅಲ್ಲಾಹನು ಕ್ಷಮಾದಾನವನ್ನು ಮಹತ್ವದ ಪ್ರತಿಫಲವನ್ನು ಸಿದ್ಧಪಡಿಸಿಟ್ಟಿದ್ದಾನೆ.

**ವಿವಾಹದ ಸಂದರ್ಭದಲ್ಲಿ ಪ್ರವಾದಿ(ಸ) ರವರ ಆಯ್ದ ವಚನಗಳು ದಂಪತಿಗಳ ಹಕ್ಕುಗಳು ಮತ್ತು ಕರ್ತವ್ಯಗಳ ಪರಿಪೂರ್ಣ ಸಂವಿಧಾನವಾಗಿದೆ.**

ಪವಿತ್ರ ಖುರಆನ್ ಹೇಳುತ್ತದೆ: **ಯಾಅಯ್ಯುಹನ್ನಾಸುತ್ತಖು ರಬ್ಬಕುಮುಲ್ಲಝೀ ಖಲಕುಕುಮ್ ಮ್ಮಿನ್ ನಫ್ಸಿಂ ವಾಹಿದ ವ ಖಲಖ ಮಿನ್‌ಹಾ ಝೌಜಹಾ ವ ಬಸ್ಸ ಮಿನ್‌ಹುಮಾ ರಿಜಾಲನ್ ಕಸೀರೌಂ ವನಿಸಾಅ, ವತ್ತಖುಲ್ಲಾಹಲ್ಲಝೀ ತಸಾಅಲೂನ ಬಿಹೀ ವಲ್ ಅರ್‌ಹಾಮ್, ಇನ್ನಲ್ಲಾಹ ಕಾನ ಅಲೈಕುಮ್ ರಖೀಬಾ.** (ಅನ್ನಿಸಾಅ: 02) ಅನುವಾದ : ಎಲ್ಲೈ ಮನುಷ್ಯರೇ. ನೀವು ನಿಮ್ಮ ಪ್ರಭುವಿನ ಭಯ ವಿವರಿಸಿಕೊಳ್ಳಿ, ಅವನು ನಿಮ್ಮನ್ನು ಒಂದು ಜೀವಾಳದಿಂದ ಸೃಷ್ಟಿಸಿ ಅದರಿಂದ ಅದರ ವರ್ಗದಿಂದಲೇ ಅದರ ಜೋಡಿಯನ್ನು ಸೃಷ್ಠಿಸಿ ಅವರೆಡರಿಂದ ಅನೇಕ ಪುರುಷರನ್ನು ಸ್ತ್ರೀಯರನ್ನು ಲೋಕದಲ್ಲಿ ವ್ಯಾಪಿಸುವಂತೆ ಮಾಡಿರುವನು. ಯಾವೊಬ್ಬನ ಹೆಸರಿನ ನೀವು ಪರಸ್ಪರ ಹಕ್ಕು ಬಾಧ್ಯತೆಯನ್ನು ಕೇಳುತ್ತೀರೋ ಆ ಅಲ್ಲಾಹನ ಭಯವಿಟ್ಟುಕೊಳ್ಳಿರಿ. ವಿಶೇಷವಾಗಿ ಕುಟುಂಬ ಸಂಬಂಧದ ವಿಚಾರದಲ್ಲಿಯೂ ನಿಸ್ಸಂದೇಹವಾಗಿಯೂ ಅಲ್ಲಾಹನು ನಿಮ್ಮ ಮೇಲೆ ನಿಗ್ರಹವಿರಿಸಿಕೊಂಡಿದ್ದಾನೆ.

**ಯಾ ಅಯ್ಯುಹಲ್ಲಝೀನ ಆಮನುತ್ತಖುಲ್ಲಾಹ ವ ಖೂಲೂ ಖೌಲನ್ ಸದೀದಾ. ಯುಸ್ಲಿಹ್ ಲಕುಮ್ ಅಅ್‌ಮಾಲಕುಮ್ ವ ಯಘ್‌ಫಿರ್ ಲಕುಮ್ ಝುನೂಬಕುಮ್. ವಮ್ಯೆಂ ಯುತೀ ಇಲ್ಲಾಹ ವರಸೂಲಹೂ ಫಖದ್ ಫಾಝು ಫೌಝುನ್ ಅಝೀಮ.** (ಅಲ್-ಅಹಝಾಬ್-71, 72)

ಅನುವಾದ: ಎಲ್ಲೈ ಸತ್ಯವಿಶ್ವಾಸಿಗಳೇ, ಮೂಸಾರನ್ನು ಪೀಡಿಸಿದವರಂತೆ ನೀವು ಆಗಬಾರದು. ಅವರ ಅಪಾದನೆಯಿಂದಾದರೂ ಅಲ್ಲಾಹನು ಅವರನ್ನು ಮುಕ್ತಗೊಳಿಸಿದ್ದಾನೆ. ಅಲ್ಲಾಹನ ದೃಷ್ಟಿಯಲ್ಲಿ ಅವರು ಗೌರವಾನ್ವಿತರಾಗಿದ್ದರು. ಎಲ್ಲೈ ಸತ್ಯವಿಶ್ವಾಸಿಗಳೆ, ನೀವು ಅಲ್ಲಾಹನ ಭಯಭಕ್ತಿ ಇರಿಸಿಕೊಳ್ಳಿರಿ. ರುಜುವಾದ ಮಾತನ್ನಾಡಿರಿ.

**ಯಾ ಅಯ್ಯುಹಲ್ಲಝೀನ ಆಮನುತ್ತಖುಲ್ಲಾಹ ವಲ್ ತನ್‌ಝುರ್ ನಫ್‌ಸುಮ್ಮಾ ಖದ್ದ ಮತ್‌ಲಿಘದ್, ವತ್ತಖುಲ್ಲಾಹ, ಇನ್ನಲ್ಲಹ ಖಬೀರುಮ್ ಬಿಮಾ ತಅ್‌ಮಲೂನ್** (ಅಲ್ ಹಶರ್-19) ಅನುವಾದ: ಎಲ್ಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಭಯಪಡಿರಿ. ನಾಳೆಗೆ ತಾನು ಏನನ್ನು ಸಿದ್ಧಪಡಿಸಿಟ್ಟಿದ್ದೆ ಎಂದು ಪ್ರತಿಯೊಂದು ಆತ್ಮವು ನೋಡಿಕೊಳ್ಳಿ. ನೀವು ಅಲ್ಲಾಹನ ಭಯ ಭಕ್ತಿ ಇರಿಸಿಕೊಳ್ಳಿರಿ. ನೀವು ಮಾಡುವುದನ್ನೆಲ್ಲಾ ಖಂಡಿತವಾಗಿಯೂ ಅಲ್ಲಾಹನು ಚೆನ್ನಾಗಿ ತಿಳಿಯುವವನಾಗಿದ್ದಾನೆ.

ಎಲ್ಲೈ ಸತ್ಯವಿಶ್ವಾಸಿಗಳೇ ಎಂಬ ಸಂಬೋಧನೆಯೂ ಪುರುಷರು ಮತ್ತು ಸ್ತ್ರೀಯರು ಇಬ್ಬರಿಗೂ ಸಂಬಂಧಪಟ್ಟಿದ್ದಾಗಿದೆ. ಲೋಕದ ಸೃಷ್ಟಿಕರ್ತನು ಒಂದೇ ಆತ್ಮದಿಂದ ಅಂದರೆ ಒಂದೇ ಜೀವಾಳದಿಂದ ಪುರುಷ ಮತ್ತು ಸ್ತ್ರೀಗೆ ಒಂದೇ ರೀತಿಯ ಬೌದ್ಧಿಕ ಸಾಮರ್ಥ್ಯಗಳು, ಭಾವನೆಗಳು ಮತ್ತು ಅನಿಸಿಕೆಗಳನ್ನು ನೀಡಿದ್ದಾನೆ. ಮತ್ತು ಒಬ್ಬರು ಮತ್ತೊಬ್ಬರ ಬಗ್ಗೆ ಖಾಳಜಿ ವಹಿಸಲು ಮತ್ತು ಹಾಗೂ ಸಂಬಂಧಿಕರೊಡನೆ ಉತ್ತಮ ವ್ಯವಹರಿಸಲು ಉಪದೇಶ ನೀಡಿದ್ದಾನೆ ಮತ್ತು ಭಯಭಕ್ತಿ ಇರಿಸಿಕೊಳ್ಳಲು ಅಲ್ಲಾಹನು ಆಜ್ಞೆ ನೀಡಿದ್ದಾನೆ.

ಪ್ರತಿಯೊಬ್ಬ ಅಹ್ಮದಿ ಪುರುಷ ಹಾಗೂ ಮಹಿಳೆಯೂ ತಮ್ಮ ದೃಷ್ಟಿಯಲ್ಲಿ ಇರಿಸಿಕೊಳ್ಳ ಬೇಕಾದುದೇನೆಂದರೆ ನಾವು ಅಲ್ಲಾಹನ ಸಂತೃಪ್ತಿಗೊಳಿಸಲು ಯಾವ ಹೆಜ್ಜೆಯೂ ಮುಂದಿಟ್ಟರೇ ಅದು ಅಲ್ಲಾಹನ ಆಜ್ಞೆ ಪ್ರಕಾರವಾಗಿರಬೇಕು. ಅದರ ಉದ್ದೇಶ ಅಲ್ಲಾಹನ ಸಂತೃಪ್ತಿಯಾಗಿದ್ದರೆ ಬೇರೊಬ್ಬರ ಹಕ್ಕು ದಮನ ಮಾಡುವ ಭಾವನೆಯೂ ಬರುವುದಿಲ್ಲ. ಒಬ್ಬರು ಮತ್ತೊಬ್ಬರ ಬಾವನೆಗಳ ಬಗ್ಗೆ ಗಮನ ವಹಿಸಿದರೆ ಒಂದು ಉತ್ತಮ ಸಮಾಜ ನಿರ್ಮಾಣವಾಗುತ್ತದೆ. ಅದರಿಂದ ಮುಂದೆ ಸಾತ್ವಿಕ ಜನಾಂಗ ಜನ್ಮ ಪಡೆಯುತ್ತದೆ.

**ಪುರುಷ ಮತ್ತು ಮಹಿಳೆ ಪರಸ್ಪರ ಉಡುಗೆ ಇದ್ದಂತೆ**

ಪವಿತ್ರ ಖುರ್‌ಆನ್ ಹೀಗೆ ಬೋಧಿಸುತ್ತದೆ: **ಹುನ್ನ ಲಿಬಾಸಲ್ಲಕುಮ್ ವ ಅನ್ತುಮ್ ಲಿಬಾಸುಲ್ಲಹುನ್ನ** (ಅಲ್-ಬಖರ:188) ಅನುವಾದ : ಅವರು ನಿಮಗೆ ಒಂದು ಉಡುಗೆ ನೀವು ಸಹ ಅವರಿಗೆ ಒಂದು ಉಡುಗೆಯಾಗಿರುವಿರಿ. ಉಡಿಗೆಯೂ ನಿಪುಣತೆಗಳನ್ನು ಮುಚ್ಚುತ್ತದೆ. ಇದು ಸೌಂದರ್ಯವನ್ನು ನೀಡುತ್ತದೆ. ಮತ್ತು ಶೀತ ಹಾಗೂ ಶಾಖದಿಂದ ರಕ್ಷಿಸುತ್ತದೆ.

ವಿವಾಹದ ಒಪ್ಪಂದದ ನಂತರ ಪುರುಷ ಮತ್ತು ಮಹಿಳೆ ಒಂದು ಬಂಧದಲ್ಲಿ ಬಂಧಿಸಲ್ಪಡುತ್ತಾರೆ. ಅದನ್ನು ಬಲಪಡಿಸುವ ಜವಾಬ್ದಾರಿ ಇಬ್ಬರದ್ದಾಗಿದೆ. ಈ ಸಂಬಂಧ ಪರಸ್ಪರ ವಿಶ್ವಾಸದ ಮೇಲೆ ನಿರ್ಭರವಾಗಿರುತ್ತದೆ. ಪುರುಷನು ಸ್ತ್ರೀಯರ ಭರವಸೆಯನ್ನು ಮುರಿಯಬಾರದು ಮತ್ತು ಸ್ತ್ರೀಯರೂ ಸಹ ಪುರುಷನ ವಿಶ್ವಾಸಕ್ಕೆ ಭಂಗ ತರಬಾರದು. ಆಗ ದಾಂಪತ್ಯ ಜೀವನ ಸುಖವಾಗಿ ಇರುವುದು. ನಂಬಿಕೆ ಮತ್ತು ಪ್ರಮಾಣಿಕತೆಯೂ ಪರಸ್ಪರರ ರಹಸ್ಯಗಳನ್ನು ಇಟ್ಟುಕೊಳ್ಳುವ ಅಗತ್ಯವಿರುತ್ತದೆ. ಉನ್ನತ ನೈತಿಕತೆಯನ್ನು ತೋರಿಸಬೇಕಾಗುತ್ತದೆ. ಹೀಗೆ ಮಾಡುವುದರಿಂದ ಸಮಾಜದಲ್ಲಿ ಉತ್ತಮ ಸ್ಥಾನ ಲಭಿಸುತ್ತದೆ. ಯಾರಿಗೂ ಆಕ್ಷೇಪ ಎತ್ತುವ ಧೈರ್ಯ ಬರುವುದಿಲ್ಲ. ಒಬ್ಬರನ್ನು ಒಬ್ಬರು ಸಹಿಸಿಕೊಳ್ಳುವುದು ವಿನತೆಯನ್ನು

ಮುಚ್ಚಿಕೊಳ್ಳುವುದು, ಪರಸ್ಪರರ ದೋಷಗಳನ್ನು ಮರೆಮಾಚುವುದು ಭೂಷಣವಾಗುವುದು ಇದು ಖುರ್‌ಆನ್‌ನ ಬೋಧನೆಯಾಗಿದೆ. ಇದಕ್ಕಾಗಿ ತಾಳ್ಮೆ, ಶಾಂತಿ, ಮತ್ತು ಕೋಪದ ನಿಯಂತ್ರಣ ಅಗತ್ಯ. ನಿಯಮತ್ರಣ ತಪ್ಪಿದರೆ ಕಳಂಕ ಸೃಷ್ಟಿಯಾಗುತ್ತದೆ. ಇದು ಅಲ್ಲಾಹನಿಗೆ ಅನಿಷ್ಟಕರವಾಗಿದೆ.

ಹಝ್ರತ್ ಪೈಗಂಬರ್(ಸ) ರವರು ನುಡಿದರು. **ಇನ್ನ ಮಿನ್ ಅಶ್‌ರ್‍ರಿಮಿಲ್ ಅಮಾನತಿ ಇಂದಲ್ಲಾಹಿ ಯೌಮಲ್ ಖಿಯಾಮತಿರ್‍ರಜುಲ ಯುಫ್‌ಝೀ ಇಲಾ ಇಮ್ರಅತಿಹೀ ವ ತುಫ್‌ಝೀ ಇಲೈಹಿ ಸುಮ್ಮ ಯನ್‌ಶುರು ಸಿರ್‍ರಹಾ** (ಸುನನ್ ಅಬಿದಾವೂಹ್, ಕಿತಾಬುಲ್ ಅದಬ್) ಅನುವಾದ: ಪುನರುತ್ಥಾನ ದಿನದಂದು ಪುರುಷನು ತನ್ನ ಹೆಂಡತಿಯೊಂದಿಗೆ ಸಂಬಂಧಗೊಳಿಸಿ ಅದರ ರಹಸ್ಯಗಳನ್ನು ಜನರಲ್ಲಿ ಹೇಳುವುದು ಬಹುದೊಡ್ಡ ಅಪರಾಧವಾಗಿದೆ.

ಮಹಿಳೆಯರ ಕರ್ತವ್ಯವೂ ಆಗಿದೆ. ಪರಸ್ಪರರ ರಹಸ್ಯಗಳನ್ನು ಬಹಿರಂಗಗೊಳಿಸಬಾರದು. ಕೆಲಸಂದರ್ಭಗಳಲ್ಲಿ ಪೋಷಕರು ಪರಸ್ಪರರ ಪ್ರಶ್ನೆಗಳನ್ನು ಕೇಳುವ ಅಭ್ಯಾಸವನ್ನು ಹೊಂದಿರುತ್ತಾರೆ. ಅವರ ಹಸ್ತಕ್ಷೇಪವು ವಿಷಯಗಳನ್ನು ಇನ್ನಷ್ಟು ಹದಗೊಳಿಸುತ್ತದೆ. ಆದ್ದರಿಂದ ಗಂಡ ಹೆಂಡತಿ ಇಬ್ಬರ ಕರ್ತವ್ಯವಾಗಿರಬೇಕು. ಮನೆ ಮಾತುಗಳನ್ನು ಬೇರೆ ಜನರಲ್ಲಿ ಬಹಿರಂಗಗೊಳಿಸಬಾರದು. ಇತರರಿಗೆ ಹೇಳಬಾರದು ಮತ್ತು ಇತರರ ಮಾತುಗಳನ್ನು ಕೇಳಬಾರದು. ಉಡಿಗೆಯೂ ಹರಿದರೆ ಅದು ಕಳಂಕಿತವಾಗುತ್ತದೆ.

**ಪವಿತ್ರ ಖುರ್‌ಆನ್ ಪುರುಷರಂತೆ ಮಹಿಳೆಯರಿಗೂ ಜೀವಿಸುವ ಹಕ್ಕು ನೀಡುತ್ತದೆ**

ಇಸ್ಲಾಂ ಧರ್ಮಕ್ಕಿಂತ ಮುಂಚೆ ಹೆಣ್ಣು ಮಗು ಹುಟ್ಟಿದರೆ ಎಷ್ಟೊಂದು ಕೆಟ್ಟದಾಗಿ ಭಾವಿಸುತ್ತಿದ್ದರೆಂದರೆ, ಕೆಲ ಸಂದರ್ಭಗಳಲ್ಲಿ ಅವಳನ್ನು ಜೀವಂತವಾಗಿ ಸಮಾದಿ ಮಾಡುತ್ತಿದ್ದರು. ಖರ್ಚು ವೆಚ್ಚಗಳು ಮತ್ತು ಜವಾಬ್ದಾರಿಗಳ ಭಯದಿಂದ ಮಗಳ ಅಸ್ತಿತ್ವದ ಭಾರವಾಗಿತ್ತು. ಅಲ್ಲಾಹನು ಸಂತಾನವನ್ನು ಹೊದಿಸಲು ನಿಷೇಧಿಸುತ್ತಾನೆ. ಅಲ್ಲಾಹನು ಸಂತಾನವನ್ನು ಅನುಗ್ರಹ ಮತ್ತು ಸ್ವರ್ಗದ ಸ್ವಾರ್ಥವನ್ನು ನೀಡಿದ್ದಾನೆ. ಈ ಪೈಕಿ ಖುರ್‌ಆನ್ ಹೇಳುತ್ತದೆ.

**ವಲಾ ತಖ್ತುಲೂ ಔಲಾದುಕುಮ್ ಖಶ್ಯತ ಇಮ್ಲಾಖಿನ್, ನಹ್‌ನು ನರ್ಝುಖುಹುಮ್ ವ ಇಯ್ಯಾಕುಮ್, ಇನ್ನ ಖತ್ಲಹುಮ್ ಕಾನ ಖಿತ್‌ಅನ್ ಕಬೀರಾ** (ಬನೀ ಇಸ್ರಾಈಲ್: 32) ಅನುವಾದ: ಒಳ್ಳೆತನಕ್ಕೆ ಹೆದರಿಕೊಂಡು ನಿಮ್ಮ ಮಕ್ಕಳನ್ನು ಕೊಲ್ಲಬೇಡಿರಿ. ಅವರಿಗೂ ಇಮಗೂ ಆಹಾರ ನೀಡುವವರು ನಾವೆ ಆಗಿದ್ದೇವೆ. ಅವರನ್ನು ಕೊಲ್ಲುವುದು ಖಂಡಿತವಾಗಿಯೂ ಮಹಾಪಾಪವಾಗಿದೆ.

**ಪ್ರವಾದಿ ಮುಹಮ್ಮದ್(ಸ) ರವರು ಹೆಣ್ಣು ಮಕ್ಕಳ ಜನನವನ್ನು ಹೊರೆಯ ಬದಲು ವರವಾಗಿ ವಿವರಿಸಿದ್ದಾರೆ.**

ಅನುವಾದ: ಯಾರಿಗಾದರು ಹೆಣ್ಣುಮಗು ಜನಿಸಿದಾಗ ದೇವರು ಅವರ ಬಳಿಗೆ ದೇವದೂತರನ್ನು ಕಳುಹಿಸುತ್ತಾನೆ. ಅವರು ಬಂದು ಹೇಳುತ್ತಾರೆ. "ಓ ಕುಟುಂಬದವರೇ ನಿಮ್ಮ ಮೇಲೆ ಶಾಂತಿಯಿರಲಿ. ಅವರು ಆ ಹೆಣ್ಣು ಮಗುವನ್ನು ತಮ್ಮ ರೆಕ್ಕೆಗಳ ನೆರಳಿನಲ್ಲಿ ಸೇರಿಸಿಕೊಳ್ಳುತ್ತಾರೆ. ಮತ್ತು ಅವಳ ಶಿರದ ಮೇಲೆ ಕೈಯನ್ನು ಸವರುತ್ತಾ ಹೇಳುತ್ತಾರೆ. ಇದೊಂದು ದುರ್ಬಲ ಆತ್ಮವಾಗಿದೆ. ದುರ್ಬಲ ಆತ್ಮದಿಂದ ಹುಟ್ಟಿದೆ. ಯಾರು ಈ ಹುಡುಗಿಯನ್ನು ಮೇಲ್ವಿಚಾರಣೆ ಮಾಡುವರು ಪೋಷಿಸುವವರು ಪುನರುತ್ಥಾನ ದಿನದವರೆಗೆ ಅವರಿಗೆ ಅಲ್ಲಾಹನ ಸಹಾಯ ದೊರೆಯುವುದು.

**ಹೆಣ್ಣು ಮಗು ಉತ್ತಮ ರೀತಿಯಲ್ಲಿ ಶಿಕ್ಷಣ ಪಡೆಯುವುದು ಅವಳ ಹಕ್ಕಾಗಿದೆ.**

ಹಝ್ರತ್ ಪೈಗಂಬರ್(ಸ) ಪುರುಷರು ಮತ್ತು ಮಹಿಳೆಯರು ಶಿಕ್ಷಣ ಪಡೆಯುವುದು ಅವರ ಕರ್ತವ್ಯವೆಂದು ಘೋಷಿಸಿದರು. ಹುಡುಗಿಯರಿಗೆ ಶಿಕ್ಷಣ ನೀಡುವುದು ಮುಖ್ಯ ಕಾರ್ಯವಾಗಿದೆ ಎಂದು ಹೇಳಿದರು. ಮತ್ತು ಅವರಿಗೆ ಸ್ವರ್ಗದ ಸುವಾರ್ತೆಯನ್ನು ನೀಡಿದರು. ಪವಿತ್ರ ಖುರ್‌ಆನ್ ಪುರುಷ ಮತ್ತು ಸ್ತ್ರೀಯರಿಗೆ ಈ ಪ್ರಾರ್ಥನೆಯನ್ನು ಕಲಿಸಿದೆ. **ರಬ್ಬಿ ಝಿದ್‌ನೀ ಇಲ್‌ಮಾ** ಓ ನನ್ನ ಪ್ರಭು ನನ್ನ ಜ್ಞಾನವನ್ನು ಹೆಚ್ಚಿಸು. (ತಾಹಾ: 115)

ಒಂದು ಹದೀಸಿನಲ್ಲಿ ಹೀಗೆ ವಿವರ ಬರುತ್ತದೆ. **ಅನ್ ಅಬ್ದಿಲ್ಲಾಹಿಬ್ ಮಸ್‌ಊದ್ ರಝಿಯಲ್ಲಾಹು ಅನ್‌ಹು ಖಾಲ ಖಲತಿನ್ನಿಸಾಉ ಲಿನ್ನಬೀ ಸಲ್ಲಲ್ಲಾಹು ಅಲೈಹಿವ ಸಲ್ಲಮ ಘಲಬನಾ ಅಲೈಕರ್‍ರಿಜಾಲು ಫಜ್ ಅಲ್ಲನಾ ಯೌಮ್ ಮಿನ್ ನಫ್ಸಕ ಫವದಹುನ್ನ ಯೌಮನ್ ಲಖಿಯಹುನ್ನ ಫೀಹೀ ಫವಝುಹುನ್ನ ವ ಅಮರ ಹುನ್ನ** (ಸಹೀಹ್ ಬುಖಾರಿ) ಈ ಹದೀಸಿನಿಂದ ತಿಳಿದು ಬರುವುದೇನೆಂದರೆ ಪ್ರವಾದಿ(ಸ) ರವರು ಮಹಿಳೆಯರ ತರಬೇತಿಗೋಸ್ಕರ ಒಂದು ದಿನವನ್ನು ನಿಗದಿ ಮಾಡಿದ್ದರು. ಅದರಲ್ಲಿ ಅವರು ಉಪದೇಶ ನೀಡುತ್ತಿದ್ದರು ಮತ್ತು ಅವರ ಪ್ರಶ್ನೆಗಳಿಗೆ ಉತ್ತರ ನೀಡುತ್ತಿದ್ದರು.

**ಮನ್ ವುಲಿದತ್‌ಲಹು ಇಬ್ನತುನ್ ಫಲಮ್ ಯಇದ್‌ಹಾ ವಲಮ್ ಯುಹಿನ್‌ಹಾ ವಲಮ್ ಯುಸಿರ್ ವಲದಹೂ ಅಲೈಹಾ ಯಅ್‌ನಿ ಅಝ್ಝುಕರ ಅದ್‌ಕಲಹುಲ್ಲಾಹು ಬಿಹಲ್ ಜನ್ನ** (ರಿವಾಹ್ ಅಹ್ಮದ್, ವಸ್ಸಹೀಹ್ ಅಹ್ಕಾಮ್)

ಅರ್ಥ: ಪ್ರವಾದಿ(ಸ) ರವರು ಹೇಳಿದರು. ಯಾರಲ್ಲಿ ಮಗಳು ಜನಿಸಿತು, ಅವನು ಅವಳನ್ನು ಕೊಲ್ಲದೆ, ಅವಳೊಂದಿಗೆ ಅನುಚಿತವಾಗಿ ವರ್ತಿಸದೆ, ಮತ್ತು ಮಗನಿಗೆ ಅವಳಿಗಿಂತ ಆದ್ಯತೆಯನ್ನು ನೀಡದಿದ್ದರೆ, ಅಲ್ಲಾಹನು ಅವಳ ಮೂಲಕ ಅವನನ್ನು ಸ್ವರ್ಗಕ್ಕೆ ಕಳುಹಿಸುವನು.

ಪವಿತ್ರ ಖುರ್‌ಆನ್‌ನ ಭೋಧನೆಗಳು ಮತ್ತು ಪ್ರವಾದಿ(ಸ) ರವರ ನಡವಳಿಕೆಗಳಿಂದ ತಿಳಿದುಬರುವುದೇನೆಂದರೆ ಮಗಳಿಗೆ ಒಳ್ಳೆಯ ಶಿಕ್ಷಣ ನೀಡುವುದು, ಒಳ್ಳೆಯ ತರಬೇತಿ ನೀಡುವುದು ಮತ್ತು ಎಲ್ಲಾ ರೀತಿಯಿಂದ ಅವಳ ಬಗ್ಗೆ ಕಾಳಜಿ ವಹಿಸುವುದು ಪ್ರತಿಯೊಬ್ಬ ಮುಸಲ್ಮಾನನ ಕರ್ತವ್ಯವಾಗಿದೆ.

**ಮಹಿಳೆಯ ಭಾವನೆಗಳ ಬಗ್ಗೆ ಕಾಳಜಿ ವಹಿಸುವುದು ಅವಳ ಹಕ್ಕಾಗಿದೆ.**

ಪ್ರಪಂಚದ ಅನೇಕ ಸಮಾಜಗಳಲ್ಲಿ ಮಹಿಳೆಯರೊಂದಿಗೆ ಎಷ್ಟರಮಟ್ಟಿಗೆ ಕೆಟ್ಟದಾಗಿ ವರ್ತಿಸುತ್ತಿದ್ದರೆಂದರೆ, ಅವಳಿಗೆ ಭಾವನೆಗಳೇ ಇರುವುದಿಲ್ಲ ಎಂದು ಭಾವಿಸುತ್ತಿದ್ದರು. ಅವಳೊಂದು ಪುಕ್ಕಟೆ ದೊರೆಯುವ ವಸ್ತುವಿನ ತರಹ, ಅವಳನ್ನು ಮಾರಾಟ ಮಾಡಬಹುದು ಮತ್ತು ಖರೀದಿಸಬಹುದು, ವಂಶಿಕವಾಗಿ ಪಾಲು ಮಾಡಬಹುದು, ಒಟ್ಟಿನಲ್ಲಿ ಮಹಿಳೆಯನ್ನು ಮನುಷ್ಯನೆಂದೇ ಭಾವಿಸುತ್ತಿರಲಿಲ್ಲ. ಬದಲು ಅವರ ದೃಷ್ಟಿಯಲ್ಲಿ ಅದೊಂದು ಆಸ್ತಿಯಂತೆ ಬದಲಾವಣೆಗೊಳ್ಳುವ ವಸ್ತುವಾಗಿತ್ತು. ಆದರೆ ಅವುಗಳ ವಿಧಿ ಮಾತ್ರ ಬದಲಾಗುತ್ತಿರಲಿಲ್ಲ.

ಪವಿತ್ರ ಖುರ್‌ಆನ್ ಮಹಿಳೆಯ ಹಕ್ಕುಗಳನ್ನು ನಿರ್ಧರಿಸಿತು. ಮತ್ತು ಮಹಿಳೆಗೆ ಗೌರವದ ಸ್ಥಾನವನ್ನು ನೀಡಿತು. ಪ್ರವಾದಿ(ಸ) ರವರು ಮಹಿಳೆಯರ ನಾಜೂಕುತನ, ದುರ್ಬಲತೆ ಮತ್ತು ಅತೀ ಸೂಕ್ಷ್ಮತೆಯನ್ನು ಅರಿತು ಅವರೊಂದಿಗೆ ಉತ್ತಮವಾಗಿ ವರ್ತಿಸುವ ಉಪದೇಶವನ್ನು ನೀಡಿದ್ದಾರೆ. ಒಂದು ಮಗುವಿನ ಅಳುವಿನ ಧ್ವನಿ ಬಂದಾಗ ನಮಾಝ್‌ನ್ನು ಮೊಟಕುಗೊಳಿಸಿದರು. ಏಕೆಂದರೆ ಅದರಿಂದ ಅವಳ ತಾಯಿಗೆ ಕಷ್ಟವಾಗಬಾರದು. (ಬುಖಾರಿ, ಕಿತಾಬುಲ್ ಅಝಾನ್)

ಪ್ರವಾದಿ(ಸ) ರವರು ಪ್ರಯಾಣಕ್ಕೆ ಹೊರಟಾಗ ಮಹಿಳೆಯರು ಜೊತೆಗಿದ್ದರೆ ಒಂಟೆಗಳನ್ನು ಸಮಾಧಾನವಾಗಿ ಚಲಿಸಲು ಆಜ್ಞಾಪಿಸುತ್ತಿದ್ದರು. ಇಂತಹದೇ ಒಂದು ಸಂದರ್ಭದಲ್ಲಿ ಸಿಪಾಯಿಗಳು ತಮ್ಮ ಕುದುರೆಗಳ ತಳಿ ಮತ್ತು ಒಂಟೆಗಳ ಗೊರಸ್ಸುಗಳನ್ನು ಎತ್ತಿದಾಗ ಹೇಳಿದರು. **ರಿಫ್‌ಖನ್ ಬಿಲ್ ಖವಾರೀರ** ಶಾಂತವಾಗಿ ನಡೆಯಿರಿ. ಮಹಿಳೆಯರು ಜೊತೆಗಿದ್ದಾರೆ. ಈ ರೀತಿ ಒಂಟೆಗಳನ್ನು ನೀವು ಓಡಿಸಿದರೆ ಗಾಜುಗಳು ಚೂರು ಚೂರು ಆಗುವುದು. (ಬುಖಾರಿ, ಕಿತಾಬುಲ್ ಅದಬ್)

**ಇಸ್ಲಾಂ ಧರ್ಮವು ಪುರುಷರಂತೆ ಮಹಿಳೆಯರಿಗೂ ಸಮಾರಂಭಗಳಲ್ಲಿ ಭಾಗವಹಿಸುವ ಹಕ್ಕು ನೀಡಿದರು.**

ಪವಿತ್ರ ಖುರ್‌ಆನ್ ಮಹಿಳೆಯರ ಹಕ್ಕುಗಳನ್ನು ಮತ್ತು ಸಮಾಜದಲ್ಲಿ ಅವರ ಸ್ಥಾನವನ್ನು ಧಾರಾಳವಾಗಿ ಸ್ಥಾಪಿಸಿದೆ. ಮತ್ತು ಸಮಾಜದ ಕಾರ್ಯಕ್ರಮಗಳಲ್ಲಿ ಅವರನ್ನು ಸೇರಿಸಲು ಒತ್ತಾಯಿಸಿದೆ. ಆದ್ದರಿಂದ ಈದ್ ಸಂದರ್ಭದಲ್ಲಿ ಎಲ್ಲಾ ಮಹಿಳೆಯರು ಮತ್ತು ಹುಡುಗಿಯರು ಇಸ್ಲಾಮಿಕ್ ಸಮಾರಂಭಗಳಲ್ಲಿ ಭಾಗವಹಿಸಲು ಪ್ರವಾದಿ ಮಹಮ್ಮದ್(ಸ) ರವರು ಸೂಚಿಸಿದರು.

ಹುಡುಗಿಯೊಬ್ಬಳಿಗೆ ಮುಸುಕು ಹಾಕಲು ಚಾದರ ಇಲ್ಲದಿದ್ದರೆ ಅವಳು ಪ್ರಾರ್ಥನೆ ಮಾಡದ ಮಹಿಳೆಯರಿಂದ ಚಾದರ ಒಂದನ್ನು ಎರವಲು ಪಡೆಯಲು ಹೇಳಿದರು. ನಮಾಝ್ ಮಾಡದವರನ್ನು ಸಹ್ ಈದ್ ಸಮಾರಂಭದಲ್ಲಿ ಭಾಗವಹಿಸಲು ಪ್ರೇರೇಪಿಸಿದರು. (ಬುಖಾರಿ. ಕೀತಾಬುಲ್ ಈದೇನ್)

ಪವಿತ್ರ ಖುರ್‌ಆನ್‌ನಲ್ಲಿ ಮಹಿಳೆಯರ ಹಕ್ಕುಗಳ ಮೇಲೆ ಒತ್ತು ನೀಡಲಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ. ಓ ವಿಶ್ವಾಸಿಗಳೇ, ಬಲವಂತವಾಗಿ ಸ್ತ್ರೀಯರ ಅನುವಂಶಿಕತೆಯನ್ನು ಪಡೆದುಕೊಳ್ಳುವುದು ನಿಮಗೆ ಸಮ್ಮತವಲ್ಲ. ಮತ್ತು ಅವರ ಬಹಿರಂಗ ಅಸಭ್ಯತೆಯನ್ನು, ತಪ್ಪಿತಸ್ಥರನ್ನು ಹೊರತುಪಡಿಸಿ, ನೀವು ಅವರಿಗೆ ನೀಡಿದ್ದನ್ನು ತೆಗೆದುಕೊಳ್ಳಬೇಕು ಎಂಬ ಉದ್ದೇಶದಿಂದ ಅವರನ್ನು ತೊಂದರೆಗೊಳಪಡಿಸಬೇಡಿ. ಅವರೊಂದಿಗೆ ಉತ್ತಮವಾಗಿ ವ್ಯವಹರಿಸಿರಿ. ನೀವು ಅವರನ್ನು ಇಷ್ಟಪಡದಿದ್ದರೆ ನೀವು ಒಂದು ವಿಷಯವನ್ನು ಇಷ್ಟಪಡುವ ಸಾಧ್ಯತೆ ಇದೆ. ಮತ್ತು ಅಲ್ಲಾಹನು ಅದರಲ್ಲಿ ಒಳಿತನ್ನು ನಿರ್ಧರಿಸಬಹುದು. (ಅನ್ನಿಸಾ-20)

ಪವಿತ್ರ ಖುರ್‌ಆನ್‌ನ ಭೋಧನೆಯ ಪ್ರಕಾರ ತಾಯಿಯೂ ಮಕ್ಕಳ ಅನುವಂಶಿಕತೆಯ ಪಾಲಿಗೆ ಅರ್ಹಳು. ಅದೇ ರೀತಿ ಹೆಂಡತಿಯೂ ಪತಿಗೆ ಅರ್ಹಳು. ಮಗಳು ತಂದೆಗೆ ಅರ್ಹಳು, ಕೆಲವು ಸಂದರ್ಭಗಳಲ್ಲಿ ಸಹೋದರಿಯನ್ನು ಸಹೋದರರ ಉತ್ತರಾಧಿಕಾರಿಯೆಂದು ಹೇಳಲಾಗಿದೆ.

**ಮಹಿಳೆಯರಿಂದ ಸಲಹೆ ಪಡೆಯುವ ಹಕ್ಕಿದೆ.**

ಪ್ರವಾದಿ(ಸ) ರವರು ಹೇಳಿದರು. ಕೆಲವು ಮುಖ್ಯ ಕಾರ್ಯಗಳಲ್ಲಿ ಮಹಿಳೆಯರಿಂದಲೂ ಸಲಹೆ ಪಡೆಯಬೇಕು. ಅವರು ಸ್ವಯಂ ಮಹಿಳೆಯರಿಂದ ಸಲಹೆ ಪಡೆಯುತ್ತಿದ್ದರು. ಹಝ್ರತ್ ಉಮರ್(ರ) ಅವರ ಕಾಲದಲ್ಲಿ ಕೆಲವು ಘಟನೆಗಳಿಂದ ತಿಳಿದುಬರುತ್ತದೆ. ಸಾಮೂಹಿಕ ಸಮಸ್ಯೆಗಳಲ್ಲಿ ಇಸ್ಲಾಂ ಧರ್ಮವು ಮಹಿಳೆಗೆ ಸಲಹೆಯನ್ನು ನೀಡುವ ಹಕ್ಕು ನೀಡಿದೆ.

ಹಝ್ರತ್ ಉಮರ್ ಫಾರುಖ್(ರ) ರವರು ಹೇಳಿದರು. ಅಲ್ಲಾಹನ ಆಣೆ ನಾವು ಅಜ್ಞಾನತೆಯ ಕಾಲದಲ್ಲಿ ಮಹಿಳೆಯರಿಗೆ ಯಾವ ಪ್ರಾಮುಖ್ಯತೆಯನ್ನು ನೀಡಲಿಲ್ಲ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಅವರ ಹಕ್ಕುಗಳ ಬಗ್ಗೆ ನಿಯಮಗಳನ್ನು ಬಹಿರಂಗ ಪಡಿಸುವವರೆಗೆ ಮತ್ತು ಅವರನ್ನು ಉತ್ತರಾಧಿಕಾರಕ್ಕೆ ಅರ್ಹರನ್ನಾಗಿ ಮಾಡುವವರೆಗೆ. (ಬುಖಾರಿ, ಕಿತಾಬುತ್ತಫ್ಸೀರ್)

ಮಹಿಳೆಗೆ ತನ್ನೊಂದಿಗೆ ಸೌಮ್ಯವಾಗಿ ವರ್ತಿಸುವ ಹಕ್ಕಿದೆ. ಮಹಿಳೆಯನ್ನು ಶಿಕ್ಷಿಸಲು ಇಸ್ಲಾಮಿನಲ್ಲಿ ಅನುಮತಿ ಇದೆ ಎಂದು ಆಕ್ಷೇಪಿಸಲಾಗುತ್ತದೆ. ಈ ಅನುಮತಿಯು ಮನೆಗಳ ಶಾಂತಿಯನ್ನು ಕಾಪಾಡಿಕೊಳ್ಳಲು ಕೆಲವು ಶರತ್ತುಗಳೊಂದಿಗೆ ಅನುಮತಿ ನೀಡಲಾಗಿದೆ. ಆದರೆ ಅದನ್ನು ದುರುಪಯೋಗಪಡಿಸುವ ಭಯದಿಂದ ಅದನ್ನು ನಿಷೇಧಿಸಲಾಗಿದೆ.

**"ಲಾ ತಝ್‌ರಿಬು ಇಮಾಅಲ್ಲಾಹ್"** ಮಹಿಳೆಯರು ಅಲ್ಲಾಹನ ದಾಸಿಯರು, ಅವರ ಮೇಲೆ ಕೈ ಬೀಸುವುದು ಸಲ್ಲದು.

ಮಹಿಳೆಯರ ಮೇಲೆ ಕಠಿಣವಾಗಿ ವರ್ತಿಸುವವರ ಬಗ್ಗೆ ಹೇಳಿದರು. **"ಲೈಸ ಉಲಾಯಿಕ ಬಿಖಿಯಾರಿಕುಮ್"** (ಸುನನ್ ಅಬಿ ದಾವೂದ್, ಕಿತಾಬುನ್ನಿಕಾಹ್) ಅಂದರೆ ಮಹಿಳೆಯರೊಂದಿಗೆ ಕಠಿಣವಾಗಿ ವರ್ತಿಸುವವರು ಒಳ್ಳೆಯ ಜನರಲ್ಲ.

ಹಝ್ರತ್ ಮಾವೀಯ ಬಿನ್ ಹಿಂದ್ ವರದಿ ಮಾಡುತ್ತಾರೆ. "ನಾನು ರಸೂಲುಲ್ಲಾಹ್(ಸ) ರವರಿಗೆ ಕೇಳಿದೆ. ಓ ಪ್ರವಾದಿಯರೇ(ಸ) ಹೆಂಡತಿಯ ಬಗ್ಗೆ ನಮ್ಮ ಮೇಲೆ ಯಾವ ಹಕ್ಕು ಇದೆ. ಅವರು ಹೇಳಿದರು. ಅಲ್ಲಾಹನು ನಿಮಗೆ ನೀಡಿದ್ದು ಅವರಿಗೆ ನೀಡಿ ಮತ್ತು ನಿಮಗೆ ನೀಡಿದ ಉಡುಗೆ ಅವರಿಗೂ ನೀಡಿ ಅವರ ಕಪಾಳಕ್ಕೆ ಒಡೆಯಬಾರದು ಮತ್ತು ಬೈಯಬಾರದು, ಮನೆಯಿಂದ ಹೊರ ಹಾಕಬಾರದು. (ಅಬುದಾವೂದ್).

ಖುರ್‌ಆನ್ ಮಹಿಳೆಯರ ಎಲ್ಲಾ ರೀತಿಯ ಹಕ್ಕುಗಳನ್ನು ರಕ್ಷಿಸುವ ಮತ್ತು ಸೌಮ್ಯತೆಯಿಂದ ಹಾಗೂ ದಯೆಯಿಂದ ವರ್ತಿಸಲು ಆದೇಶಿಸಿದ ವಿಶ್ವದ ಏಕೈಕ ಕಾನೂನು ಗ್ರಂಥವಾಗಿದೆ. ಖುರ್‌ಆನ್ ಹೇಳುತ್ತದೆ. **"ವ ಆಶಿರುಹುನ್ನ ಬಿಲ್ ಮಾರೂಫಿ"** ನೀವು ಅವರೊಡನೆ ಉತ್ತಮ ರೀತಿಯಲ್ಲಿ ವರ್ತಿಸಿರಿ.

ಇದೇ ಭೋಧನೆಗಳ ದೃಷ್ಟಿಯ ಮೇರೆಗೆ ನಮ್ಮ ಪ್ರೀತಿಯ ಪ್ರವಾದಿ ಹಝ್ರತ್ ಮಹ್ಮಮದ್ ಮುಸ್ತಫಾ(ಸ) ಹೇಳುತ್ತಾರೆ. **"ಖೈರುಕುಂ ಖೈರುಕುಂ ಲಿ ಅಹಲಿಹಿ ವಅನಾ ಖೈರುಕುಂ ಲೀ ಅಹಲೀ"** (ಸನನ್ ತಿರ್ಮಿಧಿ, ಕಿತಾಬುಲ್ ಮನಾಖಿಬ್) ಅಂದರೆ ತನ್ನ ಹೆಂಡತಿಯೊಡನೆ ಉತ್ತಮವಾಗಿ ವರ್ತಿಸುವವನು ಉತ್ತಮ ಮತ್ತು ನಾನು ಅವರಿಗೆ ಮಾದರಿಯಾಗಿದ್ದೇನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮಹಿಳೆಯರ ವ್ಯಭಿಚಾರದ ವಿಷಯ ಹೊರತುಪಡಿಸಿ ಎಲ್ಲಾ ದುರ್ಗುಣಗಳನ್ನು ಸಹಿಸಿಕೊಳ್ಳಬೇಕು. ಪುರುಷರು ಹೆಣ್ಣಿನ ಜೊತೆ ಜಗಳವಾಡುವುದು ನಾಚಿಕೆಯ ವಿಷಯವಾಗಿದೆ. ಅಲ್ಲಾಹನು ನಮ್ಮನ್ನು ಪುರುಷರನ್ನಾಗಿ ಮಾಡಿದ್ದು ನಮ್ಮ ಅನುಗ್ರಹವಾಗಿದೆ. ನಾವು ಮಹಿಳೆಯರನ್ನು ಸಂತೋಷ ಮತ್ತು ಸೌಮ್ಯತೆಯಿಂದ ನಡೆಯಿಸಿ ಕೊಳ್ಳಬೇಕು.

ಒಮ್ಮೆ ಸ್ನೇಹಿತನ ಅಸಭ್ಯತೆ ಮತ್ತು ಅಸಭ್ಯ ಭಾಷೆಯ ಬಗ್ಗೆ ತಿಳಿಸಲಾಯಿತು. ಅವನು ತನ್ನ ಹೆಂಡತಿಯೊಂದಿಗೆ ಕಠೋರವಾಗಿ ವರ್ತಿಸುತ್ತಾನೆ ಎಂದು ದೂರಲಾಯಿತು. ಹುಜೂರ್(ಅ) ಇದರಿಂದ ಬಹಳ ದುಃಖಿತರಾಗಿ ಹೇಳಿದರು. ನಮ್ಮ ಸ್ನೇಹಿತರು ಈ ರೀತಿ ಆಗಬಾರದು. ಒಮ್ಮೆ ನಾನು ಹೆಂಡತಿಯೊಂದಿಗೆ ಗಟ್ಟಿಯಾದ ಧ್ವನಿಯಲ್ಲಿ ಮಾತನಾಡಿದೆ. ಅವಳು ದುಃಖದಿಂದ ಅಳುತ್ತಿದ್ದಳು ಎಂದು ನನಗೆ ಅನಿಸಿತು. ಆಮೇಲೆ ಎಂದೂ ನನ್ನ ಬಾಯಿಯಿಂದ ಕಟುವಾದ ಪದಗಳನ್ನು ಬರಲಿಲ್ಲ. ಅದರ ನಂತರ ನಾನು ದೀರ್ಘ ಕಾಲದವರೆಗೆ ಕ್ಷಮೆಗಾಗಿ ಪ್ರಾರ್ಥಿಸಿದೆ. ಮತ್ತು ಆತ್ಮೀಯವಾಗಿ ನಫೀಲ್ ನಮಾಝ್‌ಗಳನ್ನು ನಿರ್ವಹಿಸಿದೆನು. ಮತ್ತು ದಾನವನ್ನು ಮಾಡಿದೆನು. ಈ ತಪ್ಪು ನನ್ನ ಯಾವುದೇ ಗುಪ್ತ ಪಾಪದ ಪರಿಣಾಮವಾಗಬಹುದೆಂದು ಇದನ್ನು ಅನುಸರಿಸಿದೆ. (ಮಲ್‌ಫೂಝಾತ ಸಂಪುಟ-1, ಪುಟ-307, ಸಂಚಿಕೆ 1988)

ಪತಿ ತಮ್ಮ ಪತ್ನಿಯರೊಂದಿಗೆ ನಿಜವಾದ ಸ್ನೇಹಿತರಂತೆ ಸಂಬಂಧವನ್ನು ಹೊಂದಿರಬೇಕು. ಈ ಮಹಿಳೆಯರು ತಮ್ಮ ನೈತಿಕತೆಯ ಸಂಬಂಧದಲ್ಲಿ ಮೊದಲ ಸಾಕ್ಷಿಗಳಾಗಿದ್ದಾರೆ. ಅವರೊಂದಿಗೆ ಸಂಬಂಧವು ಉತ್ತಮವಾಗಿಲ್ಲದಿದ್ದರೆ, ಅಲ್ಲಾಹನೊಡನೆ ಹೇಗೆ ಶಾಂತಿಯನ್ನು ಹೊಂದಲು ಸಾಧ್ಯ. ರಸೂಲುಲ್ಲಾಹ್(ಸ) ಹೇಳಿದವರು ತಮ್ಮ ಕುಟುಂಬಕ್ಕೆ ಒಳ್ಳೆಯಾದವನೇ ನಿಮ್ಮಲ್ಲಿ ಉತ್ತಮನು. (ಮಲ್‌ಫೂಝಾತ್, ಸಂಪುಟ-3, ಪುಟ-300, ಸಂಚಿಕೆ 2003)

**ವಿವಾಹ, ತಲಾಕ್, ಖುಲಾ ವಿಷಯದಲ್ಲಿ ಅವರಿಗೆ ಅಧಿಕಾರ ನೀಡುವುದು ಮಹಿಳೆಯರ ಹಕ್ಕಾಗಿದೆ.**

ಇಸ್ಲಾಂನ ಶಿಕ್ಷಣದನ್ವಯ ಪೋಷಕರು ಆದ ನೆಲೆಯಲ್ಲಿ ಹುಡುಗಿಯವರಿಗೆ ಉತ್ತಮ ವರ ಹುಡುಕುವುದು ಅವರ ಕರ್ತವ್ಯವಾಗಿದೆ. ಆದರೆ ಹುಡುಗಿಯ ಒಪ್ಪಿಗೆ ಅನಿವಾರ್ಯವಾಗಿದೆ. ಇಸ್ಲಾಂ ಧರ್ಮವು ದುಷ್ಕರ್ಮಿ ಅಥವಾ ಅಸಮರ್ಥ ಗಂಡನಿಂದ ಖುಲಾ ಮತ್ತು ವಿಚ್ಛೇದನ ಪಡೆಯಲು ಮಹಿಳೆಗೆ ಹಕ್ಕನ್ನು ನೀಡಿದೆ. ವಿಚ್ಛೇದಿತ ಮಹಿಳೆಗೆ ವಿವಾಹವಾಗುವ ಹಕ್ಕಿದೆ. ಅವಳು ತನ್ನ ಕುರಿತು ನಿರ್ಣಯ ಕೈಗೊಳ್ಳುವಲ್ಲಿ ಪೋಷಕರಿಂದ ಹೆಚ್ಚು ಹಕ್ಕು ಹೊಂದಿರುತ್ತಾಳೆ. (ಬುಖಾರಿ ಕಿತಾಬುನ್ ನಿಕಾಹ್)

ಇಸ್ಲಾಂ ಮಹಿಳೆಯರಿಗೆ 'ಮಹರ್' (ವಿವಾಹ ನಿಧಿ, ಮದುವೆಯ ಸಂದರ್ಭದಲ್ಲಿ ವರ ವಧುವಿಗೆ ನೀಡುವ ಹಣ) ಪಡೆಯುವ ಹಕ್ಕು ನೀಡಿದೆ. ಇಸ್ಲಾಂ ಧರ್ಮವು 1400 ವರ್ಷಗಳ ಮೊದಲೇ ಈ ಹಕ್ಕುಗಳನ್ನು ಮಹಿಳೆಯರಿಗೆ ನೀಡಿದೆ. ಪ್ರವಾದಿ(ಸ) ಹೇಳಿದರು. ಯಾರು ಒಬ್ಬ ಮಹಿಳೆಯರೊಂದಿಗೆ ವಿವಾಹವಾಗಿ ಮಹರ್ (ವಿವಾಹ ಧನ) ನೀಡುವುದಿಲ್ಲವೊ ಅವನು ವ್ಯಭಿಚಾರವೆಸಗಿದಂತೆ ಯಾರು ಮಹರ್ (ವಿವಾಹ ಧನ) ಕೊಡಲು ಇಚ್ಛಿಸದೇ ಸಾಲ ಪಡೆಯುತ್ತಾನೆ. ಅವನು ಕಳ್ಳನಿದ್ದಂತೆ. (ಮಜುಮಾ ಅಝ್ವಾವಾಎದ್, ಸಂಪುಟ-4, ಪುಟ-131)

**ಮಹಿಳೆಯರ ಹಕ್ಕುಗಳನ್ನು ಕಸಿದುಕೊಳ್ಳುವವರಿಗೆ ಎಚ್ಚರಿಕೆ**

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅ.ಬಿ.ಅ) ಹೇಳುತ್ತಾರೆ: ಅಲ್ಲಾಹನು ಹೇಳುತ್ತಾನೆ. ಮಹಿಳೆಯರ ಹಕ್ಕುಗಳನ್ನು ಕಸಿದುಕೊಳ್ಳುವವರೇ ಅಥವಾ ಹಕ್ಕುಗಳನ್ನು ಅನ್ಯಾಯದಿಂದ ಕೊಲ್ಲುವವರೆ ನೆನಪಿಡಿರಿ. ಒಂದು ಶಕ್ತಿಶಾಲಿಯಾದ ಅಲ್ಲಾಹನು ನಿಮ್ಮ ಮೇಲೆ ಇದ್ದಾನೆ. ಅಲ್ಲಾಹನ ಆಜ್ಞೆಗಳನ್ನು ಪಾಲಿಸದಿರುವುದು ನೀವು ಭದ್ರತೆಯನ್ನು ಮತ್ತು ಪ್ರೀತಿಯನ್ನು ಸ್ಥಾಪಿಸುವ ಸಾಮಾಜಿಕ ಕಾರ್ಯದಲ್ಲಿ ನೀವು ತಡೆ ಒಡ್ಡುವವರಾಗುವಿರಿ. ಇದು ಅಲ್ಲಾಹನಿಗೆ ಅಪ್ರಿಯವಾದ ವಿಷಯವಾಗಿದೆ. ಆದ್ದರಿಂದ ಗಮನಕೊಡಿ, ಎಚ್ಚರವಹಿಸಿ ಮತ್ತು ಹಕ್ಕುಗಳನ್ನು ಪಾಲಿಸುವ ಕಡೆ ಗಮನ ನೀಡಿ. ಆಗ ಅಲ್ಲಾಹನು ಸಹ ನಿಮ್ಮ ಮೇಲೆ ಕರುಣೆ ತೋರುವನು. ಮತ್ತು ಅವನು ನಿಮ್ಮ ಪರವಾಗಿ ನಿಲ್ಲುವನು.

(ಖುತ್‌ಬ ಜುಮುಅ, 16-11-2007, ಅಲ್‌ಫಝುಲ್ ಇಂಟರ್ ನ್ಯಾಶ್ನಲ್ 09-11-2007) ...*...*...*...

**ಎಲ್ಲರಿಗೂ 128ನೇ ಜಲ್ಸ ಸಾಲಾನ ಖಾದಿಯಾನ್‌ನ ಶುಭಾಷಯಗಳು**

ಪುಟ ಸಂಖ್ಯೆ 01ರ ಉಳಿದ ಭಾಗ

**ಫಖದ್ ಹರ್ರಮಲ್ಲಹು ಅಲೈಹಿಲ್ ಜನ್ನತ ವಮಾವಾಹುನ್ನಾರು; ವಮಾ ಲಿಝ್ಝುಲಿಮೀನ ಮಿನ್ ಅನ್ಸಾರ್.** (ಅಲ್‌ಬಖರ-73)

ನಿಜವಾಗಿ, ಯಾರು ದೇವನೊಂದಿಗೆ ಏನನ್ನಾದರೂ ಸಂಯೋಜಿಸಿದರೆ, ದೇವನು ಅವನಿಗೆ ಸ್ವರ್ಗವನ್ನು ನಿಷೇಧಿಸಿದ್ದಾನೆ ಮತ್ತು ಅವನ ವಾಸಸ್ಥಾನ ನರಕವಾಗಿದೆ, ದುಷ್ಕರ್ಮಿಗಳಿಗೆ ಸಹಾಯ ಮಾಡುವವರು ಯಾರೂ ಇರುವುದಿಲ್ಲ.

ಶಿರ್ಕ್ (ಸಹಭಾಗಿತ್ವ) ವಿಶೇಷವಾಗಿ ಅಲ್ಲಾಹನಿಗೆ ಪುತ್ರನಿರುವನು ಎಂಬ ನಂಬಿಕೆ ಎಂತಹ ಕೆಟ್ಟ ಮತ್ತು ಪಾಪಕರ ನಂಬಿಕೆಯಾಗಿದೆ ಎಂದರೆ ಅಲ್ಲಾಹನು ಈ ನಂಬಿಕೆಯ ಕುರಿತು ಅಸಮಾಧಾನ ವ್ಯಕ್ತಪಡಿಸಿದ್ದಾನೆ. ಆದ್ದರಿಂದ ಅಲ್ಲಾಹನು ಹೇಳಿದನು.

**ವ ಖಾಲುತ್ತಖಝುರ್ ರಹಮಾನು ವಲದಾ. ಲಖದ್ ಜಿಅ್‌ತುಮ್ಶೈಅನ್ ಇದ್ದಾ. ತಕಾದುಸ್ಸಮಾವಾತು ಯತಖತ್ತರ್‌ನ ಮಿನ್‌ಹು ವತನ್‌ಶಕ್ಕಲ್ ಅರ್ಝು ವತಖಿರ್ರುಲ್ ಜಿಬಾಲು ಹದ್ದಾ. ಅನ್ ದೌ ಲಿರ್ರಹ್ಮಾನಿ ವಲದಾ. ವಮಾಯನ್‌ಬಗ್ಗಿ ಲಿರ್ರಹ್ಮಾನಿ ಅನಿತ್ತಖಿಝು ವಲದಾ. ಇನ್ ಕುಲ್ಲು ಮನ್ ಫಿಸ್ಸಮಾವಾತಿ ವಲ್ ಅರ್ಝಿ ಇಲ್ಲಾ ಆತರ್ರಹ್ಮಾನಿ ಅಬ್ದಾ.** (ಮರಿಯಮ್ 89-94) ಅನುವಾದ: ದಯವಂತನಾದ ದೇವನು ಒಬ್ಬ ಪುತ್ರನನ್ನು ಹೊಂದಿದ್ದಾನೆಂದು ಅವರು ಹೇಳುತ್ತಾರೆ.

ನೀನು ಹೇಳು. ನೀವು ಅತಿ ಘೋರವಾದ ಮಾತನಾಡಿದ್ದೀರಿ. ಪರ್ವತಗಳು ಛಿದ್ರಛಿದ್ರಗೊಳ್ಳಬಹುದು. ಏಕೆಂದರೆ ದಯಾವಂತನಾದ ದೇವನಿಗೆ ಒಬ್ಬ ಪುತ್ರನಿದ್ದಾನೆಂದು ಅವರು ವಾದಿಸುತ್ತಾರೆ.

ತಾನೊಬ್ಬ ಪುತ್ರನನ್ನು ಹೊಂದುವುದು ದಯವಂತನಾದ ದೇವನಿಗೆ ಎಂದಿಗೂ ಭೂಷಣವಲ್ಲ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವವರೆಲ್ಲರೂ ದಯವಂತನಾದ ದೇವನ ಮುಂದೆ ಗುಲಾಮರಂತೆ ಹಾಜರಾಗುವರು.

ಮನುಷ್ಯನು ಜನಾಂಗ ಮತ್ತು ಕುಟುಂಬವನ್ನು ರಕ್ಷಿಸಲು ಮಗನನ್ನು ಬಯಸುತ್ತಾನೆ. ಏಕೆಂದರೆ ಪ್ರತಿಯೊಬ್ಬ ತಂದೆಗೆ ವಿನಾಶದ ದಿನವಿದೆ. ಆದ್ದರಿಂದ ಅವನು ತನ್ನ ಉತ್ತರಾಧಿಕಾರಿಯನ್ನು ಬಯಸುತ್ತಾನೆ. ಮತ್ತು ಮಗನು ತಂದೆಯ ಕೆಲಸವನ್ನು ತೆಗೆದುಕೊಳ್ಳುತ್ತಾನೆ. ಆಸ್ತಿಯನ್ನು ನೋಡಿಕೊಳ್ಳುತ್ತಾನೆ. ಅವನ ಕೆಲಸವನ್ನು ಸುಲಭಗೊಳಿಸಲು ಅವನ ಕೈಯನ್ನು ಬಲಪಡಿಸುತ್ತಾನೆ. ಅವನ ವೃದ್ಧಾಪ್ಯದಲ್ಲಿ ಅವನಿಗೆ ಸಹಾಯ ಮಡುತ್ತಾನೆ. ಆದರೆ ಅಲ್ಲಾಹನು ಈ ಎಲ್ಲಾ ವಿಷಯಗಳಿಂದ ಮುಕ್ತನಾಗಿರುತ್ತಾನೆ. ಅಲ್ಲಾಹನಿಗೆ ಸ್ತೋತ್ರವಾಗಲಿ, ಅಲ್ಲಾಹನು ಎಲ್ಲರಿಗೂ ಅಗತ್ಯವಿರುವವನು ಮತ್ತು ಅವನಿಗೆ ಯಾರೂ ಅಗತ್ಯವಿಲ್ಲ, ಎಲ್ಲವೂ ಅಲ್ಲಾಹನ ಗುಲಾಮನಾಗಿದ್ದಾಗ ಅವನಿಗೆ ಮಗನನ್ನಾಗಿ ಮಾಡುವ ಅವಶ್ಯಕತೆಯಾದರೂ ಏನು. ಅಲ್ಲಾಹನು ನಾಶವಾಗುವ ಜೀವಿಯಲ್ಲ. ಅಲ್ಲಾಹನು ಯಾವಾಗಲೂ ಇದ್ದಾನೆ ಮತ್ತು ಯಾವಾಗಲೂ ಇರುತ್ತಾನೆ. ಅಲ್ಲಾಹನು ಸೂರಃ ಅಲ್ ಬಖರದ ವಚನ 117 ರಲ್ಲಿ ಹೇಳಿದನು;

**ವ ಖಾಲುತ್ತ ಖಝುಲ್ಲಾಹು ವಲದಾ. ಸುಬ್‌ಹಾನಹೂ ಬಲ್‌ಲಹೂ ಮಾ ಫಿಸ್ಸಮಾವಾತಿ ವಲ್ ಅರ್ಝಿ, ಕುಲ್ಲು ಲಹೂ ಖಾನಿತೂನ್** "ಅಲ್ಲಾಹನು ಓರ್ವ ಪುತ್ರನನ್ನು ಹೊಂದಿದ್ದಾನೆ ಎಂದು ಅವರು ಹೇಳುತ್ತಾರೆ. ಅಲ್ಲಾಹನಾದರೋ ಪರಮ ಪವಿತ್ರನು ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನದೇ, ಎಲ್ಲವೂ ಅವನಿಗೆ ವಿಧೇಯ."

ಶಿರ್ಕ್ (ಸಹಭಾಗಿತ್ವ) ಹೊರತುಪಡಿಸಿ ಯಾವ ಪಾಪವೇ ಆಗಲಿ, ಎಷ್ಟರ ಮಟ್ಟದ್ದಾಗಲಿ ಅಲ್ಲಾಹನು ಕ್ಷಮಿಸಬಹುದಾಗಿದೆ. ಆದ್ದರಿಂದ ಅವನು ಸೂರ: ಅಝ್ಝುಮರ್‌ನಲ್ಲಿ ತನ್ನ ಈ ಕ್ಷಮಶೀಲತೆಯ ಕುರಿತು ಹೇಳುತ್ತಾನೆ.

**ಖುಲ್ ಯಾ ಇಬಾದಿಯಲ್ಲಝೀನ ಅಸ್ರಫೂ ಅಲಾ ಅನ್‌ಫುಸಿಹಿಮ್ ಲಾ ತಖ್ನತೂ ಮಿರ್ರಹ್ಮತಿಲ್ಲಾಹ್, ಇನ್ನಲ್ಲಾಹ ಯಗ್‌ಫಿರುಝ್ಝುನೂಬ ಜಮೀಅ, ಇನ್ನಹೂ ಹುವಲ್ ಗ್ಫೂರುರ್ರಹೀಮು.** (ಝುಮರ್-54)

ಅನುವಾದ: ನನ್ನ ಸಂದೇಶವಾಗಿ ಅವರೊಡನೆ ಹೇಳು: "ತಮ್ಮ ಸ್ವಂತ ಆತ್ಮಕ್ಕೆ ದ್ರೋಹವೆಸಗಿದ ನನ್ನ ದಾಸರೇ, ಅಲ್ಲಾಹನ ಕೃಪೆಯ ಬಗ್ಗೆ ನೀವು ನಿರಾಶೆಪಡಬೇಡಿರಿ. ಖಂಡಿತವಾಗಿಯಶೂ ಅಲ್ಲಾಹನು ನಿಮ್ಮ ಎಲ್ಲ ಅಪರಾಧಗಳನ್ನು ಕ್ಷಮಿಸುವನು, ನಿಶ್ಚಯವಾಗಿಯೂ ಅವನು ಅತ್ಯಂತ ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ. **ಕುಲ್ಲು ಶೈಯಿನ್ ಹಾಲಿಕುನ್ ಇಲ್ಲ ವಜ್‌ಹಹು** ಅಲ್ಲಾಹನ ಹೊರತುಪಡಿಸಿ ಎಲ್ಲವೂ ನಾಶ ಹೊಂದಲಿದೆ.

ಆದ್ದರಿಂದ ಅಲ್ಲಾಹನು ನಾಶ ಹೊಂದುವ ಅಥವಾ ವ್ಯಕ್ತಿ ಅಲ್ಲ, ಅವನಿಗೆ ಪುತ್ರನ ಅವಶ್ಯಕತೆ ಇರುವುದಿಲ್ಲ. ಅಲ್ಲಾಹನು ಯಾವಾಗಲೂ ಇದ್ದಾನೆ ಮತ್ತು ಯಾವಾಗಲೂ ಇರುತ್ತಾನೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

"ಮತ್ತು ಎರಡನೆಯ ಭಾಗ ತೌಹೀದ್ ಆಗಿದೆ. ಅಲ್ಲಾಹನ ಹೊರತಾಗಿ ಯಾವ ವಸ್ತುವು ಸ್ವಯಂ ಸೃಷ್ಟಿ ಆದುದಲ್ಲ. ಹಾಗೆಯೇ ಅಲ್ಲಾಹನ ಹೊರತಾಗಿ ಎಲ್ಲ ವಸ್ತುಗಳು ನಾಶ ಹೊಂದಲಿವೆ. ಈ ಬಗ್ಗೆ ಅಲ್ಲಾಹನು ಹೇಳಿದನು. **"ಕುಲ್ಲು ಶೈಯಿನ್ ಹಾಲಿಕುನ್ ಇಲ್ಲ ವಜ್‌ಹಹು"** ಎಂದರೆ ಅಲ್ಲಾಹನ ಹೊರತುಪಡಿಸಿ ಎಲ್ಲವೂ ನಾಶ ಹೊಂದಲಿವೆ ಮತ್ತು ಮರಣವಿದೆ. ಅಲ್ಲಾಹನು ಮಾತ್ರ ಮೃತ್ಯುವಿನಿಂದ ಮುಕ್ತನಾಗಿದ್ದಾನೆ. ಅದೇ ರೀತಿಯಲ್ಲಿ ಇನ್ನೊಂದು ವಚನದಲ್ಲಿ ಅಲ್ಲಾಹನು ಹೇಳುತ್ತಾನೆ. **"ಕುಲ್ಲು ಮನ್ ಅಲೈ ಫಾನ್"** ಎಂದರೆ ಪ್ರತಿಯೊಂದು ಭೂಮಿಯಲ್ಲಿರುವುದು ಕೊನೆಗೆ ಮರಣ ಹೊಂದುವುದು, ಅಲ್ಲಾಹನು ಹೇಳಿದಂತೆ, ವಚನದಲ್ಲಿರುವಂತೆ **"ವಖಲಖ ಕುಲ್ಲ ಶೈಯಿನ್"** ಎಲ್ಲವೂ ಅವನನ್ನು ಹೊರತುಪಡಿಸಿ ಅವನ ಸೃಷ್ಟಿಯಾಗಿದೆ. ಅದೇ ರೀತಿಯಲ್ಲಿ **"ಕುಲ್ಲು ಶೈಯಿನ್ ಹಾಲಿಕುನ್ ಇಲ್ಲ ವಜ್‌ಹಹು"** ಮತ್ತು ವಚನ **"ಕುಲ್ಲಮನ್ ಅಲೈಹ ಫಾನ್"** ಪ್ರಕಾರ ಅಲ್ಲಾಹನನ್ನು ಹೊರತುಪಡಿಸಿ ಮರಣ ಅವಶ್ಯಕತವಾಗಿದೆ. (ಚಶ್ಮ ಮಅರಿಫತ್, ರೂಹಾನಿ ಖಝಾಈನ್, ಸಂಪುಟ-23, ಪುಟ-165)

ಪವಿತ್ರ ಖುರ್‌ಆನ್ ತೌಹೀದ್ (ಏಕದೇವತ್ವ) ವಿಷಯದಿಂದ ತುಂಬಿ ಹೋಗಿದೆ. ಅಲ್ಲಾಹನು ಹೇಳಿದನು: **ವ ಮಿನ್ ಆಯಾತಿಹಿಲ್ಲೈಲ ವನ್ನಹಾರು ವಶ್ಶಮ್‌ಸು ವಲ್ ಖಮರು, ಲಾ ತಸ್ಜುದು ಲಿಶ್ಶಮ್‌ಸಿ ವಲ್ ಖಮರಿ ವಸ್ಜುದೂ ಲಿಲ್ಲಾಹಿಲ್ಲಝೀ ಖಲಖಹುನ್ನ ಇನ್ ಕುನ್‌ತುಮ್ ಇಯ್ಯಾಹು ತಅ್‌ಬುದೂನ್.** (ಫುಸ್ಸಿಲಾತ್ -38)

ಅನುವಾದ: ಮತ್ತು ಅವನ ಚಿಹ್ನೆಗಳಲ್ಲಿ ರಾತ್ರಿ ಮತ್ತು ಹಗಲು, ಸೂರ್ಯ ಮತ್ತು ಚಂದ್ರ, ಸೂರ್ಯನಿಗಾಗಲಿ, ಚಂದ್ರನಿಗಾಗಲಿ ಸಾಷ್ಟಾಂಗ (ನಮಸ್ಕಾರ) ಮಾಡಬೇಡಿ, ಆದರೆ ಅವರಿಬ್ಬರನ್ನು ಸೃಷ್ಟಿಸಿದ ಅಲ್ಲಾಹನಿಗೆ ಮಾತ್ರ ಸಾಷ್ಟಾಂಗ ಮಾಡಿರಿ. ನೀವು ನಿಜವಾದ ಏಕದೇವತಾವಾದಿಗಳಾಗಿದ್ದರೆ.

ಎಲ್ಲಾ ಪ್ರವಾದಿಗಳು ತಮ್ಮ ಜನರಿಗೆ ಮೊದಲ ಮತ್ತು ಅಗ್ರಗಣ್ಯವಾಗಿ ಅಲ್ಲಾಹನನ್ನು ಹೊರತುಪಡಿಸಿ ಯಾರನ್ನೂ ಆರಾಧಿಸಲು ಬೇರೆ ಯಾವುದಾದನ್ನಾದರೂ ಆರಾಧಿಸುವುದರಲ್ಲಿ ಅತೀವ ಆಶ್ಚರ್ಯ ಮತ್ತು ವಿಷಾದವನ್ನು ವ್ಯಕ್ತಪಡಿಸಿದ್ದಾನೆ. ಹಝ್ರತ್ ಇಬ್ರಾಹಿಂ(ಅ) ನೀಡುವ ಅಥವಾ ನಷ್ಟವನ್ನುಂಟು ಮಾಡುವ ಶಕ್ತಿ ಹೊಂದಿರುವುದಿಲ್ಲ. ನಿಮ್ಮ ಈ ವಿಷಯ ಕುರಿತು ನಾವು ವಿಷಾದಪಡುತ್ತೇವೆ, ನೀವು ಅಲ್ಲಾಹನ ಹೊರತು ಆರಾಧಿಸಲು, ಬುದ್ಧಿವಂತಿಕೆಯಿಂದ ವರ್ತಿಸುವುದಿಲ್ಲವೇ? (ಅಂಬಿಯಾ-68) ಸೂರ ಸಾಫಾತ್‌ನಲ್ಲಿ ಹಝ್ರತ್ ಇಬ್ರಾಹಿಂ(ಅ) ತಮ್ಮ ಜನರಿಗೆ ಹೇಳುತ್ತಾರೆ. ನೀವೇ ನಿಮ್ಮ ಸ್ವಂತ ಕೈಗಳಿಂದ ಮಾಡುವುದನ್ನು ನೀವು ಪೂಜಿಸುತ್ತೀರಿ, ನಿಮ್ಮ ಈ ಕೃತ್ಯ ತುಂಬಾ ಆಶ್ಚರ್ಯಕರ ಹಾಗೂ ಹಾಸ್ಯಾಸ್ಪದ ಮತ್ತು ವಿಷಾಧನೀಯವಾಗಿದೆ. ಒಂದು ವಸ್ತುವನ್ನು ಸ್ವಯಂ ತನ್ನ ಕೈಯಿಂದ ಮಾಡುತ್ತೀರಿ ಮತ್ತು ಅದರ ಮುಂದೆಯೇ ತಮ್ಮ ತಲೆಯನ್ನು ಬಾಗಿಸುತ್ತೀರಿ ಮತ್ತು ಅದನ್ನು ತೆಗೆದುಕೊಂಡು ಹೋಗಿ ನೀರಿನಲ್ಲಿ ಮುಳುಗಿಸುತ್ತೀರಿ. ಸೂರ: ಮರಿಯಮ್‌ನಲ್ಲಿ ಹಝ್ರತ್ ಇಬ್ರಾಹಿಂ(ಅ) ತನ್ನ ತಂದೆಯೊಡನೆ ಹೇಳುತ್ತಾರೆ. ಓ ನನ್ನ ತಂದೆಯೇ, ನೀವು ಕೇಳಲು ಅಥವಾ ನೋಡದವರನ್ನು ಏಕೆ ಆರಾಧಿಸುತ್ತೀರಿ ಮತ್ತು ಅವನು ನಿಮಗೆ ಯಾವುದೇ ಪ್ರಯೋಜನವನ್ನು ನೀಡುವುದಿಲ್ಲ. ಆದ್ದರಿಂದ ಒಬ್ಬ ಬಹುದೇವತಾವಾದಿಯು ಅಲ್ಲಾಹನನ್ನು ಹೊರತುಪಡಿಸಿ ಮತ್ತು ಅವನು ಬಯಸಿದಷ್ಟು ಕರೆದರೆ ಅವನ ಕರೆಯು ಅವನಿಗೆ ಯಾವುದೇ ರೀತಿಯಲ್ಲಿ ಪ್ರಯೋಜನವನ್ನು ನೀಡುವುದಿಲ್ಲ. ಏಕೆಂದರೆ ಅವನು ಯಾರನ್ನು ಕರೆಯುತ್ತಾನೋ ಅವನು ನೋಡುವುದಿಲ್ಲ. ಏಕೆಂದರೆ ಅವನು ಯಾರನ್ನು ಕರೆಯುತ್ತಾನೋ ಅವನು ನೋಡುವುದಿಲ್ಲ ಅಥವ ಕೇಳುವುದಿಲ್ಲ. ಅದು ಅವನಿಗೆ ಪ್ರಯೋಜನವನ್ನು ನೀಡುವುದಿಲ್ಲ. ಆದ್ದರಿಂದ ಎಲ್ಲಾ ಪೂಜೆ ಎಲ್ಲಾ ಆರಾಧನೆಗಳು ನಿರರ್ಥಕವಾಗುತ್ತವೆ. **"ವಮಾ ದುಆಉಲ್ ಕಾಫಿರೀನ ಇಲ್ಲಾ ಫೀ ಝಲಾಲಿನ್"** (ಅರ್‌ರಅದ್-15). ಧಿಕ್ಕಾರಿಗಳ ಪ್ರಾರ್ಥನೆ, ಕೂಗುಗಳೆಲ್ಲವೂ ಕಳೆದುಹೋಗುತ್ತವೆ.

**ದೇವನು ಒಂದು ಪ್ರಿಯವಾದ ಖಜಾನೆಯಾಗಿದ್ದಾನೆ ಅದರ ಬಗ್ಗೆ ಲಕ್ಷ್ಯ ನೀಡಿರಿ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

"ನಮ್ಮ ದೇವನಲ್ಲಿ ಅಸಂಖ್ಯಾತ ಅದ್ಭುತಗಳಿವೆ. ಸತ್ಯ ಮತ್ತು ನಿಷ್ಠೆಯಿಂದ ಅವನಿಗೆ ಸೇರಿದವರಾಗಿರುವವರಿಗೆ ಮಾತ್ರ ಅವು ಕಾಣಿಸಿಕೊಳ್ಳುವುದು. ಅವನ ಶಕ್ತಿ ಸಾಮರ್ಥ್ಯಗಳ ಬಗ್ಗೆ ದೃಢವಿಶ್ವಾಸ ಹೊಂದದ, ಸತ್ಯ ಮತ್ತು ನಿಷ್ಠೆರಹಿತರಾದ ಜನರಿಗೆ ಅವನು ತನ್ನ ಅದ್ಭುತಗಳನ್ನು

ತೋರಿಸಿಕೊಡುವುದಿಲ್ಲ. ಸರ್ವಶಕ್ತನಾದ ಒಬ್ಬ ದೇವನಿದ್ದಾನೆಂದು ಈಗಲಾದರೂ ದೃಢ ವಿಶ್ವಾಸ ಹೊಂದದವನು ಎಷ್ಟು ದುರದೃಷ್ಟಶಾಲಿಯಾಗಿರುವನು. ನಮ್ಮ ಸ್ವರ್ಗ ನಮ್ಮ ದೇವನಾಗಿರುವನು. ನಮ್ಮ ಶ್ರೇಷ್ಠ ರಸಾನುಭೂತಿಗಳು ನಮ್ಮ ದೇವನಲ್ಲಿದೆ. ಏಕೆಂದರೆ ನಾವು ಅವನನ್ನು ಕಂಡಿದ್ದೇವೆ. ಎಲ್ಲಾ ಸೌಂದರ್ಯ ಅವನಲ್ಲಿ ನಾವು ದರ್ಶಿಸಿದೆವು. ಜೀವವನ್ನು ಬಲಿಗರ್ಪಿಸುವ ಮೂಲಕ ದೊರಕುವ ನಿಧಿಯಾಗಿರುವುದಾದರೂ ಅದು ಪಡೆಯಲು ಅರ್ಹವಾಗಿದೆ. ಎಲ್ಲವನ್ನೂ ತೆತ್ತು ಖರೀದಿಸಲು ಯೋಗ್ಯವಾಗ ರತ್ನ ಇದಾಗಿದೆ. ಓ ಭಾಗ್ಯಹೀನರೇ, ನೀವು ಈ ನೀರಿನ ಝರಿಯ ಕಡೆಗೆ ಓಡಿ ಬನ್ನಿರಿ, ಅದು ನಿಮ್ಮ ದಾಹಕ್ಕೆ ಶಮನ ನೀಡುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಿತದ ನೀರ ಧಾರೆಯಾಗಿದೆ. ನಾನು ಏನು ಮಾಡಲಿ? ನಾವು ಯಾವ ರೀತಿ ಈ ಶುಭವಾರ್ತೆಯನ್ನು ಹೃದಯಗಳಲ್ಲಿ ಮೂಡಿಸಲಿ. ನಾನು ಯಾವ ತಮಟೆ ಬಾರಿಸಿ ಬೀದಿಗಳಲ್ಲಿ ಡಂಗುರ ಸರಿ ನಿಮಗೆ ಒಬ್ಬ ದೇವನಿದ್ದಾನೆಂದು ಹೇಳುವುದನ್ನು ಆಲಿಸುವಂತೆ ಮಾಡಲಿ. ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಔಷಧಿಯಿಂದ ಚಿಕಿತ್ಸೆ ನಡೆಸಲಿ?

ನೀವು ದೇವನಿಗೆ ಸೇರಿದವರಾಗಿರುವಿರಾದರೆ ನೀವು ದೃಢವಾಗಿ ನಂಬಿರಿ. ದೇವನು ನಿಮ್ಮವನೇ ಆಗಿರುವನು. ನೀವು ನಿದ್ರಿಸುವಾಗ ನಿಮಗೋಸ್ಕರ ಅವನು ಎಚ್ಚರದಿಂದಿರುವನು. ನೀವು ನಿಮ್ಮ ಶತ್ರುವಿನ ಕಾರಸ್ಥಾನದ ಬಗ್ಗೆ ಅರಿತಿರದಿದ್ದಾಗ ದೇವನು ಅದನ್ನು ನೋಡಿ ಶತ್ರುವಿನ ಕಾರಸ್ಥಾನಗಳನ್ನು ನಿಷ್ಫಲಗೊಳಿಸುವನು. ನಿಮ್ಮ ದೇವನಲ್ಲಿ ಯಾವ್ಯಾವ ಅದ್ಭುತ ಸಾಮರ್ಥ್ಯಗಳಿವೆ ಎಂದು ನೀವು ಅರಿತಿಲ್ಲ. ನೀವು ಅವುಗಳ ಬಗ್ಗೆ ಅರಿತಿದ್ದರೆ ನೀವು ಲೋಕದ ಬಗ್ಗೆ ತೀವ್ರವಾಗಿ ದು:ಖಿಸುವ ಅವಶ್ಯಕತೆ ಎಂದೂ ಉಂಟಾಗುತ್ತಿರಲಿಲ್ಲ. ಒಂದು ಖಜಾನೆಯನ್ನು ಹೊಂದಿರುವವನು ಒಂದು ಪೈಸೆ ನಷ್ಟವಾದುದಕ್ಕೆ ಅಳುತ್ತಾ ಚೀರಾಡುತ್ತಾ ನಾಶೋನ್ಮುಖನಾಗುವನೋ? ನಿಮಗೆ ಈ ಖಜಾನೆಯ ಬಗ್ಗೆ ತಿಳಿದಿದ್ದರೆ, ನಿಮ್ಮ ಪ್ರತಿಯೊಂದು ಅವಶ್ಯಕತೆಯನ್ನು ದೇವನು ಈಡೇರಿಸುವವನು ಎಂದು ನಿಮಗೆ ತಿಳಿದಿದ್ದರೆ ನೀವು ಲೌಕಿಕ ಸಂಪಾದನೆ ಮಾಡುವಾಗ ಅವನನ್ನು ಮರೆತುಬಿಡುವುದೇಕೆ? ದೇವನು ಒಂದು ಪ್ರಿಯವಾದ ಖಜಾನೆಯಾಗಿದ್ದಾನೆ. ಅದರ ಬಗ್ಗೆ ಲಕ್ಷ್ಯ ನೀಡಿರಿ. ಅವನು ನಿಮ್ಮ ಪ್ರತಿಯೊಂದು ಹೆಜ್ಜೆಯಲ್ಲಿ ನಿಮ್ಮ ಸಹಾಯಕನಾಗಿದ್ದಾನೆ. ಅವನ ಹೊರತು ಈವು ಏನೂ ಅಲ್ಲ. ನಿಮ್ಮ ಸಾಧನೆ ಸಾಮಗ್ರಿಗಳು ಮತ್ತು ಪ್ರಯತ್ನಗಳು ಯಾವ ಪ್ರಯೋಜನಕ್ಕೂ ಬರಲಾರವು." (ಕಿಶ್ತಿ ನಾಹ್, ರೂಹಾನಿ ಖಝಾಈನ್, ಸಂಪುಟ–19, ಪುಟ–21)

ತೌಹೀದ್ (ಏಕದೇವತ್ವ) ದ ಯಾವುದೇ ಭಾಗವಾಗಲೀ, ಬ್ರಹ್ಮೋ ಸಮಾಜ ಅದನ್ನು ಖುರ್‌ಆನ್ ಮೂಲಕವೇ ಪಡೆದುಕೊಂಡದ್ದಾಗಿದೆ.

ಪವಿತ್ರ ಖುರಆನ್‌ನ ಇದು ಪರಮ ಉಪಕಾರವಾಗಿದೆ. ಅದು ತೌಹೀದಿಗೆ ಹೆಚ್ಚು ಒತ್ತು ನೀಡಿದ್ದು, ಅದು ಪ್ರಪಂಚದ ಎಲ್ಲಾ ಜನರ ಮೇಲೆ ವಿಶೇಷ ಪ್ರಭಾವ ಮತ್ತು ಛಾಪನ್ನು ಬೀರಿದೆ. ಇಂದು ಅಸಂಖ್ಯಾತ ದೇವ ದೇವತೆಗಳನ್ನು ಪೂಜಿಸುವ ಸನಾತನ ಧರ್ಮದ ಜನರೂ ಒಬ್ಬನೇ ದೇವನನ್ನು ನಂಬುತ್ತಾರೆ. ಮೂರು ದೇವರುಗಳನ್ನು ನಂಬುವ ಕ್ರಿಶ್ಚಿಯನ್ನರು ದೇವರು ಒಬ್ಬನೇ ಎಂದು ಒಪ್ಪಿಕೊಳ್ಳುತ್ತಾರೆ. ಆದ್ದರಿಂದ ಅವರ ಕಾರ್ಯಗಳು ಏನೇ ಇರಲಿ, ಅವರ ಹೃದಯಗಳು ಒಬ್ಬ ದೇವರನ್ನು ಮನವರಿಕೆ ಮಾಡುತ್ತವೆ. ಇದು ಪವಿತ್ರ ಖುರ್‌ಆನ್‌ನ ಏಕದೇವೋಪಾಸನೆಯ ಪರಿಣಾಮವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ತನ್ನ ಪುಸ್ತಕ ಬರಾಹೀನ್ ಅಹ್ಮದಿಯಾದಲ್ಲಿ ತೌಹೀದ್ ಕಡೆಗೆ ಒಲವು ತೋರುವ ಬ್ರಹ್ಮ ಸಮುದಾಯವೂ ಪವಿತ್ರ ಖುರ್‌ಆನ್‌ನಿಂದ ತೌಹೀದ್ ಬೋಧನೆಯನ್ನು ಪಡೆದುಕೊಂಡಿದೆ ಎಂದು ಬರೆದಿದ್ದಾರೆ. ಈ ಸಂದರ್ಭದಲ್ಲಿ ನೀವು ಪವಿತ್ರ ಖುರ್‌ಆನ್‌ನಿಂದ ಏಕದೇವೋಪಾಸನೆಯನ್ನು ಕಲಿತಿದ್ದೇವೆ ಎಂದು ಸಾಬೀತುಪಡಿಸಲು ಸಮಾಜಕ್ಕೆ ಯಾವುದೇ ಆಯ್ಕೆಗಳಿಲ್ಲ ಎಂದು ನೀವು ಅಂತಹ ವಾದಗಳನ್ನು ಎಲ್ಲಿಂದಲೋ ನೀಡಿದ್ದೀರಿ. ನೀವು ಹೇಳುತ್ತೀರಿ. ಬ್ರಹ್ಮ ಸಮಾಜದ ಜನರ ಏಕದೇವೋಪಾಸನೆಯ ಒಲವಿನ ಮೂಲಕವೂ ಅವರ ಹಿರಿಯರೊಬ್ಬರು, ಈ ಧರ್ಮದ ಸ್ಥಾಪಕರಾದ ವ್ಯಕ್ತಿ ಪವಿತ್ರ ಖುರ್‌ಆನ್‌ನಿಂದ, ಅವರು ಸ್ವಲ್ಪ ಭಾಗವನ್ನು ಪಡೆದಿದ್ದಾರೆ ಎಂದು ನಾನು ಕೂಲಂಕುಷವಾಗಿ ಸಂಶೋಧಿಸಿದ್ದೇನೆ. ತೌಹೀದನ, ಆದರೆ ಅವನ ದುರದೃಷ್ಟದ ಕಾರಣ, ಅವನು ಪೂರ್ಣ ತೌಹೀದ್‌ನ್ನು ಪಡೆಯಲು ಸಾಧ್ಯವಾಗಲಿಲ್ಲ. ಆಗ ದೇವರ ವಾಕ್ಯದಿಂದ ತೆಗೆದೆ. ಅದೇ ಬೀಜವು ಬ್ರಹ್ಮ ಸಮಾಜದ ಜನರಲ್ಲಿ ಹರಡಿತು. ನಮ್ಮ ಸಂಶೋಧನೆಯ ಬಗ್ಗೆ ಬ್ರಹ್ಮೋಸ್‌ಗಳಲ್ಲಿ ಯಾರಾದರೂ ಏನಾದರೂ ಹೇಳುವುದಾದರೆ, ಅವರಿಗೆ ಏಕದೇವೋಪಾಸನೆಯ ಸಮಸ್ಯೆ ಹೇಗೆ ಬಂದಿತು ಎಂಬ ನಮ್ಮ ಪ್ರಶ್ನೆಗೆ ಕಾರಣಸಹಿತ ಉತ್ತರಿಸುವುದು ಅವಶ್ಯಕ. ಅವರಿಗೆ ತೌಹೀದ್ ಸಮಸ್ಯೆ ಹೇಗೆ ಬಂತು? ಅದು ಆಲಿಸುವ ಮೂಲಕ ಬಂದಿದೆ ಅಥವಾ ಅವರ ಸ್ಥಾಪಕರು ಕೇವಲ ತನ್ನ ಬುದ್ಧಿಶಕ್ತಿಯಿಂದ ಆವಿಷ್ಕರಿಸಿದರು. ಆಲಿಸುವ ಮೂಲಕ ಬಂದಿದೆಯಾದರೆ ಸ್ಪಷ್ಟವಾಗಿ ಹೇಳಿರಿ. ಪವಿತ್ರ ಖುರ್‌ಆನ್ ಹೊರತುಪಡಿಸಿ ಯಾವ ಗ್ರಂಥವಿತ್ತು. ಅದು ಅಲ್ಲಾಹನು ಏಕನೆಂದು, ಅವನ ಹೊರತು ಯಾರೂ ಆರಾಧನೆಗೆ ಅರ್ಹರಲ್ಲನೆಂದು, ಅವನು ಪುತ್ರರಿಂದ ಮಕ್ಕಳಿಂದ ಮುಕ್ತನೆಂದು, ಶಾರೀರಿಕವಲ್ಲವೆಂದು ಮತ್ತು ತನ್ನ ಅಸ್ತಿತ್ವ ಹಾಘೂ ಗುಣಗಳಲ್ಲಿ ಪರಿಪೂರ್ಣನೆಂದು, ಸರ್ವಶಕ್ತನೆಂದು ಆ ಕಾಲಘಟ್ಟದಲ್ಲಿ ಭಾರತದಲ್ಲಿ ಪ್ರಸಿದ್ಧಿ ಪಡೆದಿತ್ತು. ಈ ಮೂಲಕವೇ ತೌಹೀದ್ ಸಮಸ್ಯೆ ಅವರು ಪಡೆದರು. ಆ ಗ್ರಂಥದ ಹೆಸರು ಹೇಳಬೇಕು. ಅಲ್ಲ ಆ ಸಮಾಜದ ಸ್ಥಾಪಕರಿಗೆ ಆಲಿಸುವುದರ ಮೂಲಕ ತೌಹೀದ್ ಸುದ್ಧಿ ತಲುಪಲಿಲ್ಲ ಬದಲು ಅವರು ಕೇವಲ ತನ್ನ ಬುದ್ಧಿಶಕ್ತಿಯಿಂದ ಈ ಸಮಸ್ಯೆಯನ್ನು ಹುಟ್ಟಿ ಹಾಕಿದರೆಂದಾರೆ, ಸಾಬೀತುಪಡಿಸಬೇಕು. ಸ್ಥಾಪಕರ ಆ ಕಾಲಘಟ್ಟದಲ್ಲಿ ಎಂದರೆ ಯಾವ ಕಾಲದಲ್ಲಿ ಬ್ರಹ್ಮ ಸಮಾಜದ ಸ್ಥಾಪಕರು ಒಂದು ಧರ್ಮವನ್ನು ಜಾರಿಗೊಳಿಸುತ್ತಿದ್ದರು. ಆ ಸಮಯ ಭಾರತದಲ್ಲಿ ಪವಿತ್ರ ಖುರ್‌ಆನ್‌ನ ಮೂಲಕ ತೌಹೀದ್ ಹರಡಿರಲಿಲ್ಲವೇ. ಏಕೆಂದರೆ ಆಗ ಹರಡಿದ್ದರೆ ತೌಹೀದ್‌ನ ಆವಿಷ್ಕಾರ ಅವರ ಸ್ವಂತದ್ದೆಂದು ಭಾವಿಸಲಾಗದು. ಬದಲು ದೃಢವಗಿ ಹೇಳಬಹುದು. ಬ್ರಹ್ಮ ಸಮಾಜದ ಸ್ಥಾಪಕರು ಪವಿತ್ರ ಖುರ್‌ಆನ್ ಮೂಲಕವೇ ತೌಹೀದ್ ಸಮಸ್ಯೆ ಪಡೆದಿದ್ದರು. (ಬರಾಹೀನ್ ಅಹ್ಮದಿಯಾ, ಭಾಗ–3, ರೂಹನಿ ಖಝಾಈನ್, ಸಂಪುಟ–1, ಅಡಿಟಿಪ್ಪಣಿ–11, ಪುಟ–218)

ಸೂರಃ ಇಖ್ಲಾಸ್ ಪವಿತ್ರ ಖುರ್‌ಆನ್‌ನ ಮಹಿಮೆ ಮತ್ತು ಅದರ ಹೆಮ್ಮೆಯಾಗಿದೆ. ಇದು ಚಿಕ್ಕ ಊರಾದರೂ ತೌಹೀದ್‌ನಿಂದ ತುಂಬಿದೆ. ಇದರ ಅನುವಾದ ಹಿಗಿದೆ. ಹೇಳು: ಅವನು ಅಲ್ಲಾಹನು, ಏಕನು, ಅವನು ನಿರಪೇಕ್ಷನು ಮತ್ತು ಸರ್ವರಿಗೂ ಆಶ್ರಯದಾತನು. ಅವನು ಜನಕನಲ್ಲ; ಜಾತನೂ ಅಲ್ಲ. ಅವನಿಗೆ ಸಮನಾಗಿ ಯಾರೂ ಇಲ್ಲ.

ಏಕದೇವೋಪಾಸನೆಯ ವಿಷಯದಿಂದ ತುಂಬಿರುವ ಕಾರಣ ಹಝ್ರತ್ ರಸೂಲುಲ್ಲಾಹ್ (ಸ) ರವರು ಅದನ್ನು ಪವಿತ್ರ ಖುರ್‌ಆನ್‌ನ ಮೂರನೆಯ ಒಂದು ಭಾಗ ಎಂದು ಸಾರಿದ್ದಾರೆ. ಸಯ್ಯದನಾ ಹಝ್ರತ್ ಅಬೂಹುರೈರ(ರ) ರವರಿಂದ ವರದಿಯಿದೆ, ರಸೂಲುಲ್ಲಾಹ್(ಸ) ಹೇಳಿದರು. ಬನ್ನಿರಿ, ಒಗ್ಗೂಡಿರಿ, ನಾನು ನಿಮಗೆ ಖುರ್‌ಆನ್‌ನ ಮೂರನೇ ಒಂದು ಭಾಗವನ್ನು ಪಠಿಸಲಿದ್ದೇನೆ. ಜನರು ಸೇರಿದರು. ಅವರು ಆಗಮಿಸಿ **"ಖುಲ್ ಹುವಲ್ಲಾಹು ಅಹದ್"** ಪಠಿಸಿ ಮರಳಿ ಹೋದರು. ಆಗ ಒಬ್ಬರಿಗೊಬ್ಬರು ಹೇಳಿಕೊಂಡೆವು, ಆಕಾಶದಿಂದ ಕೆಲವು (ಹೊಸ) ಸುದ್ಧಿ ಬಂದಂತೆ ತೋರುತ್ತದೆ. ಅದು ಪ್ರವಾದಿ(ಸ) ರವರನ್ನು ಮನೆಗೆ ಪ್ರವೇಶಿಸುವಂತೆ ಮಾಡಿದೆ. ಆಗ ಪ್ರವಾದಿ (ಸ) ಬಂದು ಹೇಳಿದರು. ನಾನು ನಿಮಗೆ ಹೇಳಿದ್ದೇನೆ. ನಾನು ನಿಮ್ಮ ಮೇಲೆ ಖುರಆನ್‌ನ ಮೂರನೇ ಒಂದು ಭಾಗವನ್ನು ಓದುತ್ತೇನೆ ಎಂದು ಹೇಳಿದ್ದೆ ಅರಿವಿರಲಿ ಅದು ಓದಿಯಾಗಿದೆ, ಇದು ಖುರ್‌ಆನ್‌ನ ಮೂರನೇ ಒಂದು ಭಾಗಕ್ಕೆ ಸಮವಾಗಿದೆ.

## ಪರಿರಿಪೂರ್ಣ ತೌಹಿದ್ ಮೋಕ್ಷಕ್ಕೆ ಮಾರ್ಗವಾಗಿದೆ

ಈಗ ನಾವು ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲವು ಸಾಕ್ಷ್ಯಭರಿತ ಆಧ್ಯಾಪನೆಗಳು ಮತ್ತು ಅವರ ಕೆಲವು ಶ್ರೇಷ್ಠ ಪಂಥಾಹ್ವಾನಗಳ ಕುರಿತು ವಿವರಿಸುವೆವು. ತೌಹೀದ್ ಬಗ್ಗೆ ಪ್ರಸ್ತಾಪಿಸುತ್ತಾ ಅವರು ಹೇಳುತ್ತಾರೆ. ತೌಹೀದ್ ಅಂದರೆ ಕೇವಲ ಪ್ರತ್ಯೇಕವಾಗಿ ಉಳಿದುಕೊಂಡು ದೇವರನ್ನು ಒಬ್ಬನೆಂದು ಭಾವಿಸುವುದಲ್ಲ, ಸೈತಾನನು ಸಹ ಇಂತಹ ತೌಹೀದನ್ನು ನಂಬುವವನಾಗಿದ್ದಾನೆ, ಬದಲು ತೌಹಿದ್ ಎಂದರೆ ಅಲ್ಲಾಹನನ್ನು ಏಕನೆಂದು ಭಾವಿಸುವ ಜೊತೆಯಲ್ಲಿ ತನ್ನ ನಡಾವಳಿಕೆಯ ಮೂಲಕ ಅಂದರೆ ಪರಿಪೂರ್ಣ ಉತ್ಸಾಹದಿಂದ ತನ್ನ ಅಸ್ತಿತ್ವವನ್ನು ದೇವನ ಅಸ್ತಿತ್ವದಲ್ಲಿ ಕಳೆದುಕೊಳ್ಳಬೇಕು, ಇದು ಪರಿಪೂರ್ಣ ತೌಹಿದ್ ಆಗಿದೆ ಮತ್ತು ಅದುವೇ ಮುಕ್ತಿಗೆ ಕಾರಣವಾಗುತ್ತದೆ. ಅವನಿಗೆ ಪೂರ್ಣ ರೂಪದಲ್ಲಿ ಶರಣಾದವರೇ ಅದನ್ನು ಪಡೆಯುತ್ತಾರೆ.


(ಬರಾಹೀನೇ ಅಹ್ಮದಿಯಾ, ಭಾಗ–5, ರೂಹಾನಿ ಖಝಾಈನ್, ಸಂಪುಟ–21, ಪುಟ–64)

**(ಮನ್ಸೂರ್ ಅಹ್ಮದ್ ಮಸ್ರೂರ್, ಸಂಪಾದಕರು ಉರ್ದು ಬದರ್)**

...*...*...*...

**Love for All, Hatred for None**
**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

## ಜಗತ್ತಿನಲ್ಲಿ ಯಾವ ತಾಯಿಯ ಮಗುವೂ ಇಂತಹ ಹಿತಚಿಂತಕ ಪುಸ್ತಕವನ್ನು ರಚಿಸಿಲ್ಲ




ಸಯ್ಯಿದುನಾ ಹಝ್‌ರತ್ ಖಲೀಫತುಲ್ ಮಸೀಹ್ ಸಾಲಿಸ್[ರಹ] ಹೇಳುತ್ತಾರೆ:

ಈ ಪುಸ್ತಕವು ಉಪಕಾರದಿಂದ ತುಂಬಿಕೊಂಡಿದೆ ಇಡೀ ಪ್ರಪಂಚದಲ್ಲಿ ಪವಿತ್ರ ಖುರ್‌ಆನ್‌ನ ಉಪಕಾರಕ್ಕೊಳಗಾಗದ ಯಾವ ವ್ಯಕ್ತಿಯೂ ಇಲ್ಲ. ಮುಸ್ಲಿಮರು ಪವಿತ್ರ ಖುರ್‌ಆನ್ ಅನ್ನು ಸಂಪೂರ್ಣವಾಗಿ ಅನುಸರಿದರೆ ಪ್ರತಿಯೊಬ್ಬ ಮನುಷ್ಯನನ್ನು ಅದರ ಉಪಕಾರದ ಸರಪಳಿಯಲ್ಲಿ ಬಂಧಿಸಬಹುದು. ನಮ್ಮ ಸೋಮಾರಿತನವಿದೆ, ಇಲ್ಲದಿದ್ದರೆ ಉಪಕಾರದ ಮಾರ್ಗಗಳು ಬೇಕಾದಷ್ಟಿವೆ. ಉಪಕಾರದ ನಿಧೀ ನಮ್ಮ ಮುಂದಿದೆ, ಉಪಕಾರದ ಬೋಧನೆ ಮತ್ತು ಮಾರ್ಗದರ್ಶನ ಇದೆ. ಉಪಕಾರದ ಮಾರ್ಗವನ್ನು ಅನುಸರಿಸುವ ಶಕ್ತಿ ಮತ್ತು ಸಾಮರ್ಥ್ಯವು ಮಾನವ ಸ್ವಭಾವದಲ್ಲಿದೆ, ನಮ್ಮ ಪ್ರಯತ್ನಗಳ ಕೊರತೆಯಿಂದಾಗಿ ನಾವು ಜಗತ್ತನ್ನು ಇದರ ಫಲಗಳಿಂದ ವಂಚಿಸುತ್ತಿದ್ದೇವೆ. ಪವಿತ್ರ ಖೂರ್‌ಆನ್‌ನ ಬಗ್ಗೆ ಹೇಳುವುದಾದರೆ ಪವಿತ್ರ ಖುರ್‌ಆನ್ ಮಾನವಕುಲಕ್ಕೆ ಎಷ್ಟು ಕರುಣಾಮಯಿಯಾಗಿದೆ ಎಂದರೆ ಜಗತ್ತಿನಲ್ಲಿ ಯಾವುದೇ ತಾಯಿಯ ಮಗು ಅಂತಹ ಹಿತಚಿಂತಕ ಪುಸ್ತಕವನ್ನು ಪ್ರಸ್ತುತಪಡಿಸಲಿಲ್ಲ.

**(ಖುತ್‌ಬಾತೆ ನಾಸಿರ್, ಸಂಪುಟ–2, ಪುಟ–555)**


## ಆಧ್ಯಾತ್ಮಿಕ ಪ್ರಪಂಚದ ವೈಜ್ಞಾನಿಕ ಪುಸ್ತಕ – ಅದ್ಭುತ ಬುದ್ಧಿವಂತಿಕೆಯ ಪುಸ್ತಕ



ಸಯ್ಯಿದುನಾ ಹಝ್‌ರತ್ ಖಲೀಫತುಲ್ ಮಸೀಹ್ ರಾಬಿ[ರಹ] **ಇನ್ನಲ್ ಹಸನಾತು ಯುಝ್‌ಹಿಬ್ ನಸ್ಸೈಯಿಆತಿ** ಯ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಪವಿತ್ರ ಖುರ್‌ಆನ್ ಅದ್ಭುತ ಬುದ್ಧಿಶಕ್ತಿ ಮತ್ತು ಬುದ್ಧಿವಂತಿಕೆಯ ಪುಸ್ತಕವಾಗಿದೆ, ಇದು ಮಾನವ ಸ್ವಭಾವದ ದೋಷಗಳನ್ನು ಮತ್ತು ಅದರ ಫಲಿತಾಂಶಗಳನ್ನು ಸರಿಪಡಿಸುತ್ತದೆ. ಅದರ ಜೊತೆಯಲ್ಲಿ ಅವರಿಂದ ಉದ್ಭವವಾಗುವ ತಪ್ಪುಗಳನ್ನು ಇದು ಸರಿಪಡಿಸುತ್ತದೆ ಮತ್ತು ನಂತರ ಅವರನ್ನು ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತದೆ. ಸರ್ವಶಕ್ತನಾದ ಅಲ್ಲಾಹನು ಸತ್ಕರ್ಮಗಳು ಶಕ್ತಿಯುತವಾಗಿರುತ್ತದೆ ಮತ್ತು ದುಷ್ಕರ್ಮಗಳು ದುರ್ಬಲವಾಗಿರುತ್ತದೆ ಎಂದು ಹೇಳುತ್ತಾನೆ. ಯಾವ ಸಮೂದಾಯದಲ್ಲಿ ನೀವು ಕೆಟ್ಟದ್ದನ್ನು ನೋಡುತ್ತೀರೋ ವಾಸ್ತವವೆಂದರೆ ಅವರಲ್ಲಿ ಕ್ರಮೇಣ ಸದ್ಗುಣಗಳು ಕಣ್ಮರೆಯಾಗತೊಡಗಿವೆ...... ಆಧ್ಯಾತ್ಮಿಕ ಪ್ರಪಂಚದ ಈ ವೈಜ್ಞಾನಿಕ ಅದ್ಭುತವಾದ ಪುಸ್ತಕವು ಎಂತೆಂತಹ ತತ್ವಗಳನ್ನು ಸೂಚಿಸುತ್ತದೆ ಮತ್ತು ಅನೇಕ ವಿಷಯಗಳ ಮೇಲೆ ಬೆಳಕು ಚಲ್ಲುತ್ತದೆ ಎಂದರೆ ಆ ಹಂತವನ್ನು ತಲುಪಲು ಮಾನವ ಬುದ್ಧಿಗೆ ಸಾಧ್ಯವಿಲ್ಲ. ಪವಿತ್ರ ಖುರ್‌ಆನ್‌ನ ದೃಷ್ಟಿಕೋನವನ್ನು ತಿಳಿದ ನಂತರ, ನೀವು ಆಲೋಚಿಸಿದಾಗ ಮತ್ತು ಧ್ಯಾನಿಸಿದಾಗ, ಪವಿತ್ರ ಖುರ್‌ಆನ್‌ನ ಹೇಳಿಕೆಗಳು ಅದ್ಭುತವಾಗಿ ಕಂಡುಕೊಳ್ಳಬಹುದು. ಆದ್ದರಿಂದ ಸತ್ಕರ್ಮಗಳು ಸಕಾರಾತ್ಮಕ ಅಂಶವಾಗಿದೆ ಮತ್ತು ಕೆಟ್ಟದು ಒಳ್ಳೆಯತನದ ಕೊರತೆಯ ಹೆಸರಾಗಿದೆ ಎಂಬುದು ಮೂಲಭೂತವಾಗಿದೆ. **(ಖುತ್‌ಬಾತೆ ತಾಹಿರ್, ಸಂಪುಟ–02, ಪುಟ–404)**

## ಈ ಶಿಕ್ಷಣವು ಈಗ ಜಗತ್ತನ್ನು ಸುಧಾರಿಸುವ, ಜಗತ್ತಿನಲ್ಲಿ ಒಳ್ಳೆಯ ಕಾರ್ಯಗಳನ್ನು ಸ್ಥಾಪಿಸುವ, ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸುವ ಮೂಲಕ ಜಗತ್ತಿನಲ್ಲಿ ಉತ್ತಮ ಆರಾಧಕರನ್ನು ಸೃಷ್ಟಿಸುವ ಮತ್ತು ಪ್ರಪಂಚದ ಪ್ರತಿಯೊಂದು ವರ್ಗದ ಹಕ್ಕುಗಳನ್ನು ಸ್ಥಾಪಿಸುವ ಭರವಸೆಯಾಗಿದೆ.



ಸಯ್ಯಿದುನಾ ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್[ಅತಬಅ]ಹೇಳುತ್ತಾರೆ:

ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ರವರ ಮೇಲೆ ಅವತರಿಸಿದ ಈ ಪವಿತ್ರ ಖುರ್‌ಆನ್ ಕುರಿತು ಸರ್ವಶಕ್ತನಾದ ಅಲ್ಲಾಹನು ಇದು ಪವಿತ್ರ ಗ್ರಂಥವಾಗಿದೆ ಮತ್ತು ಎಲ್ಲಾ ಸಾಧ್ಯತೆಯುಳ್ಳ ದೋಷಗಳಿಂದ ಮುಕ್ತವಾಗಿದೆ ಸಾಕ್ಷಿ ನೀಡುತ್ತಾನೆ. ಇದು ಕೇವಲ ಪವಿತ್ರ ಗ್ರಂಥ ಮಾತ್ರವಲ್ಲ ಬದಲಿಗೆ ಇದರಲ್ಲಿ ಎಲ್ಲಾ ರೀತಿಯ ಸುಂದರ ಮತ್ತು ಮನಮೋಹಕ ಶಿಕ್ಷಣ ಒಳಗೊಂಡಿದೆ ಅದರೊಂದಿಗೆ ಪ್ರತಿಸ್ಪರ್ಧಿ ಯಾರು ಇಲ್ಲ ಮತ್ತು ಗತಕಾಲದ ಧರ್ಮಗ್ರಂಥಗಳಲ್ಲಿದ್ದ ಸದ್ಗುಣಗಳ ಕೊರತೆಗಳನ್ನು ಇದರಲ್ಲಿ ಸೇರಿಸಲಾಗಿದೆ ಮತ್ತು ಈಗ ಪ್ರತಿಯೊಂದು ನ್ಯೂನ್ಯತೆ, ಕೊರತೆಗಳಿಂದ ಪರಿಶುದ್ಧವಾಗಿರುವ ಶಿಕ್ಷಣ ಇದಾಗಿದೆ. ಅದಲ್ಲದೆ ಈ ಶಿಕ್ಷಣವನ್ನು ಅನುಸರಿಸುವ ಮೂಲಕವೇ ಎಲ್ಲಾ ರೀತಿಯ ಕೆಡುಕುಗಳಿಂದ ಮುಕ್ತಿ ಪಡೆಯಲು ಸಾಧ್ಯ. ಮತ್ತು ನಾವು ಈ ಬೋಧನೆಯನ್ನು ಅನುಸರಿಸುವ ಮತ್ತು ಸ್ಥಾಪಿಸುವ ಮೂಲಕ ನಾವು ನಮ್ಮನ್ನು ಮತ್ತು ಜಗತ್ತನ್ನು ಸುಧಾರಿಸಲು ಸಾಧ್ಯ. ಅಂದರೆ, ಹಝ್‌ರತ್ ಪೈಗಂಬರ್(ಸ.ಅ) ಅವರ ಮೇಲೆ ಅವತರಿಸಿದ ಈ ಶಿಕ್ಷಣವು ಈಗ ಜಗತ್ತನ್ನು ಸುಧಾರಿಸುವ, ಜಗತ್ತಿನಲ್ಲಿ ಒಳ್ಳೆಯ ಕಾರ್ಯಗಳನ್ನು ಸ್ಥಾಪಿಸುವ, ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸುವ ಮೂಲಕ ಜಗತ್ತಿನಲ್ಲಿ ಉತ್ತಮ ಆರಾಧಕರನ್ನು ಸೃಷ್ಟಿಸುವ ಮತ್ತು ಪ್ರಪಂಚದ ಪ್ರತಿಯೊಂದು ವರ್ಗದ ಹಕ್ಕುಗಳನ್ನು ಸ್ಥಾಪಿಸುವ ಭರವಸೆಯಾಗಿದೆ.

**(ಖುತ್‌ಬಾತೆ ಮಸ್ರೂರ್, ಸಂಪುಟ–3, ಪುಟ–127)**

EDITOR
TARIQ AHMED IDRIS
Mobile : +91 9902678609
E-mail: kannadabadar@gmail.com
website: www.akhbarbadr.in
: www.alislam.org/badr

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
ಕನ್ನಡ ಬದರ್ ವಾರ ಪತ್ರಿಕೆ Weekly BADAR Qadian
Qadian - 143516 Distt. Gurdaspur (Pb.) INDIA
Vol No.04, Thursday, 21-28 Deceember 2023, Issue No. 51-52

MANAGER
SHAIKH MUJAHID AHMAD
Mobile : +91 99153 79255
e -mail:managerbadrqnd@gmail.com
SUBSCRIPTION
ANNUAL: Rs: 600/-
WEIGHT: 50-100 gms / issue

## ಪವಿತ್ರ ಖುರ್‌ಆನ್‌ನ ಹತ್ತು ಉದ್ದೇಶಗಳು

### ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪವಿತ್ರ ಅಧ್ಯಾಪನೆಗಳು

ಪವಿತ್ರ ಖುರ್‌ಆನ್‌ನ **ಒಂದು** ಉದ್ದೇಶವೆಂದರೆ ಅದು ಸರ್ವಶಕ್ತನಾದ ಅಲ್ಲಾಹನ ಎಲ್ಲಾ ಪರಿಪೂರ್ಣ ದೈವಸ್ತುತಿಗಳನ್ನು ವಿವರಿಸುತ್ತದೆ ಮತ್ತು ಅಲ್ಲಾಹನ ಪರಿಪೂರ್ಣ ಅಸ್ತಿತ್ವವನ್ನು ವಿವರಿಸುತ್ತದೆ. ಹೀಗಾಗಿ ಈ ಉದ್ದೇಶವು **ಅಲ್-ಹಮ್ದುಲಿಲ್ಲಾಹ್** ದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಏಕೆಂದರೆ ಇದರ ಅರ್ಥವು ಸರ್ವ ಸ್ತುತಿಗಳು ಸಕಲ ಲೋಕಗಳ ಅಲ್ಲಾಹನಿಗೆ ಎಂದು ಸಾಬೀತಾಗಿದೆ, ಅವನಲ್ಲಿರುವ ಸಕಲ ಪರಿಪೂರ್ಣತೆಗಳು ಸಮಂಜಸವಾಗಿದೆ ಮತ್ತು ಎಲ್ಲಾ ಆರಾಧನೆಗಳ ಹಕ್ಕನ್ನು ಅವನು ಹೊಂದಿದ್ದಾನೆ.

ಪವಿತ್ರ ಖುರ್‌ನ್‌ನ **ಎರಡನೇ** ಉದ್ದೇಶವೆಂದರೆ ಅದು ದೇವರನ್ನು ಪರಿಪೂರ್ಣ ಸೃಷ್ಟಿಕರ್ತ ಮತ್ತು ಸರ್ವಲೋಕಗಳ ಸೃಷ್ಟಿಕರ್ತ ಎಂದು ತೋರಿಸುತ್ತದೆ ಮತ್ತು ಪ್ರಪಂಚದ ಪ್ರಾರಂಭದ ಸ್ಥಿತಿಯನ್ನು ವಿವರಿಸುತ್ತದೆ ಮತ್ತು ಪ್ರಪಂಚದಲ್ಲಿ ಪ್ರವೇಶಿಸಿದವರನ್ನು ಸೃಷ್ಟಿ ಎಂದು ಹೇಳುತ್ತದೆ ಮತ್ತು ಆ ವಿಷಯಗಳ ವಿರುದ್ಧ ಇರುವವರು ಅವರ ಸುಳ್ಳುಗಾರರು ಎಂದು ಸಾಬೀತುಪಡಿಸುತ್ತದೆ. ಹೀಗಾಗಿ ಈ ಉದ್ದೇಶವು **ರಬ್ಬುಲ್ ಆಲಮೀನ್** ನಲ್ಲಿ ಸಂಕ್ಷಿಪ್ತವಾಗಿ ಬಂದಿದೆ.

ಪವಿತ್ರ ಖುರ್‌ನ್‌ನ **ಮೂರನೇ** ಉದ್ದೇಶವು ಸರ್ವಶಕ್ತನಾದ ಅಲ್ಲಾಹನ ಔದಾರ್ಯವು ವಿಶೇಷಾಧಿಕಾರವಲ್ಲ ಅದು ಕಠಿಣ ಪರಿಶ್ರಮ ಹಾಗೂ ಪ್ರಯತ್ನದ ಮೇಲೆ ಅವಲಂಬಿತವಾಗಿದೆ ಎಂದು ಸಾಬೀತುಪಡಿಸುತ್ತದೆ ಮತ್ತು ಹೀಗಾಗಿ ಈ ಉದ್ದೇಶವು **ರಹ್ಮಾನ್** ಪದದಲ್ಲಿ ಬಂದಿದೆ.

ಪವಿತ್ರ ಖುರ್‌ಆನ್‌ನ **ನಾಲ್ಕನೇ** ಉದ್ದೇಶವೆಂದರೆ ಕಠಿಣ ಪರಿಶ್ರಮ ಹಾಗೂ ಪ್ರಯತ್ನದಿಂದ ಉಂಟಾಗುವ ದೇವರ ಅನುಗ್ರಹಗಳನ್ನು ಸಾಬೀತುಪಡಿಸುವುದು. ಆದ್ದರಿಂದ ಇದು **ರಹೀಮ್** ಪದದಲ್ಲಿ ಸಂಕ್ಷಿಪ್ತವಾಗಿ ಬಂದಿದೆ.

ಪವಿತ್ರ ಖುರ್‌ನ್‌ನ ಐದನೇ ಉದ್ದೇಶವು ಪರಲೋಕದ ಸತ್ಯಾಂಶವನ್ನು ವಿವರಿಸುವುದಾಗಿದೆ. ಹೀಗಾಗಿ ಈ ಉದ್ದೇಶವು **ಮಾಲಿಕಿ ಯೌಮಿದ್ದೀನ್** ನಲ್ಲಿ ಬಂದಿದೆ.

ಪವಿತ್ರ ಖುರ್‌ನ್‌ನ **ಆರನೇ** ಉದ್ದೇಶ ಪ್ರಾಮಾಣಿಕತೆ, ಆರಾಧನೆ, ಅಲ್ಲಾಹನನ್ನು ಹೊರತುಪಡಿಸಿ ಆತ್ಮದ ಶುದ್ಧೀಕರಣ, ಆಧ್ಯಾತ್ಮಿಕ ಕಾಯಿಲೆಗಳ ನಿವಾರಣೆ, ನೈತಿಕತೆಯ ಸುಧಾರಣೆಯಾಗಿದೆ ಮತ್ತು ತೌಹೀದ್ ಫಿಲ್ ಇಬಾದತ್ ಅನ್ನು ವಿವರಿಸುವುದಾಗಿದೆ. ಹೀಗಾಗಿ ಈ ಉದ್ದೇಶವು **ಇಯ್ಯಾಕ ನಅ್‌ಬುದು** ನಲ್ಲಿ ಸಂಕ್ಷಿಪ್ತವಾಗಿ ಬಂದಿದೆ.

ಪವಿತ್ರ ಖುರ್‌ನ್‌ನ **ಏಳನೇ** ಉದ್ದೇಶವು ಪ್ರತಿಯೊಂದು ಕೆಲಸದಲ್ಲಿಯೂ ದೇವರನ್ನು ನಿಜವಾದ ಕರ್ತನನ್ನಾಗಿ ಸ್ಥಾಪಿಸುವುದು ಮತ್ತು ಸಕಲ ಸಾಮರ್ಥ್ಯಗಳು, ಆನಂದಗಳು, ಬೆಂಬಲ, ವಿಧೇಯತೆಯಲ್ಲಿ ಸ್ಥಿರವಾಗಿ ನಿಲ್ಲುವುದು, ಪಾವಿತ್ರ್ಯತೆ, ಸಕಲ ವಸ್ತುಗಳಿಂದ ಉತ್ತವಾದ್ದನ್ನು ಪಡೆಯುವುದು, ಪ್ರಪಂಚದಲ್ಲಿ ಮತ್ತು ಧರ್ಮದಲ್ಲಿ ಎಲ್ಲಾ ಒಳ್ಳೆಯತನಗಳು ಲಭಿಸುವುದು ಅಲ್ಲಾಹನಿಂದಲೇ ಎಂದು ಘೋಷಿಸುವುದು ಮತ್ತು ಅವುಗಳನ್ನೆಲ್ಲ ಪಡೆಯಲು, ಸಾಮರ್ಥ್ಯ ಪಡೆಯಲು ಅನವಿಂದಲೇ ಸಹಾಯವನ್ನು ಯಾಚಿಸಬೇಕು ಹೀಗಾಗಿ ಈ ಉದ್ದೇಶವು **ಇಯ್ಯಾಕ ನಸ್ತಈನ್** ನಲ್ಲಿ ಸಂಕ್ಷಿಪ್ತವಾಗಿ ಬಂದಿದೆ.

ಪವಿತ್ರ ಖುರ್‌ನ್‌ನ **ಎಂಟನೆಯ** ಉದ್ದೇಶವು ಸಿರಾತೆ ಮುಸ್ತಖೀಮ್‌ನ (ನೇರ ಮಾರ್ಗದ) ಸೂಕ್ಷ್ಮತೆಗಳನ್ನು ವಿವರಿಸುವುದಾಗಿದೆ ಮತ್ತು ಅದನ್ನು ಪಡೆಯುವುದಕ್ಕೆ ಒತ್ತು ನೀಡುವುದು, ದುಆ ಮತ್ತು ಪ್ರಾರ್ಥನೆಯ ಮೊರೆಹೋಗಿ ಯಾಚಿಸಬೇಕು ಹೀಗಾಗಿ ಈ ಉದ್ದೇಶವನ್ನು **ಇಹ್‌ದಿನಸ್ಸಿರಾತಲ್ ಮುಸ್ತಖೀಮ್**ನಲ್ಲಿ ಸಂಕ್ಷಿಪ್ತವಾಗಿ ಬಂದಿದೆ.

ಪವಿತ್ರ ಖುರ್‌ಆನ್‌ನ **ಒಂಬತ್ತನೇ**ಯ ಉದ್ದೇಶವು ದೇವರ ಪ್ರತಿಫಲ ಮತ್ತು ಅನುಗ್ರಹವನ್ನು ಪಡೆದ ಜನರ ಮಾರ್ಗ ಮತ್ತು ಸ್ವಭಾವವನ್ನು ವಿವರಿಸುವುದು, ಇದರಿಂದ ಸತ್ಯಾನ್ವೇಷಿಗಳ ಮನಸ್ಸು ದೃಢವಾಗಬೇಕು ಹೀಗಾಗಿ ಈ ಉದ್ದೇಶವನ್ನು **ಸಿರಾತಲ್ಲಝೀನ ಅನ್‌ಅಮ್‌ತ ಅಲೈಹಿಮ್** ನಲ್ಲಿ ಬಂದಿದೆ.

ಪವಿತ್ರ ಖುರ್‌ನ್‌ನ **ಹತ್ತನೇ** ಉದ್ದೇಶವು ದೇವರ ಕೋಪಕ್ಕೆ ಒಳಗಾದ ಜನರ ನಡವಳಿಕೆಯನ್ನು ವಿವರಿಸುವುದು. ಅಥವಾ ದಾರಿ ತಪ್ಪಿ ಬಗೆಬಗೆಯ ಬಿದ್‌ಅತ್‌ಗಳಲ್ಲಿ (ಧರ್ಮದಲ್ಲಿ ಹೊಸದನ್ನು ಆವಿಷ್ಕರಿಸುವುದು) ಬಿದ್ದವರ ಬಗ್ಗೆ ವಿವರಿಸುವುದು ಮತ್ತು ಇದರಿಂದ ಸತ್ಯಾನ್ವೇಷಿಗಳು ಅವರ ಮಾರ್ಗಗಳಿಂದ ಹೆದರಬೇಕು. ಹೀಗಾಗಿ ಈ ಉದ್ದೇಶವು **ಗೈರಿಲ್ ಮಗ್‌ಝೂಬಿ ಅಲೈಹಿಮ್ ವಲಝ್ಝಾಲ್ಲೀನ್** ನಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಇವು ಪವಿತ್ರ ಖುರ್‌ನ್‌ನಲ್ಲಿ ಪಟ್ಟಿ ಮಾಡಲಾದ ಹತ್ತು ಉದ್ದೇಶಗಳಾಗಿವೆ, ಇವುಗಳು ಎಲ್ಲಾ ಸತ್ಯಾಂಶಗಳ ಮೂಲ ತತ್ವಗಳಾಗಿವೆ. ಹೀಗೆ ಈ ಎಲ್ಲಾ ಉದ್ದೇಶಗಳು ಸೂರಾ ಫಾತಿಹಾದಲ್ಲಿ ಸಂಕ್ಷಿಪ್ತ ರೂಪದಲ್ಲಿ ಬಂದಿವೆ.

(ಬರಾಹೀನೆ ಅಹ್ಮದೀಯ, ಭಾಗ-4, ರೂಹಾನಿ ಖಝಾಈನ್, ಸಂಪುಟ-1, ಪುಟ-581, ಅಡಿಟಿಪ್ಪಣಿ ಸಂಖ್ಯೆ-11)

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gurdaspur-143516, Punjab. India. Editor: Tariq Ahmed Idris.